₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಬುಧವಾರ 04.06.2025 ಸಂಪುಟ: 10 ಸಂಚಿಕೆ: 141 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ಆರ್‌ಸಿಬಿಗೆ ಒಲಿದ ಐಪಿಎಲ್ ಟ್ರೋಫಿ | ನನಸಾದ ಕೋಟ್ಯಂತರ ಕನ್ನಡಿಗರ ಕನಸು

ಇನ್ನು ಕಪ್ ನಮ್ದು





ಅಹಮದಾಬಾದ್: ಐಪಿಎಲ್ ಇತಿಹಾಸದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಕೊನೆಗೂ ಟ್ರೋಫಿ ಎತ್ತಿ ಹಿಡಿದಿದೆ. ಅಹ್ಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಮಂಗಳವಾರ ನಡೆದ ಪಂಜಾಬ್ ಕಿಂಗ್ಸ್ ವಿರುದ್ಧದ ಫೈನಲ್ ಕಾದಾಟದಲ್ಲಿ ಅದು 6 ರನ್‌ಗಳ ಜಯ ಸಾಧಿಸಿ ಚೊಚ್ಚಲ ಐಪಿಎಲ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ಶ್ರೇಯಸ್ ಪಡೆಗೆ ಗೆಲ್ಲಲು ಆರ್‌ಸಿಬಿ 191 ರನ್‌ಗಳ ಗೆಲುವಿನ ಗುರಿ ನೀಡಿತ್ತು. ಆದರೆ ರಜತ್ ಪಾಟೀದಾರ್ ಪಡೆಯ ಬೌಲಿಂಗ್ ದಾಳಿಗೆ ತತ್ತರಿಸಿದ ಪಂಜಾಬ್ ಕೇವಲ 155 ರನ್‌ಗಳಿಗೆ ಸರ್ವಪತನ ಕಂಡು ರನ್ನರ್-ಅಪ್ ಪ್ರಶಸ್ತಿಗೆ ತೃಪ್ತಿ ಪಡೆದುಕೊಂಡಿತು.

ಪಂಜಾಬ್ ಕಿಂಗ್ಸ್ ನಾಯಕ ಶ್ರೇಯಸ್ ಅಯ್ಯರ್ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು. ಕೈಲ್ ಜೇಮಿಸನ್ ಫಿಲ್‌ಸಾಲ್ಟ್ ಅವರನ್ನು ಔಟ್ ಮಾಡುವ ಮೂಲಕ ಪಂಜಾಬ್‌ನ ನಿರ್ಧಾರವನ್ನು ಸರಿಯೆಂದು ಸಾಬೀತುಪಡಿಸಿದರು. ಸಾಲ್ಟ್ 16 ರನ್ ಗಳಿಸಿ ಔಟಾದರು. ವಿರಾಟ್ ಕೊಹ್ಲಿ ತಂಡಕ್ಕಾಗಿ 43 ರನ್ ಗಳಿಸಿದರೆ, ಮಯಾಂಕ್ ಅಗರ್ವಾಲ್ 17 ಎಸೆತಗಳಲ್ಲಿ 24 ರನ್ ಗಳಿಸಿದರು, ಅದರಲ್ಲಿ 2 ಬೌಂಡರಿ ಮತ್ತು ಒಂದು ಸಿಕ್ಸರ್ ಸೇರಿದ್ದವು. ಜಿತೇಶ್ ಶರ್ಮಾ (24) ಹಾಗೂ ರೊಮಾರಿಯೊ ಶೆಫರ್ಡ್ (17) ಅಂತಿಮ ಹಂತದಲ್ಲಿ ತಂಡಕ್ಕೆ ಆಸರೆಯಾದರು. ಕೈಲ್ ಜೇಮಿಸನ್ ಮತ್ತು ಅರ್ಶದೀಪ್ ಸಿಂಗ್ ತಲಾ 3 ವಿಕೆಟ್‌ಗಳನ್ನು ಪಡೆದರು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡವು ಸ್ಫೋಟಕ ಆರಂಭವನ್ನು ಪಡೆದುಕೊಂಡಿತು. ಆರ್‌ಸಿಬಿ ಎದುರಾಳಿಯ ವಿಕೆಟ್ ಪಡೆಯಲು ಆರಂಭದಲ್ಲಿ ಪರದಾಡಿತು. ಆದರೆ 5ನೇ ಓವರ್‌ನಲ್ಲಿ ಹೇಜಲ್‌ವುಡ್ ತಂಡಕ್ಕೆ ಮೊದಲ ತಿರುವನ್ನು ತಂದುಕೊಟ್ಟರು. 24 ರನ್ ಗಳಿಸಿದ ಪ್ರಿಯಾಂಶ್ ಔಟಾದರು. ಬಳಿಕ ಪ್ರಭ್‌ಸಿಮ್ರಾನ್ (26) ಹಾಗೂ ಜೋಶ್ ಇಂಗ್ಲಿಸ್ (39) ತಂಡಕ್ಕೆ ನೆರವಾಗಿ ಗೆಲುವಿನತ್ತ ಕೊಂಡೊಯ್ಯಲು ಪ್ರಯತ್ನಿಸಿದೂ, ಅವರ ಆಟಕ್ಕೆ ಕೃನಾಲ್ ಪಾಂಡ್ಯ ಕಡಿವಾಣ ಹಾಕಿದರು.

ಎರಡನೇ ಎಲಿಮಿನೇಟರ್‌ನಲ್ಲಿ ಹೀರೋ ಆಗಿದ್ದ ನಾಯಕ ಶ್ರೇಯಸ್ ಅಯ್ಯರ್ ಕೇವಲ 1 ರನ್‌ಗೆ ನಿರ್ಗಮಿಸಿದರು. ಬಳಿಕ ಬಂದ ಬ್ಯಾಟರ್‌ಗಳ ಪೈಕಿ ಕೊನೆಯ ಹಂತದವರೆಗೆ ಶಶಾಂಕ್ ಸಿಂಗ್ (ಅಜೇಯ 61) ಮಾತ್ರ ಹೋರಾಡಿದ್ದು ಬಿಟ್ಟರೆ, ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. ಕೊನೆಯ 6 ಎಸೆತಗಳಲ್ಲಿ ಪಂಜಾಬ್ ಗೆಲುವಿಗೆ 29 ರನ್‌ಗಳ ಅವಶ್ಯಕತೆಯಿತ್ತು. ಆದರೆ ಅಂತಿಮವಾಗಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲೊಪ್ಪಿಕೊಂಡಿತು.

ಧವನ್ ದಾಖಲೆ ಮುರಿದ ಕೊಹ್ಲಿ

ಪಂಜಾಬ್ ಕಿಂಗ್ಸ್ ವಿರುದ್ಧ ಎರಡು ಬೌಂಡರಿಗಳನ್ನು ಬಾರಿಸುವ ಮೂಲಕ ಆರ್‌ಸಿಬಿ ಮಾಜಿ ನಾಯಕ ವಿರಾಟ್ ಕೊಹ್ಲಿ ಐಪಿಎಲ್ ಟೂರ್ನಿಯಲ್ಲಿ ಅತಿ ಹೆಚ್ಚು ಬೌಂಡರಿಗಳನ್ನು ಬಾರಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಆ ಮೂಲಕ ಮಾಜಿ ಆರಂಭಿಕ ಶಿಖರ್ ಧವನ್‌ರ ದಾಖಲೆಯನ್ನು ಮುರಿದಿದ್ದಾರೆ. ಮಂಗಳವಾರದ ಫೈನಲ್ ಪಂದ್ಯದಲ್ಲಿ ಮೂರು ಬೌಂಡರಿ ಬಾರಿಸುವ ಮೂಲಕ ಕೊಹ್ಲಿ ತಮ್ಮ ಐಪಿಎಲ್ ವೃತ್ತಿ ಜೀವನದಲ್ಲಿ 770 ಬೌಂಡರಿಗಳನ್ನು ಬಾರಿಸಿದ ದಾಖಲೆಗೆ ಪಾತ್ರರಾದರು.

ಆರ್‌ಸಿಬಿಯ ಗೆಲುವಿನ ಹಾದಿ

ಪಂದ್ಯ 1
ಕೋಲ್ಕತ್ತಾ-ಆರ್‌ಸಿಬಿ
ಆರ್‌ಸಿಬಿಗೆ 7 ವಿಕೆಟ್‌ಗಳ ಗೆಲುವು

ಪಂದ್ಯ 2
ಚೆನ್ನೈ-ಆರ್‌ಸಿಬಿ
ಆರ್‌ಸಿಬಿಗೆ 50 ರನ್‌ಗಳ ಗೆಲುವು

ಪಂದ್ಯ 3
ಆರ್‌ಸಿಬಿ-ಗುಜರಾತ್
ಗುಜರಾತ್‌ಗೆ 8 ವಿಕೆಟ್‌ಗಳ ಗೆಲುವು

ಪಂದ್ಯ 4
ಮುಂಬೈ-ಆರ್‌ಸಿಬಿ
ಆರ್‌ಸಿಬಿಗೆ 12 ರನ್ ಗಳಿಂದ ಗೆಲುವು

ಪಂದ್ಯ 5
ಆರ್‌ಸಿಬಿ-ಡೆಲ್ಲಿ
ಡೆಲ್ಲಿಗೆ 6 ವಿಕೆಟ್ ಗಳಿಂದ ಗೆಲುವು

ಪಂದ್ಯ 6
ರಾಜಸ್ಥಾನ-ಆರ್‌ಸಿಬಿ
ಆರ್‌ಸಿಬಿಗೆ 9 ವಿಕೆಟ್ ಗಳಿಂದ ಗೆಲುವು

ಪಂದ್ಯ 7
ಆರ್‌ಸಿಬಿ-ಪಂಜಾಬ್
ಪಂಜಾಬ್‌ಗೆ 5 ವಿಕೆಟ್ ಗಳಿಂದ ಗೆಲುವು

ಪಂದ್ಯ 8
ಪಂಜಾಬ್-ಆರ್‌ಸಿಬಿ
ಆರ್‌ಸಿಬಿಗೆ 7 ವಿಕೆಟ್ ಗಳಿಂದ ಗೆಲುವು

ಪಂದ್ಯ 9
ಆರ್‌ಸಿಬಿ-ರಾಜಸ್ಥಾನ
ಆರ್‌ಸಿಬಿಗೆ 11 ರನ್ ಗಳಿಂದ ಗೆಲುವು

ಪಂದ್ಯ 10
ಡೆಲ್ಲಿ-ಆರ್‌ಸಿಬಿ
ಆರ್‌ಸಿಬಿಗೆ 6 ವಿಕೆಟ್ ಗಳಿಂದ ಗೆಲುವು

ಪಂದ್ಯ 11
ಆರ್‌ಸಿಬಿ-ಚೆನ್ನೈ
ಆರ್‌ಸಿಬಿಗೆ 2 ರನ್ ಗಳಿಂದ ಗೆಲುವು

ಪಂದ್ಯ 12
ಆರ್‌ಸಿಬಿ-ಕೋಲ್ಕತ್ತಾ
ಮಳೆಯಿಂದ ಪಂದ್ಯ ರದ್ದು

ಪಂದ್ಯ 13
ಹೈದರಾಬಾದ್-ಆರ್‌ಸಿಬಿ
ಹೈದರಾಬಾದ್‌ಗೆ 42 ರನ್‌ಗಳಿಂದ ಜಯ

ಪಂದ್ಯ 14
ಲಖನೌ-ಆರ್‌ಸಿಬಿ
ಆರ್‌ಸಿಬಿಗೆ 6 ವಿಕೆಟ್ ಗಳಿಂದ ಜಯ

ಕ್ವಾಲಿಫೈಯರ್-1 15
ಆರ್‌ಸಿಬಿ-ಪಂಜಾಬ್
ಆರ್‌ಸಿಬಿಗೆ 8 ವಿಕೆಟ್ ಗಳಿಂದ ಜಯ

ಫೈನಲ್ 16
ಆರ್‌ಸಿಬಿ-ಪಂಜಾಬ್
ಆರ್‌ಸಿಬಿಗೆ 6 ರನ್ ಗಳಿಂದ ಜಯ

ಕೊಹ್ಲಿ ಭಾವುಕ

ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ಗೆಲುವು ಸಾಧಿಸುತ್ತಿದ್ದಂತೆ, ತಂಡದ ಸ್ಟಾರ್ ಆಟಗಾರ ಮತ್ತು ಕಳೆದ ಹದಿನೆಂಟು ವರ್ಷಗಳಿಂದ ತಂಡಕ್ಕಾಗಿ ಆಡುತ್ತಿದ್ದ ವಿರಾಟ್ ಕೊಹ್ಲಿ ಭಾವುಕರಾದರು. ದೀರ್ಘಕಾಲದ ಕನಸು ನನಸಾದ ಕ್ಷಣದಲ್ಲಿ ಅವರು ಕಣ್ಣೀರು ಹಾಕಿದರು. ಬೌಂಡರಿ ಲೈನ್ ಬಳಿ ನಿಂತಿದ್ದ ಕೊಹ್ಲಿ, ಪಂದ್ಯ ಮುಗಿಯುತ್ತಿದ್ದಂತೆ ತಮ್ಮ ಕೈಗಳನ್ನು ತಲೆಯ ಮೇಲೆ ಇಟ್ಟುಕೊಂಡು ಕಣ್ಣುಗಳಲ್ಲಿ ನೀರು ತುಂಬಿಕೊಂಡು ಭಾವುಕರಾದರು.

ಸ್ಕೋರ್ ಬೋರ್ಡ್

190/9 (20 ಓವರ್)

ಆರ್‌ಸಿಬಿ		ರನ್	ಎಸೆತ
ಸಾಲ್ಟ್	ಕಾಟ್: ಅಯ್ಯರ್, ಜೇಮಿಸನ್	16	9
ಕೊಹ್ಲಿ	ಕಾಟ್ ಆ್ಯಂಡ್ ಬೌಲ್ಡ್: ಒಮರ್ಜೈ	43	35
ಮಾಯಾಂಕ್	ಕಾಟ್: ಅರ್ಶದೀಪ್ ಬೌಲರ್: ಚಾಹಲ್	24	18
ಪಾಟಿದಾರ್	ಎಲ್‌ಬಿಡಬ್ಲ್ಯು-ಬೌಲರ್: ಜೇಮಿಸನ್	26	16
ಲಿವಿಂಗ್‌ಸ್ಟೋನ್	ಎಲ್ಬಿಡಬ್ಲ್ಯು-ಬೌಲರ್: ಜೇಮಿಸನ್	25	15
ಜಿತೇಶ್	ಬೌಲ್ಡ್-ಬೌಲರ್: ವೈಶಾಕ್	24	10
ಶೆಫರ್ಡ್	ಎಲ್‌ಬಿಡಬ್ಲ್ಯುಯೂ-ಬೌಲರ್: ಅರ್ಶದೀಪ್	17	9
ಕೃನಾಲ್	ಕಾಟ್: ಶ್ರೇಯಸ್, ಬೌಲರ್: ಅರ್ಷದೀಪ್	4	5
ಭುವನೇಶ್ವರ್	ಕಾಟ್: ಆರ್ಯ, ಬೌಲರ್: ಅರ್ಷದೀಪ್	1	2
ದಯಾಳ್	ನಾಟೌಟ್	1	1

ಪಂಜಾಬ್ ಕಿಂಗ್ಸ್	ಓವರ್	ರನ್	ವಿಕೆಟ್
ಅರ್ಷದೀಪ್	4	40	3
ಜೇಮಿಸನ್	4	48	3
ಒಮರ್ಜೈ	4	35	1
ವಿ.ವೈಶಾಕ್	4	30	1
ಚಹಾಲ್	4	37	1

ರಾಯಲ್ ಚಾಲೆಂಜರ್ಸ್ ಬೆಂಗಳೂರು	ಓವರ್	ರನ್	ವಿಕೆಟ್
ಭುವನೇಶ್ವರ್	4	38	2
ದಯಾಳ್	3	18	1
ಹೇಜಲ್‌ವುಡ್	4	54	1
ಕೃಣಾಲ್	4	17	2
ಸುಯಶ್	2	19	0
ಶೆಫರ್ಡ್	3	30	1

184/7 (20 ಓವರ್)

ಪಂಜಾಬ್ ಕಿಂಗ್ಸ್		ರನ್	ಎಸೆತ
ಪ್ರಿಯಾಂಶ್	ಕಾಟ್: ಸಾಲ್ಟ್, ಬೌಲರ್: ಹೇಜಲ್‌ವುಡ್	24	19
ಪ್ರಭ್‌ಸಿಮ್ರಾನ್	ಕಾಟ್: ಭುವನೇಶ್ವರ್, ಬೌಲರ್: ಕೃಣಾಲ್	26	22
ಜೋಶ್‌ಇಂಗ್ಲಿಸ್	ಕಾಟ್: ಲಿವಿಂಗ್‌ಸ್ಟೋನ್, ಬೌಲರ್: ಕೃಣಾಲ್	39	23
ಶ್ರೇಯಸ್	ಕಾಟ್: ಶರ್ಮಾ, ಬೌಲರ್: ಶೆಫರ್ಡ್	1	2
ವಧೇರಾ	ಕಾಟ್: ಪಾಂಡ್ಯ, ಬೌಲರ್: ಭುವನೇಶ್ವರ್	15	18
ಶಶಾಂಕ್	ನಾಟೌಟ್	61	30
ವಸ್ಟೊಯಿನಿಸ್	ಕಾಟ್: ದಯಾಳ್, ಬೌಲರ್: ಭುವನೇಶ್ವರ್	6	2
ಒರ್ಮಜೈ	ಕಾಟ್: ಭಾಂಡಗೆ, ಬೌಲರ್: ದಯಾಳ್	1	2
ಜೇಮಿಸನ್	ನಾಟೌಟ್	0	2

5 ವರ್ಷಗಳಲ್ಲಿ 8ನೇ ಫೈನಲ್ ಗೆಲುವು ಆರ್‌ಸಿಬಿಗೂ ಅದೃಷ್ಟ ತಂದ ಆಟಗಾರ

ಅಹಮದಾಬಾದ್: 18ನೇ ವರ್ಷ ಆರ್‌ಸಿಬಿ ಐಪಿಎಲ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ತಂಡದ ವೇಗದ ಬೌಲರ್ ಜೋಶ್ ಹೇಜಲ್‌ವುಡ್‌ನ ತನ್ನ ಅಜೇಯ ಫೈನಲ್‌ಗಳ ವಿಜಯದ ದಾಖಲೆಯನ್ನು ಮಂಗಳವಾರವೂ ಮುಂದುವರಿಸಿದ್ದಾರೆ.

ಆಸ್ಟ್ರೇಲಿಯಾದ ವೇಗದ ಬೌಲರ್ ಹ್ಯಾಜಲ್‌ವುಡ್ ಅವರ ಸ್ಥಿರ ಪ್ರದರ್ಶನವು ಆರ್‌ಸಿಬಿಗೆ ಈ ಸಲದ ನಿರ್ಣಾಯಕ ಪಂದ್ಯದಲ್ಲಿ ದೊಡ್ಡ ಆತ್ಮವಿಶ್ವಾಸವನ್ನು ತಂದಿತ್ತು. ಇದುವರೆಗೆ ಆಡಿರುವ ವಿವಿಧ ಟೂರ್ನಿಗಳ ಫೈನಲ್‌ಗಳಲ್ಲಿ ಅವರಿದ್ದ ತಂಡ ಫೈನಲ್‌ನಲ್ಲಿ ಜಯ ಗಳಿಸಿದೆ.

- **2010ರ ಅಂಡರ್-19 ವಿಶ್ವಕಪ್ ಫೈನಲ್ (ಆಸ್ಟ್ರೇಲಿಯಾ ವಿರುದ್ಧ ಪಾಕಿಸ್ತಾನ)**
  ಪ್ರದರ್ಶನ: 8.4 ಓವರ್‌ಗಳಲ್ಲಿ 30 ರನ್‌ಗೆ 4 ವಿಕೆಟ್ ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 208 ರನ್ ಗಳ ಗುರಿ ನೀಡಿತ್ತು. ಹೇಜಲ್‌ವುಡ್‌ನ ಮಾರಕ ಬೌಲಿಂಗ್‌ನಿಂದ ಪಾಕಿಸ್ತಾನ 82 ರನ್‌ಗೆ ಆಲೌಟ್ ಆಗಿತ್ತು.
  ಫಲಿತಾಂಶ: ಆಸ್ಟ್ರೇಲಿಯಾ ಚಾಂಪಿಯನ್.
- **2012 ಚಾಂಪಿಯನ್ಸ್ ಲೀಗ್ ಟಿ-20 ಫೈನಲ್**
  ಪ್ರದರ್ಶನ: 4 ಓವರ್‌ಗಳಲ್ಲಿ 22 ರನ್‌ಗೆ 3 ವಿಕೆಟ್ ಲಯನ್ಸ್ ತಂಡವನ್ನು 121 ರನ್‌ಗೆ ನಿಯಂತ್ರಿಸಲು ಹೇಜಲ್‌ವುಡ್ ಪ್ರಮುಖ ಪಾತ್ರವಹಿಸಿದರು. ಈ ಪಂದ್ಯವನ್ನ ಸಿಕ್ಸರ್ 10 ವಿಕೆಟ್‌ಗಳಿಂದ ಗೆದ್ದಿತ್ತು.
  ಫಲಿತಾಂಶ: ಸಿಡ್ನಿ ಸಿಕ್ಸರ್ಸ್ ಚಾಂಪಿಯನ್.
- **2014 ಶೆಫೀಲ್ಡ್ ಶೀಲ್ಡ್ ಫೈನಲ್ (ನ್ಯೂ ಸೌತ್ ವೇಲ್ಸ್)**
  ಪ್ರದರ್ಶನ: 22 ಓವರ್‌ಗಳಲ್ಲಿ 50 ರನ್‌ಗೆ 6 ವಿಕೆಟ್ ಪಂದ್ಯ ಡ್ರಾ ಆದರೂ, ಪಾಯಿಂಟ್ಸ್ ಟೇಬಲ್‌ನಲ್ಲಿ ಅಗ್ರಸ್ಥಾನದಿಂದ ನ್ಯೂ ಸೌತ್ ವೇಲ್ಸ್ ಚಾಂಪಿಯನ್‌ಆಯಿತು.
  ಫಲಿತಾಂಶ: ನ್ಯೂ ಸೌತ್ ವೇಲ್ಸ್ ಚಾಂಪಿಯನ್.
- **2019-20 ಬಿಗ್ ಬ್ಯಾಷ್ ಲೀಗ್ ಫೈನಲ್ (ಸಿಡ್ನಿ ಸಿಕ್ಸರ್ಸ್)**
  ಪ್ರದರ್ಶನ: 4 ಓವರ್‌ಗಳಲ್ಲಿ 18 ರನ್‌ಗೆ 3 ವಿಕೆಟ್
  ಫಲಿತಾಂಶ: ಸಿಡ್ನಿ ಸಿಕ್ಸರ್ಸ್ ಚಾಂಪಿಯನ್.
- **2021 ಐಪಿಎಲ್ ಫೈನಲ್ (ಚೆನ್ನೈ-ಕೋಲ್ಕತ್ತಾ)**
  ಪ್ರದರ್ಶನ: 4 ಓವರ್‌ಗಳಲ್ಲಿ 29 ರನ್‌ಗೆ 2 ವಿಕೆಟ್
  ಫಲಿತಾಂಶ: ಚೆನ್ನೈ ಚಾಂಪಿಯನ್.
- **2021 ಟಿ20 ವಿಶ್ವಕಪ್ ಫೈನಲ್ (ಆಸ್ಟ್ರೇಲಿಯಾ-ನ್ಯೂಜಿಲೆಂಡ್)**
  ಪ್ರದರ್ಶನ: 4 ಓವರ್‌ಗಳಲ್ಲಿ 16 ರನ್‌ಗೆ 3 ವಿಕೆಟ್
  ಫಲಿತಾಂಶ: ಆಸ್ಟ್ರೇಲಿಯಾ ಚಾಂಪಿಯನ್
- **2023 ಏಕದಿನ ವಿಶ್ವಕಪ್ ಫೈನಲ್ (ಆಸ್ಟ್ರೇಲಿಯಾ-ಭಾರತ)**
  ಪ್ರದರ್ಶನ: 10 ಓವರ್‌ಗಳಲ್ಲಿ 60 ರನ್‌ಗೆ 2 ವಿಕೆಟ್
  ಫಲಿತಾಂಶ: ಆಸ್ಟ್ರೇಲಿಯಾ ಚಾಂಪಿಯನ್
- **2025 ಐಪಿಎಲ್ (ಆರ್‌ಸಿಬಿ-ಪಂಜಾಬ್ ಕಿಂಗ್ಸ್)**
  ಪ್ರದರ್ಶನ: 54 ರನ್ ನೀಡಿ 1 ವಿಕೆಟ್ ಪಡೆದರೂ, ಟೂರ್ನಿಯಲ್ಲಿ ಒಟ್ಟು 12 ಪಂದ್ಯಗಳಲ್ಲಿ 22 ವಿಕೆಟ್ ಪಡೆದು ಟ್ರೋಫಿ ಗೆಲ್ಲಲು ಪ್ರಮುಖ ಪಾತ್ರ
  ಫಲಿತಾಂಶ: ಆರ್‌ಸಿಬಿ ಚಾಂಪಿಯನ್

ಪದಾರ್ಪಣೆಯ ಐಪಿಎಲ್ ಆವೃತ್ತಿಯಲ್ಲೇ ಗರಿಷ್ಠ ರನ್ | ಒಟ್ಟು 475 ರನ್ ಗಳಿಕೆ

ಪ್ರಿಯಾಂಶ್ ಆರ್ಯ ದಾಖಲೆ

ಅಹಮದಾಬಾದ್: ಹಾಲಿ ಐಪಿಎಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಪ್ರತಿನಿಧಿಸಿರುವ ಪ್ರಿಯಾಂಶ್ ಆರ್ಯ ಅಪರೂಪದ ದಾಖಲೆಯೊಂದನ್ನು ನಿರ್ಮಿಸಿದ್ದಾರೆ.

ಪಂಜಾಬ್ ಕಿಂಗ್ಸ್ ತಂಡದ ಪರ ಆರಂಭಿಕರಾಗಿ ಕಣಕ್ಕಿಳಿದ ಪ್ರಿಯಾಂಶ್ ಆರ್ಯ ಮಂಗಳವಾರ 19 ಎಸೆತಗಳಲ್ಲಿ 4 ಬೌಂಡರಿ ಸಹಿತ 24 ರನ್ ಕಲೆ ಹಾಕಿದರು, ಆ ಮೂಲಕ ಹಾಲಿ ಐಪಿಎಲ್ ಟೂರ್ನಿಯಲ್ಲಿ ಅಪರೂಪದ ದಾಖಲೆಗೆ ಪಾತ್ರರಾದರು. ಹಾಲಿ ಟೂರ್ನಿಯಲ್ಲಿ ಅವರು ತಮ್ಮ ರನ್ ಗಳಿಕೆಯನ್ನು 475ಕ್ಕೆ ಏರಿಸಿಕೊಂಡರು.

ಪದಾರ್ಪಣೆಯ ಐಪಿಎಲ್ ಆವೃತ್ತಿಯಲ್ಲೇ ಗರಿಷ್ಠ ರನ್ ಕಲೆಹಾಕಿದ ಭಾರತದ ಬ್ಯಾಟರ್ ಎಂಬ ಕೀರ್ತಿಗೆ ಭಾಜನರಾದರು. ಇದಕ್ಕೂ ಮೊದಲು 2020ರಲ್ಲಿ ದೇವದತ್ ಪಡಿಕ್ಕಲ್ 473 ರನ್ ಗಳೊಂದಿಗೆ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರು, ಇದೀಗ ಪ್ರಿಯಾಂಶ್ ಆರ್ಯ ಅಗ್ರಸ್ಥಾನಕ್ಕೇರಿದ್ದಾರೆ.

ಉಳಿದಂತೆ ಈ ಪಟ್ಟಿಯಲ್ಲಿ ಶ್ರೇಯಸ್ ಅಯ್ಯರ್ 3ನೇ ಸ್ಥಾನದಲ್ಲಿದ್ದು, 2015ರ ಆವೃತ್ತಿಯಲ್ಲಿ ಪದಾರ್ಪಣೆ ಮಾಡಿದ್ದ ಅಯ್ಯರ್ ಆ ಟೂರ್ನಿಯಲ್ಲಿ 439 ರನ್ ಕಲೆ ಹಾಕಿದ್ದರು. ಬಳಿಕ 2022ರಲ್ಲಿ ಪದಾರ್ಪಣೆ ಮಾಡಿದ್ದ ತಿಲಕ್ ವರ್ಮಾ 397 ರನ್, 2017ರಲ್ಲಿ ಪದಾರ್ಪಣೆ ಮಾಡಿದ್ದ ರಾಹುಲ್ ತ್ರಿಪಾಠಿ 391 ಮತ್ತು 2021ರಲ್ಲಿ ವೆಂಕಟೇಶ್ ಅಯ್ಯರ್ 370 ರನ್ ಕಲೆ ಹಾಕಿದ್ದರು.

ಕನ್ನಡಿಗನಿಗೊಲಿದ ಕ್ಯಾಪ್

ಪರ್ಪಲ್ ಕ್ಯಾಪ್ ಭಾರತದ ವೇಗದ ಬೌಲರ್ ಕನ್ನಡಿಗ ಪ್ರಸಿದ್ಧ್ ಕೃಷ್ಣ ಪಾಲಾಗಿದೆ. ಪ್ರಸಿದ್ಧ್ ಈ ಸೀಸನ್ ಉದ್ದಕ್ಕೂ ಅದ್ಭುತ ಬೌಲಿಂಗ್ ಮಾಡಿ ಅಭಿಮಾನಿಗಳ ಹೃದಯ ಗೆದಿದ್ದರು. ಈ ಆವೃತ್ತಿಯಲ್ಲಿ ಆಡಿದ 15 ಪಂದ್ಯಗಳಲ್ಲಿ ಪ್ರಸಿದ್ಧ್ 19.52 ರ ಸರಾಸರಿಯಲ್ಲಿ 25 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಗುಜರಾತ್ ಟೈಟನ್ಸ್ ಪರ ಪ್ರಮುಖ ವೇಗಿಯಾಗಿ ಗುರುತಿಸಿಕೊಂಡಿದ್ದ ಪ್ರಸಿದ್ಧ್ ಕೃಷ್ಣ ಹಲವು ಪಂದ್ಯಗಳನ್ನು ಏಕಾಂಗಿಯಾಗಿ ಗೆಲ್ಲಿಸಿಕೊಟ್ಟಿದ್ದರು. ಗುಜರಾತ್ ತಂಡಕ್ಕೆ ಫೈನಲ್‌ಗೇರಲು ಸಾಧ್ಯವಾಗದಿದ್ದರೂ, ಪ್ಲೇಆಫ್ ತಲುಪುವಲ್ಲಿ ಯಶಸ್ವಿಯಾಯಿತು, ಆದರೆ ಎಲಿಮಿನೇಟರ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಸೋತು ಟೂರ್ನಿಯಿಂದ ಹೊರಬಿದ್ದಿತು.

ಫಿಲ್ ಸಾಲ್ಟ್ ಕ್ರೀಡಾ ಸ್ಫೂರ್ತಿ

ಅಹಮದಾಬಾದ್: 9 ವರ್ಷಗಳ ನಂತರ ಆರ್‌ಸಿಬಿ ತಂಡವು ಇಲ್ಲಿ ಮಂಗಳವಾರ ಐಪಿಎಲ್ ಫೈನಲ್ ಪಂದ್ಯವನ್ನಾಡಿದ್ದು, ತಂಡದ ಸ್ಟಾರ್ ಆಟಗಾರ ಫಿಲ್ ಸಾಲ್ಟ್ ತಂಡಕ್ಕೆ ಮತ್ತೆ ತಮ್ಮ ನಿಯತ್ತು ತೋರಿಸಿದ್ದಾರೆ. ಐಪಿಎಲ್ ಫೈನಲ್ ನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸುತ್ತಿರುವ ಆರ್ ಸಿಬಿ ತಂಡಕ್ಕೆ ಫಿಲ್ ಸಾಲ್ಟ್ ಲಭ್ಯತೆ ಕುರಿತು ಆತಂಕ ಇತ್ತು. ಲಂಡನ್‌ನಲ್ಲಿ ಫಿಲ್ ಸಾಲ್ಟ್ ಪತ್ನಿ ಮಗುವಿಗೆ ಜನ್ಮ ನೀಡಿದ ಕಾರಣಕ್ಕಾಗಿ ಪತ್ನಿ ಮತ್ತು ಮಗು ನೋಡಲು ಫಿಲ್ ಸಾಲ್ಟ್ ಲಂಡನ್ ಗೆ ತೆರಳಿಸಿದ್ದರು. ಆದರೆ 6817 ಕಿ.ಮೀ ಪ್ರಯಾಣ ಮಾಡಿ ಸೋಮವಾರ ಮಧ್ಯರಾತ್ರಿ 3 ಗಂಟೆ ಹೊತ್ತಿಗೆ ಅವರು ಆರ್‌ಸಿಬಿ ತಂಡ ಸೇರಿಕೊಂಡಿದ್ದಾರೆ. ಆ ಮೂಲಕ ಐಪಿಎಲ್ ಫೈನಲ್ ಪಂದ್ಯಕ್ಕೂ ಮುನ್ನ, ಆರ್‌ಸಿಬಿ ಸ್ಟಾರ್ ಬ್ಯಾಟ್ಸ್‌ಮನ್ ಫಿಲ್ ಸಾಲ್ಟ್ ತೋರಿದ ಬದ್ಧತೆ ಮತ್ತು ಕ್ರೀಡಾಸ್ಫೂರ್ತಿ ಎಲ್ಲರ ಹೃದಯ ಗೆದ್ದಿದೆ.

2024,2025 ಐಪಿಎಲ್ ಫೈನಲ್ ಆಡಿದವರು

ಅಹಮದಾಬಾದ್: 2024ನೇ ಆವೃತ್ತಿಯ ಐಪಿಎಲ್ ಫೈನಲ್ ತಂಡದ ಭಾಗವಾಗಿದ್ದ ಐವರು ಆಟಗಾರರು ಮಂಗಳವಾರ ಇಲ್ಲಿ ನಡೆದ ಹದಿನೆಂಟನೇಯ ಐಪಿಎಲ್ ಫೈನಲ್‌ನಲ್ಲೂ ಕಾಣಿಸಿಕೊಂಡರು.

ಭುವನೇಶ್ವರ್ ಕುಮಾರ್: ಐಪಿಎಲ್ 2024ರ ಫೈನಲ್‌ನಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಿದ್ದವು. ಈ ವೇಳೆ ಹೈದರಾಬಾದ್ ತಂಡದ ಪರ ಭುವನೇಶ್ವಕರ್ ಕುಮಾರ್ ಕಣಕ್ಕಿಳಿದಿದ್ದರು, ಈ ಅಲ ಅವರು ಆರ್‌ಸಿಬಿ ಪರ ಫೈನಲ್ ಆಡಿದ್ದಾರೆ.



ಮಯಾಂಕ್ ಅಗರ್ವಾಲ್: ಐಪಿಎಲ್ 2024ರಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡದ ಭಾಗವಾಗಿದ್ದ ಮಯಾಂಕ್ ಅಗರ್ವಾಲ್ ಈ ಬಾರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದಾರೆ. ಅದರಂತೆ ಈ ಬಾರಿ ಮಯಾಂಕ್ ಅಗರ್ವಾಲ್ ಆರ್‌ಸಿಬಿ ಪರ ಫೈನಲ್ ಪಂದ್ಯವಾಡಿದ್ದಾರೆ.

ಸುಯಶ್ ಶರ್ಮಾ: ಐಪಿಎಲ್ 2024 ರ ಚಾಂಪಿಯನ್ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದಲ್ಲಿ ಸುಯಶ್ ಶರ್ಮಾ ಕೂಡ ಇದ್ದರು. ಆದರೆ ಈ ಬಾರಿ ಸುಯಶ್ ಆರ್‌ಸಿಬಿ ಪರ ಪ್ರಮುಖ ಸ್ಪಿನ್ನರ್ ಆಗಿ ಕಾಣಿಸಿಕೊಂಡಿದ್ದಾರೆ. ಅದರಂತೆ ಪಂಜಾಬ್ ಕಿಂಗ್ಸ್ ವಿರುದ್ಧದ ಫೈನಲ್ ಪಂದ್ಯದಲ್ಲಿ ಸುಯಶ್ ಕೂಡ ಕಣಕ್ಕಿಳಿದಿದ್ದಾರೆ.

ಫಿಲ್ ಸಾಲ್ಟ್: ಐಪಿಎಲ್ 2024ರಲ್ಲಿ ಫಿಲ್ ಸಾಲ್ಟ್ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಭಾಗವಾಗಿದ್ದರು. ಈ ಬಾರಿ ಆರ್‌ಸಿಬಿಗೆ ಬಂದಿರುವ ಸಾಲ್ಟ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಫೈನಲ್ ಗೇರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಅದರಂತೆ ಇಂದು ನಡೆಯಲಿರುವ ಫೈನಲ್ ಫೈಟ್‌ನಲ್ಲಿ ಸಾಲ್ಟ್ ಕೂಡ ಕಣಕ್ಕಿಳಿದಿದ್ದಾರೆ.

ಶ್ರೇಯಸ್ ಅಯ್ಯರ್: ಐಪಿಎಲ್ 2024ರಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಚಾಂಪಿಯನ್ ಪಟ್ಟಕ್ಕೇರಿಸಿದ್ದ ಶ್ರೇಯಸ್ ಅಯ್ಯರ್, ಇದೀಗ ಪಂಜಾಬ್ ಕಿಂಗ್ಸ್ ತಂಡದ ನಾಯಕರಾಗಿರುವ ಅಯ್ಯರ್ ಮತ್ತೊಮ್ಮೆ ಫೈನಲ್ ಆಡಿದ್ದಾರೆ, ಆ ಮೂಲಕ ಪಂಜಾಬ್ ಕಿಂಗ್ಸ್ ತಂಡದ ಆಧಾರಸ್ತಂಭವಾದರು.

ಆಡಿದ 16 ಪ್ಲೇ ಆಫ್ ಪಂದ್ಯಗಳ ಪೈಕಿ 6ರಲ್ಲಿ ಗೆಲುವಿನ ಸಾಧನೆ

ಆರ್‌ಸಿಬಿ: ಇದುವರೆಗಿನ ಪ್ಲೇ ಆಫ್ ಪಂದ್ಯಗಳ ಹಿನ್ನೋಟ

ಅಹಮದಾಬಾದ್: ಆರ್‌ಸಿಬಿ ತಂಡವು ಐಪಿಎಲ್‌ನಲ್ಲಿ 16 ಪ್ಲೇ ಆಫ್ ಪಂದ್ಯಗಳನ್ನು ಆಡಿದ್ದು, ಕೊನೆಗೂ ಮಂಗಳವಾರ ಕೈಗೆಟುಕಿದ ಟ್ರೋಫಿ ಅಭಿಮಾನಿಗಳನ್ನು ಸಂತಸದ ಕಡಲಲ್ಲಿ ತೇಲಿಸಿದೆ. ಬೆಂಗಳೂರು ತಂಡವು 3 ಬಾರಿ (2009, 2011, 2016) ಫೈನಲ್ ಪ್ರವೇಶಿಸಿದ್ದರೂ ಒಮ್ಮೆಯೂ ಗೆಲ್ಲದ ಕೊರಗು ಈ 2025ರ ಟೂರ್ನಿಯಲ್ಲಿ ದೂರವಾಗಿದೆ.

- **2009: ಸೆಮಿಫೈನಲ್‌ನಲ್ಲಿ ಚೆನ್ನೈ ವಿರುದ್ಧ 6 ವಿಕೆಟ್ ಗಳ ಗೆಲುವು**
  ಫೈನಲ್‌ನಲ್ಲಿ ಡೆಕ್ಕನ್ ಚಾರ್ಜರ್ಸ್ ವಿರುದ್ಧ 6 ರನ್ ಗಳಿಂದ ಸೋಲು
- **2010: ಸೆಮಿಫೈನಲ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ 35 ರನ್‌ಗಳ ಸೋಲು**
- **2011: ಕ್ವಾಲಿಫೈಯರ್ 1ರಲ್ಲಿ ಚೆನ್ನೈ ವಿರುದ್ಧ 43 ರನ್‌ಗಳ ಸೋಲು**
  ಕ್ವಾಲಿಫೈಯರ್ 2ರಲ್ಲಿ ಮುಂಬೈ ಇಂಡಿ ಯನ್ಸ್ ವಿರುದ್ಧ 4 ವಿಕೆಟ್‌ಗಳಲ್ಲಿ ಗೆಲುವು
  ಫೈನಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 58 ರನ್‌ಗಳ ಸೋಲು.
- **2015: ಎಲಿಮಿನೇಟರ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ 71 ರನ್?ಗಳ ಗೆಲುವು ಕ್ವಾಲಿಫೈಯರ್-2 ರಲ್ಲಿ ಸಿಎಸ್‌ಕೆ ವಿರುದ್ಧ 3 ವಿಕೆಟ್‌ಗಳ ಸೋಲು**
- **2016: ಕ್ವಾಲಿಫೈಯರ್-1ರಲ್ಲಿ ಗುಜರಾತ್ ವಿರುದ್ಧ 4 ವಿಕೆಟ್‌ಗಳ ಗೆಲುವು**
  ಫೈನಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 8 ರನ್‌ಗಳ ಸೋಲು.
- **2020: ಎಲಿಮಿನೇಟರ್‌ನಲ್ಲಿ ಸನ್‌ರೈಸರ್ಸ್ ವಿರುದ್ಧ 6 ವಿಕೆಟ್‌ಗಳ ಸೋಲು**
- **2021: ಎಲಿಮಿನೇಟರ್‌ನಲ್ಲಿ ಕೋಲ್ಕತ್ತಾ ವಿರುದ್ಧ 4 ವಿಕೆಟ್‌ಗಳ ಸೋಲು.**
- **2022: ಎಲಿಮಿನೇಟರ್‌ನಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ 14ರನ್‌ಗಳ ಗೆಲುವು**
  ಕ್ವಾಲಿಫೈಯರ್-2ರಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ 7 ವಿಕೆಟ್‌ಗಳ ಸೋಲು.
- **2024: ಎಲಿಮಿನೇಟರ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ 4 ವಿಕೆಟ್‌ಗಳ ಸೋಲು.**
- **2025: ಕ್ವಾಲಿಫೈಯರ್-1 ರಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಗೆಲುವು**
- **2025: ಫೈನಲ್-ಪಂಜಾಬ್ ವಿರುದ್ಧ ಆರ್‌ಸಿಬಿ ಗೆಲುವು.**

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ನೀವು ಈಗ ಮಾಡಿದ ಪ್ರಮಾದಕ್ಕಿಂತ, ಮುಂದೇನು ಮಾಡುತ್ತೀರಿ ಎಂಬುದು ಬಹಳ ಮುಖ್ಯ. ಆಗಿದ್ದು ಆಗಿ ಹೋಯಿತು, ಅದಾದ ಬಳಿಕ ನಾವೇನು ಮಾಡುತ್ತೇವೆ ಎಂಬುದಷ್ಟೇ ನಮ್ಮನ್ನು ಕಾಡಬೇಕು. ಎಲ್ಲರ ಗಮನವೂ ನಮ್ಮ ಮುಂದಿನ ಹೆಜ್ಜೆಯ ಬಗ್ಗೆಯೇ ಇರುತ್ತದೆ.

ವಕ್ರತುಂಡೋಕ್ತಿ

ಸಮಯಕ್ಕೆ ಬೆಲೆ ಕೊಡದಿರುವುದು ಎಲ್ಲ ಕೆಟ್ಟ ಗುಣಗಳ ತಾಯಿ ಇದ್ದಂತೆ. ತಮ್ಮ ಗುಣವನ್ನು ಬದಲಿಸಿಕೊಳ್ಳದೇ ಇರಲು ತಾಯಿಯನ್ನು ಗೌರವಿಸುವುದೇ ಕಾರಣ.

ಐಪಿಎಲ್ ಫೈನಲ್ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಬಗ್ಗುಬಡಿದು ಕಪ್ ಮುಡಿಗೇರಿಸಿಕೊಂಡ ಆರ್‌ಸಿಬಿ ತಂಡಕ್ಕೆ ಅಭಿನಂದನೆಗಳು. ಇಡೀ ಪಂದ್ಯಾವಳಿಯಲ್ಲಿ ಒಂದು ತಂಡವಾಗಿ ಸಂಘಟಿತ ಪ್ರದರ್ಶನ ನೀಡುವ ಮೂಲಕ ಕೋಟ್ಯಂತರ ಅಭಿಮಾನಿಗಳ ಕನಸನ್ನು ಈ ದಿನ ಆರ್‌ಸಿಬಿಯ ಹುಡುಗರು ನನಸಾಗಿಸಿದ್ದಾರೆ. ಆರ್‌ಸಿಬಿಯ ಈ ವಿಜಯದಲ್ಲಿ ವಿರಾಟ್ ಕೊಹ್ಲಿಯ 18 ವರ್ಷಗಳ ಕಾಲದ ತಪಸ್ಸಿದೆ, ನಿಷ್ಠೆ, ಬದ್ಧತೆಯಿದೆ. ಬೌಲಿಂಗ್, ಬ್ಯಾಟಿಂಗ್, ಫೀಲ್ಡಿಂಗ್ ಹೀಗೆ ಎಲ್ಲಾ ವಿಭಾಗದಲ್ಲೂ ಆರ್‌ಸಿಬಿ ಪ್ರತಿ ಆಟಗಾರರು ಚಾಂಪಿಯನ್ ಪ್ರದರ್ಶನ ನೀಡಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಇದು ಇತಿಹಾಸ ಸೃಷ್ಟಿಸಿದ ದಿನ.. ಕೊನೆಯದಾಗಿ, ಈ ಸಲ ಕಪ್ ನಮ್ದೇ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

₹370ಕ್ಕೆ — ನರೇಗಾ ಕೂಲಿ ಹೆಚ್ಚಳ
₹28.69 — ಕೋಟಿ ಮಾನವ ದಿನಗಳು
55 ಲಕ್ಷ — ಮಂದಿಗೆ ಉದ್ಯೋಗ
30 ಲಕ್ಷ — ಕುಟುಂಬಗಳಿಗೆ ಆಸರೆ

ನರೇಗಾ ಸಾಧನೆ

ಪ್ರಗತಿಯ ಹಾದಿಯಲ್ಲಿ ಹಳ್ಳಿಗಳು

ಸಹಾಯವಾಣಿ : 8277506000

9 ವರ್ಷಗಳ ನಂತರ ಫೈನಲ್ ಪ್ರವೇಶ, 18ನೇ ಆವೃತ್ತಿಯಲ್ಲಿ ಕೈಗೆ ಬಂದ ಕಪ್

ನಮ್ದೆ ಕಪ್

ಫೀಲ್ಡ್ ಮಾಡಿ ಸಿಕ್ತು..

ಕಳೆದ 18 ವರ್ಷಗಳಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಹಾಲಿ ಪಂದ್ಯ ಸೇರಿದಂತೆ ಒಟ್ಟು 4 ಬಾರಿ ಫೈನಲ್ ಗೇರಿದ್ದು 2009, 2011, 2016 ರಲ್ಲಿ ಸೋಲು ಕಂಡಿತ್ತು. ಈ ಪೈಕಿ ನಾಲ್ಕೂ ಬಾರಿಯೂ ಚೇಸಿಂಗ್ ಮಾಡಿತ್ತು. ಆದರೆ ನಾಲ್ಕೂ ಬಾರಿಯೂ ಸೋತಿತ್ತು. ಆದರೆ ಈ ಬಾರಿ ಆರ್‌ಸಿಬಿ ಮೊದಲು ಬ್ಯಾಟಿಂಗ್ ಮಾಡಿ, ಪಂಜಾಬ್ ತಂಡವನ್ನು 184 ರನ್‌ಗಳಿಗೆ ನಿಯಂತ್ರಿಸಿ ಕಪ್ ಗೆದ್ದುಕೊಂಡಿದೆ.

ಪ್ರಿಯಾಂಶ್ ದಾಖಲೆ

ಪಂಜಾಬ್ ಕಿಂಗ್ಸ್ ತಂಡವನ್ನು ಪ್ರತಿನಿಧಿಸಿರುವ ಪ್ರಿಯಾಂಶ್ ಆರ್ಯ ತಂಡದ ಪರ ಆರಂಭಿಕರಾಗಿ ಕಣಕ್ಕಿಳಿದು 19 ಎಸೆತಗಳಲ್ಲಿ 4 ಬೌಂಡರಿ ಸಹಿತ 24 ರನ್ ಕಲೆ ಹಾಕಿದರು. ಹಾಲಿ ಟೂರ್ನಿಯಲ್ಲಿ ಅವರು ತಮ್ಮ ರನ್ ಗಳಿಕೆಯನ್ನು 475ಕ್ಕೆ ಏರಿಸಿಕೊಂಡರು. ಇದು ಮೊದಲ ಬಾರಿಗೆ ಐಪಿಎಲ್‌ಗೆ ಪದಾರ್ಪಣೆ ಮಾಡಿದ ಆಟಗಾರನ ಗರಿಷ್ಠ ಮೊತ್ತ.

ಕನಸು ನನಸು ಕೊಹ್ಲಿ ಕಣ್ಣೀರು

ಅಂತಿಮ ಓವರ್‌ನಲ್ಲಿ ಗೆಲ್ಲಲು ಪಂಜಾಬ್‌ಗೆ 29 ರನ್‌ಗಳ ಅಗತ್ಯವಿದ್ದಾಗ ಪಂಜಾಬ್ ತಂಡ 22 ರನ್‌ಗಳನ್ನು ಮಾತ್ರ ಗಳಿಸಿತು. ಅಂತಿಮ ಎಸೆತದಲ್ಲಿ ಗೆಲ್ಲಲು 12ರನ್ ಬೇಕಿದ್ದಾಗ ಶಶಾಂಕ್ ಸಿಂಗ್ ಸಿಕ್ಸರ್ ಸಿಡಿಸಿದರಾದರೂ 6 ರನ್‌ಗಳ ಅಂತರದಲ್ಲಿ ಆರ್‌ಸಿಬಿ ವಿರೋಚಿತ ಗೆಲುವು ಸಾಧಿಸಿತು. ಇತ್ತ ಗೆಲುವು ಖಚಿತವಾಗುತ್ತಿದ್ದಂತೆಯೇ ಮೈದಾನದಲ್ಲಿ ವಿರಾಟ್ ಕೊಹ್ಲಿ ಭಾವುಕರಾದರು. ಒಂದೆಡೆ ಇಡೀ ತಂಡ ಸಂಭ್ರಮಾಚರಣೆಯಲ್ಲಿ ಮುಳುಗಿದ್ದರೆ ವಿರಾಟ್ ಕೊಹ್ಲಿ ಮಾತ್ರ ಕಣ್ತುಂಬಿಕೊಂಡಿದ್ದರು. ಈ ವೇಳೆ ನಾಯಕ ರಜತ್ ಪಟಿದಾರ್, ಜಿತೇಶ್ ಶರ್ಮಾ, ಫಿಲ್ ಸಾಲ್ಟ್ ಸೇರಿದಂತೆ ತಂಡದ ಇತರೆ ಆಟಗಾರರು ವಿರಾಟ್ ಕೊಹ್ಲಿಯನ್ನು ಸಂತೈಸಿದರು.



ರಾಜ್ಯಾದ್ಯಂತ ಸಂಭ್ರಮ

ಆರ್‌ಸಿಬಿ ಗೆಲ್ಲುತ್ತಿದ್ದಂತೆ ಬೆಂಗಳೂರು, ತಮಕೂರು, ಹಾಸನ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಂಭ್ರಮಾಚರಣೆ ಜೋರಾಗಿ ನಡೆಯಿತು. ಬೆಂಗಳೂರಿನ ಎಂ.ಜಿ.ರೋಡ್, ಚರ್ಚ್‌ಸ್ಟ್ರೀಟ್, ವಿಜಯನಗರ ಸೇರಿದಂತೆ ಹಲವು ಏರಿಯಾಗಳಲ್ಲಿ ಸಂಭ್ರಮಾಚರಣೆ ಮುಗಿಲು ಮುಟ್ಟಿದೆ. ಚರ್ಚ್‌ಸ್ಟ್ರೀಟ್‌ನಲ್ಲಿ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಇನ್ನು, ಪಬ್ ಮತ್ತು ಹೋಟೆಲ್‌ಗಳಲ್ಲಿ ಡಿಜೆ ಸಾಂಗ್‌ಗೆ ಅಭಿಮಾನಿಗಳು ಸಕತ್ ಸ್ಟೆಪ್ ಹಾಕಿದರು. 'ಈ ಸಲ ಕಪ್ ನಮ್ದು, ಜೈ ಆರ್‌ಸಿಬಿ' ಎಂದು ಘೋಷಣೆಗಳು ಮೊಳಗಿದವು.

ಕೊಹ್ಲಿ ದಾಖಲೆ

259 ಇನ್ನಿಂಗ್ಸ್‌ಗಳಲ್ಲಿ 771 ಬೌಂಡರಿ ಬಾರಿಸಿದ ವಿರಾಟ್ ಕೊಹ್ಲಿ, ಶಿಖರ್ ಧವನ್ ಅವರ ದಾಖಲೆಯನ್ನು ಮುರಿದರು. ಶಿಖರ್ 222 ಪಂದ್ಯಗಳಲ್ಲಿ 768 ಬೌಂಡರಿ ಬಾರಿಸಿದ್ದಾರೆ.

20 ಕೋಟಿ

ಐಪಿಎಲ್ ಗೆದ್ದ ತಂಡಕ್ಕೆ ಬರೋಬ್ಬರಿ 20 ಕೋಟಿ ರುಪಾಯಿ ಬಹುಮಾನ ಸಿಗಲಿದೆ. ರನ್ನರ್ ಅಪ್ ಆದ ತಂಡಕ್ಕೆ 13 ಕೋಟಿ ರುಪಾಯಿ ಬಹುಮಾನ ಸಿಗಲಿದೆ. ಮೊದಲ ಐಪಿಎಲ್‌ನಲ್ಲಿ ಗೆದ್ದ ತಂಡಕ್ಕೆ 4.8 ಕೋಟಿ ರುಪಾಯಿ ಸಿಗುತ್ತಿತ್ತು. ಅದು ಈಗ 20 ಕೋಟಿ ರುಪಾಯಿಗೆ ಬಂದು ನಿಂತಿದೆ.

ಟಾಪರ್ಸ್

ಪರ್ಪಲ್‌ಕ್ಯಾಪ್	ಪ್ರಸಿದ್ಧ್ ಕೃಷ್ಣ	ಗುಜರಾತ್ ಟೈಟನ್ಸ್	25 ವಿಕೆಟ್
ಆರೆಂಜ್‌ಕ್ಯಾಪ್	ಸಾಯಿ ಸುದರ್ಶನ್	ಗುಜರಾತ್ ಟೈಟನ್ಸ್	759 ರನ್

ಇದು ತಂಡಕ್ಕೆ ದಕ್ಕಿದ ಗೆಲುವು ಮಾತ್ರವಲ್ಲ, ಆರ್‌ಸಿಬಿ ಅಭಿಮಾನಿಗಳ ಗೆಲುವು. ಇದು 18 ದೀರ್ಘ ವರ್ಷಗಳ ಕಾಯುವಿಕೆ. ಈ ಅವಧಿಯಲ್ಲಿ ನನ್ನ ಯೌವನ, ಮೇರು ಮಟ್ಟದ ಆಟ, ಅನುಭವ ಧಾರೆ ಎರೆದಿದ್ದೇನೆ.

ವಿರಾಟ್ ಕೊಹ್ಲಿ

ಟರ್ನಿಂಗ್ ಪಾಯಿಂಟ್ಸ್

ಫಲಿಸಿತು ಅಭಿಮಾನಿಗಳ ಪ್ರಾರ್ಥನೆ



ಅಹಮದಾಬಾದ್: ಕೋಟ್ಯಂತರ ಅಭಿಮಾನಿಗಳ ನಿರೀಕ್ಷೆ ಯಂತೆಯೇ 18ನೇ ಐಪಿಎಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಚೊಚ್ಚಲ ಐಪಿಎಲ್ ಟ್ರೋಫಿ ಎತ್ತಿ ಹಿಡಿದಿದೆ. ಈ ಮೂಲಕ ಕಳೆದ 18 ವರ್ಷಗಳಿಂದ ' ಈ ಸಲ ಕಪ್ ನಮ್ದೇ' ಎಂದು ಗುನುಗುನಿಸುತ್ತಿದ್ದ ಅಭಿಮಾನಿಗಳ ಕನಸನ್ನು ಸಾಕಾರ ಗೊಳಿಸಿದೆ.

ಅಹ್ಮದಾಬಾದ್ ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 6 ರನ್ ಗಳ ಅಂತರದಲ್ಲಿ ಮಣಿಸಿ ಮೊದಲ ಬಾರಿಗೆ ಚಾಂಪಿಯನ್ ಪಟ್ಟಕ್ಕೇರಿದೆ. ಕಪ್ ಕನಸು ನನಸಾಗುತ್ತಿದ್ದಂತೆ ವಿರಾಟ್ ಕೊಹ್ಲಿ ಸಂಭ್ರಮ ತಾಳಲಾರದೆ ಕಣ್ಣೀರಿಟ್ಟರು. ಆರ್ ಸಿಬಿ ನೀಡಿದ 191 ರನ್ ಗಳ ಸವಾಲಿನ ಗುರಿ ಬೆನ್ನು ಹತ್ತಿದ ಪಂಜಾಬ್ ಕಿಂಗ್ಸ್ ತಂಡ ನಿಗದಿತ 20 ಓವರ್ ನಲ್ಲಿ 7 ವಿಕೆಟ್ ನಷ್ಟಕ್ಕೆ 184 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಯಿತು. ಪಂಜಾಬ್ ಪರ ಪ್ರಿಯಾಂಶ್ ಆರ್ಯ 24 ರನ್ ಗಳಿಸಿದರೆ, ಪ್ರಭ್ ಸಿಮ್ರನ್ ಸಿಂಗ್ 26 ರನ್ ಗಳಿಸಿ ಔಟಾದರು. ಮುಂಬೈ ತಂಡದ ಎದುರು ಕ್ವಾಲಿಫೈಯರ್ ಪಂದ್ಯದಲ್ಲಿ ಭರ್ಜರಿ ಪ್ರದರ್ಶನವಿತ್ತು ತಂಡವನ್ನು ಗೆಲ್ಲಿಸಿಕೊಟ್ಟ ನಾಯಕ ಶ್ರೇಯಸ್ ಅಯ್ಯರ್ ಕೇವಲ 1 ರನ್ ಗಳಿಸಿ ರೊಮಾರಿಯೋ ಶೆಫರ್ಡ್‌ಗೆ ವಿಕೆಟ್ ಒಪ್ಪಿಸುತ್ತಿದ್ದಂತೆ, ಆರ್‌ಸಿಬಿ ಪಾಳೆಯದಲ್ಲಿ ಗೆಲುವಿನ ಆಸೆ ಚಿಗುರಿತು. ಈ ಹಂತದಲ್ಲಿ ಪಂಜಾಬ್ ಇನ್ನಿಂಗ್ಸ್‌ಗೆ ಬಲ ನೀಡಿದ ಜೋಶ್ ಇಂಗ್ಲಿಸ್ 23 ಎಸೆತಗಳಲ್ಲಿ 39 ರನ್ ಗಳಿಸಿದರು. ಆದರೆ ಬಿಗಿಬೌಲಿಂಗ್ ಸಂಘಟಿಸಿದ ಕೃನಾಲ್ ಪಾಂಡ್ಯ ಜೋಶ್ ವಿಕೆಟ್ ಪಡೆಯುತ್ತಿದ್ದಂತೆ ಆರ್‌ಸಿಬಿ ಅಭಿಮಾನಿಗಳಲ್ಲಿ ಹೊಸ ಜೋಶ್ ಕಂಡು ಬಂತು. ಕೊನೆಯ ಹಂತದಲ್ಲಿ ನೇಹಲ್ ವಧೇರಾ (15), ಶಶಾಂಕ್ ಸಿಂಗ್ (61) ರನ್ ಗಳಿಸಿ ಪಂಜಾಬ್ ಇನ್ನಿಂಗ್ಸ್‌ಗೆ ಜೀವ ತುಂಬುವ ಪ್ರಯತ್ನ ಮಾಡಿದರೂ ಗೆಲುವಿನ ದಡ ಸೇರಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಪಂಜಾಬ್ ನಿಗದಿತ 20 ಓವರ್ ನಲ್ಲಿ 7 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿ ಕೇವಲ 6 ರನ್ ಅಂತರದಲ್ಲಿ ಸೋಲು ಕಂಡಿತು. ಆರ್ ಸಿಬಿ ಪರ ಭುವನೇಶ್ವರ್ ಕುಮಾರ್ ಮತ್ತು ಕೃನಾಲ್ ಪಾಂಡ್ಯ ತಲಾ 2 ವಿಕೆಟ್ ಪಡೆದರೆ, ಯಶ್ ದಯಾಳ್, ಜಾಶ್ ಹೇಜಲ್ ವುಡ್ ಮತ್ತು ರೊಮಾರಿಯೋ ಶೆಫರ್ಡ್ ತಲಾ 1 ವಿಕೆಟ್ ಪಡೆದರು.

ಆರ್‌ಸಿಬಿ VS ಪಂಜಾಬ್ ಕಿಂಗ್ಸ್ ಸೆಣಸಾಟ



1. ಪ್ರಿಯಾಂಶ್ ಆರ್ಯ ವಿಕೆಟ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ನೀಡಿದ 191 ರನ್‌ಗಳ ಗುರಿ ಬೆನ್ನಟ್ಟಿದ ಪಂಜಾಬ್ ಕಿಂಗ್ಸ್ ಉತ್ತಮ ಆರಂಭ ಪಡೆದು ಕೊಂಡಿತ್ತು. 5ನೇ ಓವರ್‌ನ ಐದು ಬಾಲ್ ಕಳೆಯುವಷ್ಟರಲ್ಲಿ 43 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿತ್ತು. ಪ್ರಿಯಾಂಶ್ ಆರ್ಯ ಹಾಗೂ ಪ್ರಭ್ ಸಿಮ್ರಾನ್ ಸಿಂಗ್ ಉತ್ತಮ ಅಡಿಪಾಯ ಹಾಕಿಕೊಟ್ಟಿದ್ದರು. ಆದರೆ ಜೋಶ್ ಹೇಜಲ್‌ವುಡ್ ಎಸೆದ ಐದನೇ ಓವರ್‌ನ ಕೊನೆಯ ಬಾಲ್‌ನಲ್ಲಿ ಫಿಲ್ ಸಾಲ್ಟ್ ತೆಗೆದು ಕೊಂಡ ಅದ್ಭುತ ಕ್ಯಾಚ್‌ಗೆ ಬಲಿಯಾದರು. ಹೀಗೆ ಪಂಜಾಬ್‌ಗೆ ಮೊದಲ ವಿಕೆಟ್ ಬಿತ್ತು.

2. ಮುಗ್ಗರಿಸಿದ ಶ್ರೇಯಸ್ ಅಯ್ಯರ್

9ನೇ ಓವರ್‌ನಲ್ಲಿ ಪ್ರಭ್‌ಸಿಮ್ರಾನ್ ವಿಕೆಟ್ ಬಿದ್ದಾಗ ಕ್ರೀಸಿಗೆ ಕಾಲಿಟ್ಟರು ಶ್ರೇಯಸ್ ಅಯ್ಯರ್. ಅದಾಗಲೇ ರನ್ ರೇಟ್‌ನಲ್ಲಿ ಅಲ್ಪ ಹಿನ್ನಡೆಯಲ್ಲಿದ್ದರೂ ಮುಂಬೈ ವಿರುದ್ಧ ಅಬ್ಬರಿಸಿದ್ದ ಅಯ್ಯರ್ ಬಗ್ಗೆ ಪಂಜಾಬ್ ಭಾರೀ ನಿರೀಕ್ಷೆ ಇಟ್ಟುಕೊಂಡಿತ್ತು. ಆದರೆ ರೊಮಾರಿಯೋ ಶೆಫರ್ಡ್ ಎಸೆದ 10ನೇ ಓವರ್‌ನ ನಾಲ್ಕನೇ ಎಸೆತ ಪಂಜಾಬ್ ನಾಯಕನ ಬ್ಯಾಟ್‌ಗೆ ತಗುಲಿ ಜಿತೇಶ್ ಶರ್ಮಾ ಗ್ಲೌಸ್ ನೊಳಗೆ ಮುದುರಿ ಕುಳಿತಿತು. ಕೇವಲ ಎರಡು ಬಾಲ್ ಎದುರಿಸಿ 1 ರನ್ ಗಳಿಸಿ ಶ್ರೇಯಸ್ ಅಯ್ಯರ್ ನಿರ್ಗಮಿಸಿದರು.

3. ಬಿದ್ದ ಜೋಶ್ ಇಂಗ್ಲಿಸ್ ವಿಕೆಟ್

ವಿಕೆಟ್ ಮೇಲೆ ವಿಕೆಟ್ ಬೀಳುತ್ತಿದ್ದರೂ, ಎಲ್ಲರೂ ರನ್ ಗಳಿಸಲು ಪರದಾಡುತ್ತಿದ್ದರೂ ಏನೂ ಆಗೇ ಇಲ್ಲ ಎನ್ನುವಂತೆ ಒಂದು ಬದಿಯಿಂದ ಅಬ್ಬರಿಸುತ್ತಲೇ ಇದ್ದರು ಜೋಶ್ ಇಂಗ್ಲಿಸ್. 160ಕ್ಕಿಂತ ಹೆಚ್ಚಿನ ಸ್ಟ್ರೈಕ್ ರೇಟ್‌ನಲ್ಲಿ ಸಿಕ್ಸ್ ಮೇಲೆ ಸಿಕ್ಸ್ ಚಚ್ಚುತ್ತಲೇ ಇದ್ದ ಇಂಗ್ಲಿಸ್ ಪಂಜಾಬ್‌ನ ಗೆಲುವಿನ ಆಸೆಯನ್ನು ಜೀವಂತವಾಗಿಟ್ಟಿದ್ದರು. ಆದರೆ, ಒಂದು ಬದಿಯಲ್ಲಿ ರನ್ ಗಳಿಸಲು ನೇಹಲ್ ವಡೇರಾ ಪರದಾಡುತ್ತಿದ್ದುದರಿಂದ ರನ್ ರೇಟ್ ಹೆಚ್ಚಿಸಲೇಬೇಕಾದ ಒತ್ತಡಕ್ಕೆ ಸಿಲುಕಿದ ಇಂಗ್ಲಿಸ್ ಕ್ರುನಾಲ್ ಪಾಂಡ್ಯ ಎಸೆದ 13ನೇ ಓವರ್‌ನ ಮೊದಲ ಎಸೆತವನ್ನೇ ಸಿಕ್ಸರ್‌ಗೆ ಅಟ್ಟುವ ಪ್ರಯತ್ನಕ್ಕೆ ಕೈ ಹಾಕಿದರು. ಹೀಗೆ ಹೊಡೆದ ಚೆಂಡು ಬೌಂಡರಿ ಲೈನ್‌ನಲ್ಲಿ ನಿಂತಿದ್ದ ಲಿಯಾಮ್ ಲಿವಿಂಗ್‌ಸ್ಟನ್ ಕೈ ಸೇರಿತು. ಅಲ್ಲಿಗೆ ಪಂಜಾಬ್ ಹೆಚ್ಚು ಕಡಿಮೆ ಗೆಲುವಿನ ಆಸೆಯನ್ನೆಲ್ಲ ಬಿಟ್ಟಿತು.

3. ಬಿದ್ದ ಸ್ಟೋಯ್ನಿಸ್ ವಿಕೆಟ್

ಹೀಗಿದ್ದೂ, ಕೊನೆಯ ನಿರೀಕ್ಷೆ ಇದ್ದಿದ್ದು ಆಸ್ಟ್ರೇಲಿಯಾದವರೇ ಆದ ಇನ್ನೊಬ್ಬ ಸ್ಫೋಟಕ ಬ್ಯಾಟರ್ ಮಾರ್ಕಸ್ ಸ್ಟೋಯ್ನಿಸ್ ಮೇಲೆ. ಭುವನೇಶ್ವರ್ ಕುಮಾರ್ ಎಸೆದ 17ನೇ ಓವರ್ ಎರಡನೇ ಎಸೆತದಲ್ಲಿ ನೇಹಲ್ ವಡೇರಾ ಔಟ್ ಆಗುತ್ತಿದ್ದಂತೆ ಸ್ಟೋಯ್ನಿಸ್ ಮೈದಾನಕ್ಕೆ ಕಾಲಿಟ್ಟರು. ಆಗ ಪಂಜಾಬ್‌ಗೆ ಕೇವಲ 22 ಬಾಲ್‌ಗಳಲ್ಲಿ 55 ರನ್ ಬೇಕಾಗಿತ್ತು. ಬಂದವರೇ ಮೊದಲ ಬಾಲ್‌ಗೆ ಸಿಕ್ಸ್ ಬಾರಿಸಿದ ಸ್ಟೋಯ್ನಿಸ್ ಗೆಲುವಿನ ಆಸೆಯನ್ನು ಮತ್ತೆ ಚಿಗುರಿಸಿದರು. ಆದರೆ ನಂತರದ ಎಸೆತದಲ್ಲೇ ಯಶ್ ದಯಾಳ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ಅಲ್ಲಿಗೆ ಪಂಜಾಬ್‌ನ ಸೋಲು ಬರೆದಾಗಿತ್ತು. ಅಂತಿಮವಾಗಿ ಶಶಾಂಕ್ ಸಿಂಗ್ ವಿರೋಚಿತ ಹೋರಾಟದ ನಡುವೆಯೂ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿ 6 ರನ್‌ಗಳಿಂದ ಸೋಲು ಕಂಡಿತು.

ಫನ್‌ತರಂಗ
- ರಘುಪತಿ ಶೃಂಗೇರಿ -

ಇದೇ ವಾರ 'ಸೀಟ್ ಮ್ಯಾಟ್ರಿಕ್ಸ್' ಇಂಜನಿಯರಿಂಗ್ ಕಾಲೇಜ್ ಸೀಟುಗಳ ವಿವರ ಸುದ್ದಿ



ಡ್ಯಾಡ್, ಇದು ನಿಮ್ಮ ಸೀಟ್ ನ್ಯೂಸಲ್ಲ... ನಮ್ ಸೀಟ್‌ದು...!

ನಾಗರಹೊಳೆ ಸಫಾರಿ ಎರಡು ಗಂಟೆಗೆ ಇಳಿಕೆ

ಮೈಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಸಮಯ ಮತ್ತು ದರ ಪರಿಷ್ಕರಿಸಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ. ಜೂನ್ 1ರಿಂದ ಹೊಸ ದರ ಜಾರಿಗೆ ಬಂದಿದ್ದು, ಸಫಾರಿ ಸಮಯವನ್ನು 3 ಗಂಟೆಯಿಂದ 2 ಗಂಟೆಗೆ ಇಳಿಸಲಾಗಿದ್ದು, ಒಂದು ತಾಸು ಸಫಾರಿ ಅವಧಿ ಕಡಿಮೆ ಆಗಿದೆ. ನಾಗರಹೊಳೆ ಅಭಯಾರಣ್ಯದಲ್ಲಿ ಅಂತರ ಸಂತೆ ವಲಯದ ಕಾಕನಕೋಟೆ (ದಮ್ಮ ನೆಕಟ್ಟೆ), ಹುಣಸೂರು ತಾಲೂಕಿನ ವೀರನ ಹೊಸಹಳ್ಳಿ, ಕೊಡಗಿನ ನಾಣಚ್ಚಿಗೇಟ್ ಬಳಿ ಪ್ರತ್ಯೇಕ 3 ಸಫಾರಿ ಕೇಂದ್ರದಲ್ಲಿ ಈ ಹೊಸ ದರ ಮತ್ತು ಸಮಯದ ಪರಿಷ್ಕರಣೆ ಜಾರಿಗೆ ಬರಲಿದೆ.

ಮಹಾರಾಷ್ಟ್ರ ಸಿಎಂಗೆ ಶೀಘ್ರದಲ್ಲೇ ಸಿದ್ದರಾಮಯ್ಯ ಪತ್ರ | ಪಿಎಂ ಭೇಟಿಗೆ ನಿರ್ಧಾರ: ಡಿಕೆಶಿ

ಆಲಮಟ್ಟಿ ತಗಾದೆ: ಕೇಂದ್ರದ ಜತೆ ಚರ್ಚೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಿಸುವುದರಿಂದ ಮಹಾರಾಷ್ಟ್ರದ ಕೆಲ ಜಿಲ್ಲೆಗಳಿಗೆ ಸಮಸ್ಯೆಯಾಗಲಿದೆ ಎನ್ನುವ ತಗಾದೆಗೆ ಸಂಬಂಧಿಸಿದಂತೆ ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಸಮಯ ಕೇಳಲು ರಾಜ್ಯ ಸರಕಾರ ತೀರ್ಮಾನಿಸಿದೆ.

ಈ ಬಗ್ಗೆ ತಜ್ಞರೊಂದಿಗೆ ಚರ್ಚಿಸಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಷ್ಟ್ರ ಸಿಎಂಗೆ ಪತ್ರ ಬರೆದ ಬಳಿಕ ಕೇಂದ್ರ ಸರಕಾರದೊಂದಿಗೆ ಚರ್ಚಿಸಲು ಚಿಂತನೆ ನಡೆಸಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳದ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಪತ್ರಕ್ಕೆ, ನಮ್ಮ ಮುಖ್ಯಮಂತ್ರಿಗಳು ಪತ್ರ ಬರೆದ ನಂತರ, ಈ ಬಗ್ಗೆ ಚರ್ಚಿಸಲು ಪ್ರಧಾನಮಂತ್ರಿ, ಹಾಗೂ ಕೇಂದ್ರ ಜಲಶಕ್ತಿ ಸಚಿವರ ಭೇಟಿಗೆ ಸಮಯ ಕೇಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳ ವಿಚಾರವಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ಪತ್ರಕ್ಕೆ ನಮ್ಮ ಮುಖ್ಯಮಂತ್ರಿಗಳು ಎರಡು ದಿನಗಳಲ್ಲಿ ಪತ್ರ ಬರೆಯಲಿದ್ದಾರೆ. ನಾನು ನನ್ನ ಅಭಿಪ್ರಾಯವನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದೇನೆ. ಸಿಎಂ ಬರೆಯುವ ಪತ್ರವನ್ನು ಎಲ್ಲಾ ಸಂಸದರಿಗೆ ಕಳುಹಿಸಿಕೊಡುತ್ತೇನೆ. ನಂತರ ಈ ವಿಚಾರವಾಗಿ ಚರ್ಚಿಸಲು ಪ್ರಧಾನಮಂತ್ರಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಭೇಟಿಗೆ ದಿನಾಂಕ ಕೇಳುತ್ತೇವೆ. ಈ ವಿಚಾರವಾಗಿ ನಾವೆಲ್ಲಾ ಸೇರಿ ಒತ್ತಾಯ ಮಾಡಲೇಬೇಕು ಎಂದು ಅಭಿಪ್ರಾಯಪಟ್ಟರು.

ಮಹಾರಾಷ್ಟ್ರ ಸಿಎಂ ಫಡ್ನವೀಸ್ ಅವರು ಬುದ್ಧಿವಂತರಿದ್ದಾರೆ. ಈ ಹಿಂದೆ ಅವರೇ ಈ ಯೋಜನೆಗೆ ಬೆಂಬಲ ನೀಡಿದ್ದರು. ಈಗ ಅವರು ಯಾಕೆ ಈ ಪತ್ರ ಬರೆದರು ಎಂದು ಅಚ್ಚರಿಯಾಗಿದೆ. ಮಳೆ ಹೆಚ್ಚಾದಾಗ ಪ್ರವಾಹ ಬರುತ್ತದೆ. ಇದನ್ನು ನಿಭಾಯಿಸುವುದು ಅವರ ಕರ್ತವ್ಯ ಎಂದು ಹೇಳಿದರು.

ಹೈಕಮಾಂಡ್ ಸಿಎಂ ಅವರನ್ನೇ ಕೇಳಬೇಕು:

ಸಚಿವ ಸಂಪುಟ ಹಾಗೂ ನಿಗಮ ಮಂಡಳಿ ನೇಮಕಕ್ಕೆ ಸಂಬಂಧಿಸಿದಂತೆ ಮಾತನಾಡಿ, ಸಚಿವ ಸಂಪುಟದ ವಿಚಾರ ಏನಿದ್ದರೂ ಹೈಕಮಾಂಡ್ ಹಾಗೂ ಮುಖ್ಯಮಂತ್ರಿಗಳನ್ನೇ ಕೇಳಬೇಕು. ಇನ್ನು ಈಗಾಗಲೇ ಗ್ಯಾರಂಟಿ ಸಮಿತಿಯಲ್ಲಿ 4 ಸಾವಿರ ಕಾರ್ಯಕರ್ತರಿಗೆ ಅಧಿಕಾರ ನೀಡಿದ್ದೇವೆ. 8 ಸಾವಿರ ಜನ ಕಾರ್ಯಕರ್ತರನ್ನು ಬೇರೆ ಬೇರೆ ಸಮಿತಿ ಸದಸ್ಯರನ್ನಾಗಿ ಮಾಡಿದ್ದೇವೆ. ರಾಜ್ಯ ಮಟ್ಟದಲ್ಲಿ 500–600 ಜನಕ್ಕೆ ಮಾಡಬೇಕಿದೆ. ಈ ಪಟ್ಟಿ ಸಿದ್ಧವಾಗಿದ್ದು, ಸ್ಥಳೀಯ ನಾಯಕರ ಜತೆ ಚರ್ಚಿಸಿ ಪ್ರಕಟಿಸುತ್ತೇವೆ ಎಂದು ತಿಳಿಸಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಪತ್ರದ ಬಗ್ಗೆ ನನಗೆ ಇನ್ನೂ ಆ ಪತ್ರ ಬಂದಿಲ್ಲ. ಬಂದ ನಂತರ ಪ್ರತಿಕ್ರಿಯೆ ನೀಡುತ್ತೇನೆ. ಬಿಜೆಪಿಯವರು ಯಾವ ರೀತಿ ಆಯ್ಕೆ ಮಾಡಿದ್ದರು ಎಂಬುದು ನನಗೆ ಗೊತ್ತಿದೆ. ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ತಿಳಿಸಿದರು.

ಸಿಎಂ ಬರೆಯುವ ಪತ್ರದಲ್ಲಿ ಏನಿರಲಿದೆ?

- ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳದ ಬಗ್ಗೆ ಮಹಾರಾಷ್ಟ್ರ ಸಿಎಂಗೆ ಪ್ರಸ್ತಾಪ
- ಮಹಾರಾಷ್ಟ್ರ ಸಿಎಂ ಅಭಿಪ್ರಾಯ ಕೇಳಲಿರುವ ಸಿಎಂ ಸಿದ್ದರಾಮಯ್ಯ
- ಅಲಮಟ್ಟಿ ಡ್ಯಾಮ್ ಎತ್ತರಿಸಲು ಸಹಕಾರ ಬೇಕೆಂದು ಮನವರಿಕೆ
- 2 ರಾಜ್ಯಗಳ ನಡುವೆ ಕೇಂದ್ರ ಮಧ್ಯಸ್ಥಿಕೆ ವಹಿಸಲು ಒತ್ತಾಯ ಸಾಧ್ಯತೆ

ಹೈಕಮಾಂಡ್ ಕರೆದರೆ ದೆಹಲಿಗೆ ಹೋಗುವೆ

ದೆಹಲಿ ಪ್ರವಾಸಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಕೇಂದ್ರ ಸಚಿವಾಲಯಗಳು ಅಲ್ಲಿರುವ ಕಾರಣ ದೆಹಲಿಗೆ ತೆರಳಬೇಕಾಗುತ್ತದೆ. ಸದ್ಯಕ್ಕೆ ನನಗೆ ದೆಹಲಿಯಲ್ಲಿ ಯಾವುದೇ ಕಾರ್ಯಕ್ರಮ ಇಲ್ಲ. ಮುಖ್ಯಮಂತ್ರಿಗಳ ಕಾರ್ಯಕ್ರಮ ಇರಬಹುದು. ಹೈಕಮಾಂಡ್ ನನಗೆ ಭೇಟಿ ಮಾಡಲು ತಿಳಿಸಿದರೆ ನಾನು ಹೋಗುತ್ತೇನೆ. ಆದರೆ ನಾನು ಕೆಲವು ಕೇಂದ್ರ ಸಚಿವರನ್ನು ಭೇಟಿ ಮಾಡಬೇಕಿದ್ದು, ಅವರ ಸಮಯ ನಿಗದಿ ಮಾಡಿದ ನಂತರ ನಾನು ಪ್ರವಾಸ ಮಾಡುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಡ್ಯಾಮ್ ಎತ್ತರಿಸಿದರೆ ಆತಂಕವಿಲ್ಲ

ವಿಜಯಪುರ: ಆಲಮಟ್ಟಿ ಡ್ಯಾಮ್ ಎತ್ತರಿಸುವುದರಿಂದ ಮಹಾರಾಷ್ಟ್ರದಲ್ಲಿ ಯಾವುದೇ ಪ್ರವಾಹ ಉಂಟಾಗಲ್ಲ, ಯಾವುದೇ ಆತಂಕವಿಲ್ಲ ಎಂದು ವರದಿಯಲ್ಲಿದೆ ಹೇಳಲಾಗಿದೆ ಎಂದು ಸಚಿವ ಡಾ.ಎಂ.ಬಿ.ಪಾಟೀಲ ಹೇಳಿದರು.

ವಿಜಯಪುರ ಜಿಲ್ಲೆಯ ಆಲಮಟ್ಟಿ ಡ್ಯಾಮ್ ಎತ್ತರಿಸಬಾರದು ಎಂದು ಸಿಎಂ ಸಿದ್ದರಾಮಯ್ಯಗೆ ಮಹಾರಾಷ್ಟ್ರ ಸಿಎಂ ಪಡ್ನವೀಸ್ ಪತ್ರ ಬರೆದ ವಿಚಾರವಾಗಿ ವಿಜಯಪುರದಲ್ಲಿ ಅವರು ಸುದ್ದಿಗಾರರ ಜತೆ ಮಾತನಾಡಿದರು. ಆಲಮಟ್ಟಿ ಡ್ಯಾಮ್ ಎತ್ತರದಿಂದ ಮಹಾರಾಷ್ಟ್ರದಲ್ಲಿ ಯಾವುದೇ ಪ್ರವಾಹ ಉಂಟಾಗಲ್ಲ. ಆದರೂ ಸುಮ್ಮನೆ ಈ ರೀತಿ ವಿರೋಧ ಮಾಡುತ್ತಿದ್ದಾರೆ. ಸಾಂಗ್ಲಿ ಹತ್ತಿರ ಕೃಷ್ಣಾನದಿ ಒತ್ತುವರಿ, ಅತಿಕ್ರಮಣ ಮಾಡಿದ್ದಾರೆ. ಅದರ ಬಗ್ಗೆ ನನ್ನ ಬಳಿ ದಾಖಲೆ ಇದೆ. ಇಂತಹ ವಿಚಾರದಲ್ಲಿ ಒಂದಾಗಬೇಕು. ನಾವು ಎಲ್ಲರು ಒಗ್ಗಾಟಾಗಿ ಇದ್ದೇವೆ. ಈ ರೀತಿ ಕ್ಯಾತೆ ತೆಗೆದು 2 ರಾಜ್ಯಗಳ ಮಧ್ಯೆ ದ್ವೇಷ ಬಿತ್ತುವುದು ಸರಿಯಲ್ಲವೆಂದು ಎಂದರು.

ವಿಜಯಪುರದಲ್ಲೂ ವಿಮಾನ ತರಬೇತಿ ಕೇಂದ್ರ

ಶಿವಮೊಗ್ಗದಲ್ಲಿ ವಿಮಾನ ತರಬೇತಿ ಕೇಂದ್ರ ಸ್ಥಾಪನೆ ವಿಚಾರಕ್ಕೆ ಸಚಿವ ಎಂ.ಬಿ.ಪಾಟೀಲ ಮಾತನಾಡಿ, ಶಿವಮೊಗ್ಗದಲ್ಲಿ ವಿಮಾನ ತರಬೇತಿ ಕೇಂದ್ರ ಸ್ಥಾಪಿಸಲಾಗುತ್ತದೆ. ಮುಂದೆ ವಿಜಯಪುರದಲ್ಲೂ ವಿಮಾನ ತರಬೇತಿ ಕೇಂದ್ರ ಸ್ಥಾಪಿಸಲಾಗುತ್ತದೆ. ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ ಮಾಡಿದ್ದೇವೆ. ಧಾರವಾಡದಲ್ಲಿ 600 ಕೋಟಿ ವೆಚ್ಚದಲ್ಲಿ ನೈಡೆಕ್ ಎಂಬ ಹೈಟೆಕ್ ಇಂಡಸ್ಟ್ರೀಸ್ ಸ್ಥಾಪಿಸಲಾಗಿದ್ದು, ಪ್ರಾರಂಭಿಕ ಹಂತದಲ್ಲಿ 800 ಜನರಿಗೆ ಉದ್ಯೋಗ ನೀಡಲಾಗುತ್ತದೆ. ನಂತರ 3000 ಮಂದಿಗೆ ಉದ್ಯೋಗ ಸಿಗಲಿದೆ. ಉತ್ತರ ಕರ್ನಾಟಕ ಭಾಗಕ್ಕೆ ಬೃಹತ್ ಕೈಗಾರಿಕೆಗಳನ್ನು ತರಲಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆಲಮಟ್ಟಿ ಕ್ಯಾತೆ ವ್ಯವಸ್ಥಿತ ಪಿತೂರಿ: ಯತ್ನಾಳ್

ವಿಜಯಪುರ: ಆಲಮಟ್ಟಿ ಜಲಾಶಯ 524 ಮೀಟರ್ ಏರಿಕೆಗೆ ಈಗಾಗಲೇ ಅನುಮತಿ ಸಿಕ್ಕಿದೆ. ಹಿನ್ನೀರು ನಿಲ್ಲುವುದರಿಂದ ಅವರಿಗೂ ನೀರಾವರಿಗೆ ಅನುಕೂಲ ಆಗುತ್ತದೆ. ಸುಮ್ಮನೆ ಏನಾದ್ರೂ ಮಾಡಿ ಆಲಮಟ್ಟಿ ಎತ್ತರಕ್ಕೆ ಅಡ್ಡಿ ಮಾಡಬೇಕು ಅಂತ ವ್ಯವಸ್ಥಿತವಾಗಿ ಪಿತೂರಿ ಮಾಡುತ್ತಿದ್ದಾರೆ. ರಾಜ್ಯದ ಎಲ್ಲ ಸಂಸದರು ಇದರ ಬಗ್ಗೆ ಸಂಸತ್ತನಲ್ಲಿ ಧ್ವನಿ ಎತ್ತಬೇಕು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಆಗ್ರಹಿಸಿದರು.

ವಿಜಯಪುರದಲ್ಲಿ ಶಾಸಕ ಯತ್ನಾಳ ಸುದ್ದಿಗಾರರೊಂದಿಗೆ ಮಾತನಾಡಿ, ಸಾಂಗ್ಲಿ, ಕೊಲ್ಹಾಪುರಕ್ಕೆ ಯಾವುದೇ ತೊಂದರೆ ಆಗಲ್ಲ. ಮಹಾರಾಷ್ಟ್ರದವರು ಜನರನ್ನು ಪ್ರಚೋದನೆ ಮಾಡಲು ಈ ರೀತಿ ಹೇಳಿಕೆ ಕೊಡುತ್ತಿದ್ದಾರೆ. ಕೇಂದ್ರ ಸರಕಾರ ಕರ್ನಾಟಕಕ್ಕೆ ಅನ್ಯಾಯ ಆಗದ ರೀತಿಯಲ್ಲಿ ಎರಡು ರಾಜ್ಯದ ಸಿಎಂಗಳು ಹಾಗೂ ನೀರಾವರಿ ತಜ್ಞರ ಸಭೆಯನ್ನು ಕರೆದು ಮಹಾರಾಷ್ಟ್ರ ಸಿಎಂಗೆ ತಿಳಿ ಹೇಳಬೇಕು. ನಮ್ಮ ರಾಜ್ಯಕ್ಕೆ ಯಾವುದೇ ತೊಂದರೆ ಆಗಬಾರದು. ಯಾವುದೇ ಪಕ್ಷದ ಸರಕಾರ ಇದ್ದರೂ ನಾವು ಹೋರಾಟ ಮಾಡಬೇಕು. ಮಹಾರಾಷ್ಟ್ರದವರಿಗೆ ಬರೀ ಅದೇ ಉದ್ಯೋಗ ಆಗಿ ಬಿಟ್ಟಿದೆ ಎಂದರು.

ಅಬ್ದುಲ್ ಕೊಲೆ ಪ್ರಕರಣ: ಮತ್ತಿಬ್ಬರ ಸೆರೆ

ಮಂಗಳೂರು: ಬಂಟ್ವಾಳ ತಾಲೂಕಿನ ಕುರಿಯಾಳ ಗ್ರಾಮದ ಇರಾಕೋಡಿಯಲ್ಲಿ ಈಚೆಗೆ ನಡೆದ ಅಬ್ದುಲ್ ರಹಿಮಾನ್ ಹತ್ಯೆ ಸಂಬಂಧ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಮತ್ತಿಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧನಕ್ಕೊಳಗಾದವರ ಸಂಖ್ಯೆ ಏಳಕ್ಕೆ ಏರಿದೆ. ಬಂಟ್ವಾಳ ತಾಲೂಕಿನ ತೆಂಕಬೆಳ್ಳೂರು ಗ್ರಾಮದ ಅಭಿನ್ ರೈ (32) ಹಾಗೂ ಬಡಗಬೆಳ್ಳೂರು ಗ್ರಾಮದ ತೇಜಾಕ್ಷ (24) ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ. ಈ ಪ್ರಕರಣ ಸಂಬಂಧ ಬಂಟ್ವಾಳ ತಾಲೂಕಿನ ಕುರಿಯಾಳ ಗ್ರಾಮದ ಮುಂಡರಕೋಡಿ ಮನೆಯ ದೀಪಕ್ (21), ಅಮ್ಮುಂಜೆ ಗ್ರಾಮದ ಶಿವಾಜಿ ನಗರ ಭದ್ರಕಾಳಿ ದೇವಸ್ಥಾನ ಬಳಿಯ ನಿವಾಸಿ ಪೃಥ್ವಿರಾಜ್ (21) ಹಾಗೂ ಬಂಟ್ವಾಳದ ನಿವಾಸಿ ಚಿಂತನ್ (19), ತೆಂಕಬೆಳ್ಳೂರು ಗ್ರಾಮದ ಸುಮಿತ್ ಆಚಾರ್ಯ (27) ಹಾಗೂ ಬಡಗಬೆಳ್ಳೂರು ಗ್ರಾಮದ ರವಿರಾಜ್ (23) ಎಂಬುವರನ್ನು ಪೊಲಿಸರು ಈಗಾಗಲೇ ಬಂಧಿಸಿದ್ದಾರೆ.

ಕೆಐಎ ಟರ್ಮಿನಲ್-2ನಲ್ಲಿ ಮ್ಯೂಸಿಯಂ ಆಫ್ ಆರ್ಟ್ ಫೋಟೋಗ್ರಫಿ ಪ್ರದರ್ಶನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಬೆಂಗಳೂರಿನ ಮ್ಯೂಸಿಯಂ ಆಫ್ ಆರ್ಟ್ ಫೋಟೋಗ್ರಫಿ (ಎಂಎಪಿ) ಜತೆಗೆ ಕೈಜೋಡಿಸಿದ್ದು, ಟರ್ಮಿನಲ್ 2 ರಲ್ಲಿ ಪ್ರಯಾಣಿಕರಿಗೆ ವಿಶಿಷ್ಟವಾದ ಸಾಂಸ್ಕೃತಿಕ ಅನುಭವವನ್ನು ನೀಡಲು ಮುಂದಾಗಿದೆ.

ವಿಮಾನ ನಿಲ್ದಾಣವನ್ನು ಸಕ್ರಿಯ ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸುವುದು, ಮತ್ತು ಪ್ರಯಾಣಿಕರಿಗೆ ದಕ್ಷಿಣ ಏಷ್ಯಾದ ಕಲಾ ಪರಂಪರೆ ಮತ್ತು ಸಂಸ್ಕೃತಿಯೊಂದಿಗೆ ಬೆರೆಯಲು ಅವಕಾಶವನ್ನು ನೀಡುವುದು ಈ ಸಹಭಾಗಿತ್ವದ ಉದ್ದೇಶವಾಗಿದ್ದು, ಟರ್ಮಿನಲ್ 2ರ ಪ್ರಮುಖ ಆಕರ್ಷಣೆ ಕಲೆಯಾಗಿದೆ. ಈಗಾಗಲೇ 60ಕ್ಕೂ ಹೆಚ್ಚು ಕಲಾವಿದರ 210 ಕ್ಕೂ ಹೆಚ್ಚು ಕಲಾಕೃತಿಗಳ ಸಂಗ್ರಹವನ್ನು ಹೊಂದಿದೆ. ಇದೀಗ ಪ್ರಾರಂಭವಾದ ಮ್ಯೂಸಿಯಂ ಆಫ್ ಆರ್ಟ್ ಫೋಟೋಗ್ರಫಿಯ ಸಂವಾದಾತ್ಮಕ ಕಲಾ ಸಂಗ್ರಹವು ಟರ್ಮಿನಲ್ 2ರ ಸೌಂದರ್ಯವನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತವೆ. ಅಲ್ಲದೇ, ಹೊಸ ಕಲಾಕೃತಿಗಳ ಸ್ಥಾಪನೆಯು ಪ್ರಯಾಣಿಕರ ಬಿಡುವಿನ ಸಮಯದ ಅನುಭವವನ್ನು ಹೆಚ್ಚಿಸುತ್ತವೆ.

ಬಿಐಎಎಲ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹರಿ ಮಾರಾರ್ ಮಾತನಾಡಿ,ಕೆಐಎ ಬೆಂಗಳೂರಿನ ಮೂಲಕ ಪ್ರಯಾಣದ ಅರ್ಥವನ್ನು ನಾವು ಮರು ವ್ಯಾಖ್ಯಾನಿಸುತ್ತಿದ್ದೇವೆ. ಪ್ರಯಾಣವನ್ನು ಸಂಸ್ಕೃತಿ, ಸೃಜನಶೀಲತೆ ಮತ್ತು ಸಂಪರ್ಕದಿಂದ ಸಮೃದ್ಧವಾಗಿರುವ ಅನುಭವವನ್ನಾಗಿ ನಾವು ಪರಿಗಣಿಸುತ್ತೇವೆ. ಮ್ಯೂಸಿಯಂ ಆಫ್ ಆರ್ಟ್ ಫೋಟೋಗ್ರಫಿಯ ಜತೆಗಿನ ಈ ಸಹಭಾಗಿತ್ವವು ಟರ್ಮಿನಲ್ 2 ನ್ನು ಕಲಾ ಜಗತ್ತಿನ ಅನ್ವೇಷಣೆ ಮತ್ತು ತೊಡಗಿಸಿಕೊಳ್ಳುವ ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸುವತ್ತ ಒಂದು ಹೆಜ್ಜೆಯಾಗಿದೆ. ಕಲೆಯನ್ನು ಸುಲಭವಾಗಿ ಲಭ್ಯವಾಗುವಂತೆ ಮಾಡಿ, ಸಂವಾದಾತ್ಮಕ ಶೈಲಿಯಲ್ಲಿ ಪ್ರಯಾಣಿಕರ ಅನುಭವದ ಭಾಗವನ್ನಾಗಿ ಮಾಡುವುದು ನಮ್ಮ ಉದ್ದೇಶವಾಗಿದೆ. ಈ ಮೂಲಕ ನಾವು ಪ್ರಯಾಣಿಕರಿಗೆ ವಿಶ್ರಾಂತಿ, ಪ್ರೇರಣೆ ಮತ್ತು ಹೊಸ ಚಿಂತನೆಗೆ ಅಮೂಲ್ಯ ಕ್ಷಣಗಳನ್ನು ಒದಗಿಸಲು ಆಶಿಸುತ್ತೇವೆ. ಹೊಸ ಉಪಕ್ರಮವು ಈ ಪ್ರದೇಶದ ಸಾಂಸ್ಕೃತಿಕ ವೈಭವವನ್ನು ವಿಮಾನ ನಿಲ್ದಾಣದ ಒಟ್ಟು ಅನುಭವದೊಂದಿಗೆ ಜೋಡಿಸುವುದು ನಮ್ಮ ಪ್ರಯತ್ನವಾಗಿದೆ ಎಂದು ತಿಳಿಸಿದರು.

ಮ್ಯೂಸಿಯಂ ಆಫ್ ಆರ್ಟ್ ಫೋಟೋಗ್ರಫಿಯ ಸ್ಥಾಪಕ ಅಭಿಷೇಕ್ ಪೊಡ್ಡಾರ್ ಮಾತನಾಡಿ, ಕಲೆಯು ಜೀವನವನ್ನು ಸಮೃದ್ಧಗೊಳಿಸುವ ಶಕ್ತಿ ಹೊಂದಿದೆ ಎಂಬ ನಂಬಿಕೆಯೊಂದಿಗೆ, ಬಿಐಎಎಲ್ ಜತೆಗಿನ ಈ ವಿಶಿಷ್ಟ ಸಹಭಾಗಿತ್ವದ ಮೂಲಕ ಮ್ಯೂಸಿಯಂ ಆಫ್ ಆರ್ಟ್ ಫೋಟೋಗ್ರಫಿಯು ದಕ್ಷಿಣ ಏಷ್ಯಾದ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಜನರಲ್ಲಿ ಆಸಕ್ತಿ ಮತ್ತು ಅರಿವನ್ನು ಹೆಚ್ಚಿಸಲು ಉದ್ದೇಶಿಸಿದೆ ಎಂದು ತಿಳಿಸಿದರು.

ಗಡಿಪಾರು ಆದೇಶ ಹಿಂಪಡೆಯಲು ಬಿಜೆಪಿ ನಿಯೋಗ ಆಗ್ರಹ

ಹಿಂದೂ ಮುಖಂಡರ ಗಡಿಪಾರಿಗೆ ಕೆಂಡ

ದಕ್ಷಿಣ ಕನ್ನಡ ಜಿಲ್ಲೆಯ ಬಿಜೆಪಿಯ ನಿಯೋಗ ಮಂಗಳೂರು ಪೊಲೀಸ್ ಕಮಿಷನರ್ ಅವರನ್ನು ಭೇಟಿ ಮಾಡಿ, ಹಿಂದೂ ಮುಖಂಡರ ಗಡಿಪಾರು ವಾಪಸ್ ಪಡೆಯಲು ಆಗ್ರಹಿಸಿತು.

ಹಿಂದುತ್ವವಾದಿ ಸಂಘಟನೆಗಳ ಮುಖಂಡರಾದ ಅರುಣ್ ಕುಮಾರ್ ಪುತ್ತಿಲ, ಮಹೇಶ್ ಶೆಟ್ಟಿ ತಿಮರೋಡಿ ಭರತ್ ಕುಮ್ಡೇಲು ಮೊದಲಾ ದವರ ಹೆಸರುಗಳನ್ನು ಬೇಕೆಂದೇ ಸೇರಿಸಿದ್ದಾರೆ. ಹಿಂದೂಗಳನ್ನು ದಮನಿಸಲೆಂದೇ ತಯಾರಿಸಿದ ಪಟ್ಟಿ.
ಹರೀಶ್ ಪೂಂಜ, ಶಾಸಕ

ಮಂಗಳೂರು: ಕೋಮು ಸಂಘರ್ಷ ತಡೆಗಟ್ಟಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಉದ್ದೇಡ ದಿಂದ 36 ಮಂದಿಯನ್ನು ಗಡೀಪಾರು ಮಾಡಲು ದಕ್ಷಿಣ ಕನ್ನಡ ಜಿಲ್ಲಾಡಳಿತ ನಿರ್ಧರಿಸಿದೆ. ಸಿದ್ಧಪಡಿಸಿರುವ ಗಡಿ ಪಾರು ಪಟ್ಟಿಯಲ್ಲಿ ಹಿಂದೂ ಸಂಘಟನೆಗಳ ಕಾರ್ಯಕರ್ತರ ಹೆಸರುಗಳನ್ನು ವಿನಾ ಕಾರಣ ಸೇರಿಸಿದೆ ಎಂದು ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ.

ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ನೇತೃತ್ವದ ಬಿಜೆಪಿಯ ನಿಯೋಗವು ಮಂಗಳೂರು ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ಅವರನ್ನು ಮಂಗಳವಾರ ಭೇಟಿ ಮಾಡಿತು. ಗಡೀಪಾರು ಕ್ರಮ ಹಾಗೂ ಹಿಂದುತ್ವವಾದಿ ಸಂಘಟನೆಗಳ ಕಾರ್ಯಕರ್ತರ ಮೇಲೆ ಎಫ್‌ಐಆರ್ ದಾಖಲಿಸಿದ ಬಗ್ಗೆ ಆಕ್ಷೇಪ ಸಲ್ಲಿಸಿತು. ಈಚೆಗೆ ಯಾವುದೇ ಪ್ರಕರಣಗಳಲ್ಲಿ ಭಾಗಿಯಾಗದ ಹಿಂದುತ್ವವಾದಿ ಸಂಘಟನೆಗಳ ಕಾರ್ಯಕರ್ತರು, ಮುಖಂಡರನ್ನು ಗಡೀಪಾರು ಮಾಡುವ ಪ್ರಸ್ತಾವ ಕೈಬಿಡಬೇಕು. ಕಾರ್ಯಕರ್ತರ ಮನೆಗೆ ರಾತ್ರಿ ವೇಳೆ ತೆರಳಿ ವಿಚಾರಣೆ ನಡೆಸುವುದನ್ನು ನಿಲ್ಲಿಸಬೇಕು ಎಂದು ಶಾಸಕರಾದ ಡಾ.ವೈ. ಭರತ್ ಶೆಟ್ಟಿ, ಉಮಾನಾಥ ಕೋಟ್ಯಾನ್, ರಾಜೇಶ್ ನಾಯ್ಕ್ ಉಳಿಪಾಡಿ, ಹರೀಶ್ ಪೂಂಜ, ಭಾಗಿರಥಿ ಮುರುಳ್ಯ, ಬಿಜೆಪಿಯ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೇಮಾನಂದ ಶೆಟ್ಟಿ, ಯತೀಶ್ ಮತ್ತಿತರ ನಿಯೋಗ ಪೊಲೀಸ್ ಕಮಿಷನರ್ ಅವರನ್ನು ಆಗ್ರಹಿಸಿತು. ಆರ್‌ಎಸ್‌ಎಸ್ ಹಿರಿಯ ಕಲ್ಲಡ್ಕ ಪ್ರಭಾಕರ ಭಟ್ ಮೇಲೆ ಎಫ್.ಐ.ಆರ್. ದಾಖಲಿಸಿದ್ದು, ಹಿಂದುತ್ವವಾದಿ ನಾಯಕರನ್ನು ಗುರುತಿಸಿ ಗಡಿಪಾರು ಮಾಡಲು ಹೊರಟಿರುವುದು, ಜಿಲ್ಲೆಯಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಹೇರಿಕೆ ಮಾಡಿರುವಂತಿದೆ. ಸಂಘ ಪರಿವಾರದ ಕಾರ್ಯಕರ್ತರ ಮನೋಬಲ ಕುಗ್ಗಿಸಲು ಪೊಲೀಸ್ ಇಲಾಖೆಯ ದುರ್ಬಳಕೆಯನ್ನು ನಿಲ್ಲಿಸದಿದ್ದರೆ ಹೋರಾಟ ಅನಿವಾರ್ಯ ಎಂದು ಬಿಜೆಪಿ ನಿಯೋಗ ಪೊಲೀಸ್ ಇಲಾಖೆಗೆ ಎಚ್ಚರಿಕೆಯನ್ನು ನೀಡಿತು.

ಸುಹಾಸ್ ಶೆಟ್ಟಿ ಕೊಲೆ: ಆರೋಪಿ ಬಂಧನ

ದಕ್ಷಿಣ ಕನ್ನಡ ಜಿಲ್ಲೆಯ ಬಜಪೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ರೌಡಿಶೀಟರ್, ಹಿಂದುತ್ವವಾದಿ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ಮತ್ತೊಬ್ಬ ಆರೋಪಿಯನ್ನು ಮಂಗಳೂರು ನಗರ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಈ ಪ್ರಕರಣದಲ್ಲಿ ಒಟ್ಟು 12 ಆರೋಪಿಗಳ ಬಂಧನವಾದಂತಾಗಿದೆ. ಬಜಪೆ ಶಾಂತಿಗುಡ್ಡೆಯ ಬದ್ರಿಯಾ ಜುಮ್ಮಾ ಮಸೀದಿ ಬಳಿಯ ನಿವಾಸಿ ಅಬ್ದುಲ್ ರಜಾಕ್ (59) ಬಂಧಿತ ಆರೋಪಿ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಾರ್ಯಾಲಯ, ಧಾರವಾಡ
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಜಲಮಂಡಳಿ ಆವರಣ, ಧಾರವಾಡ-580001.
ದೂರವಾಣಿ: 0836-2447090 ಇ-ಮೇಲ್ : kwbcen@ gmail.com

ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 487 ದಿನಾಂಕ: 02-06-2025. ರಾಣೇಬೆನ್ನೂರು ಪುರಸಭೆಯ (15ನೇ ಹಣಕಾಸು ಯೋಜನೆಯ ಅನುದಾನ) ಠೇವಣಿ ಕಾಮಗಾರಿಅಡಿ ರಾಣೆಬೆನ್ನೂರು ಪಟ್ಟಣದಲ್ಲಿ 10 ಲ.ಲೀ ಸಾಮರ್ಥ್ಯದ 15 ಮೀ. ಎತ್ತರ ಆರ್.ಸಿ.ಸಿ. ಶಾಫ್ಟ್ ಮಾದರಿಯ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಾಣ ಮತ್ತು 250 ಮಿ.ಮೀ ವ್ಯಾಸದ ಡಿ.ಐ ಕೆ-9 ಕೊಳವೆ ಮಾರ್ಗ ಒದಗಿಸಿ ಅಳವಡಿಸುವ ಕಾಮಗಾರಿ (ಇಡುಗಂಟು ಟೆಂಡರ್-ವೇರಿಯೇಷನ್ ಇರುವುದಿಲ್ಲಾ) INDENT NO. KUWSDB/ 2025-26/WS/ WORK_INDENT344. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.
ಸಹಿ/- ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
ವಾ.ಸಾ.ಇ./ಧಾ/239/2025-26/ದೇಶಪಾಂಡೆಪಬ್ಲಿಸಿಟಿ

ಪುರಸಭಾ ಕಾರ್ಯಾಲಯ, ಕಡೂರು, ಚಿಕ್ಕಮಗಳೂರು ಜಿಲ್ಲೆ.
Ph: 08267-221221 G-mail: ka.kadur.tmc@gmail.com
website: www.kadurtown.mrc.gov.in
ಸಂಖ್ಯೆ: ಕ.ಪು/ಆ.ಶಾ/ಎಸ್ ಬಿಎಂ2/ಐಇಸಿ/ಎಲ್ ಇಡಿ ಪರದೆ/01/2025-26
ದಿನಾಂಕ: 02.06.2025

ಇ-ಟೆಂಡರ್ ಪ್ರಕಟಣೆ

2024-25 ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ 2.0 (ನಗರ) ಯೋಜನೆಯಡಿ ಐ.ಇ.ಸಿ ಘಟಕದಡಿಯಲ್ಲಿ ಕಡೂರು ಪುರಸಭಾ ವ್ಯಾಪ್ತಿಯಲ್ಲಿ 01 ಎಲ್.ಇ.ಡಿ ಪರದೆಯನ್ನು ಸರಬರಾಜು ಮಾಡಿ ಅಳವಡಿಸುವ ಕಾಮಗಾರಿ ಹಾಗೂ 2024-25 ನೇ ಸಾಲಿನ 15 ನೇ ಹಣಕಾಸು ಯೋಜನೆಯ ನಿರ್ಬಂಧಿತ ಅನುದಾನದಡಿ ಕಡೂರು ಪುರಸಭೆಯ ಘನತ್ಯಾಜ್ಯ ನಿರ್ವಹಣೆಗೆ (SWM) ಅಗತ್ಯವಿರುವ 'ವೇಸ್ಟ್ ಶ್ರೆಡ್ಡಿಂಗ್ ಯಂತ್ರ' ಖರೀದಿಸುವ ಕಾಮಗಾರಿಗೆ ಕೆ.ಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕೆ.ಟಿ.ಪಿ.ಪಿ ನಿಯಮದಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಕ್ರಮವಾಗಿ ಇಂಡೆಂಟ್ ಸಂಖ್ಯೆ: DMA/2025-26/IND4913 ಹಾಗೂ DMA/2024- 25/ IND2459/CALL-2 ಇದ್ದೂ EMD ಮೊತ್ತ ಕ್ರಮವಾಗಿ ರೂ.35000/- ಹಾಗೂ ರೂ.25000/- ಇರುತ್ತದೆ. ಬಿಡ್ ಸಲ್ಲಿಸಲು ದಿ:17/06/2025 ಅಂತಿಮ ದಿನವಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿ:19/06/2025 ಇರುತ್ತದೆ. ಆಸಕ್ತ ನೋಂದಾಯಿತ ತಯಾರಕರು ಸರಬರಾಜುದಾರರು/ ಏಜೆನ್ಸಿಯವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ http://kppp.karna taka.gov.in ಗೆ ಸಂಪರ್ಕಿಸತಕ್ಕದ್ದು.ಟೆಂಡರ್ ವೇಳಾಪಟ್ಟಿ ಅಥವಾ ಇನ್ನಿತರೆ ಯಾವುದೇ ಬದಲಾವಣೆಗಳಿದ್ದಲ್ಲಿ ಕೆಪಿಪಿ-ಪೋರ್ಟಲ್‌ನಲ್ಲಿ ಮಾತ್ರ ಪ್ರಚುರ ಪಡಿಸಲಾಗುವುದು.

ಸಹಿ/- ಅಧ್ಯಕ್ಷರು, ಪುರಸಭೆ, ಕಡೂರು
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಕಡೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25-26/33/364

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/09/2025-26 ದಿನಾಂಕ: 03-06-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಶ್ರೀ ಬಿ.ಕೆ. ರವೀಂದ್ರರೆಡ್ಡಿ ಬಿನ್ ಲೇಟ್ ಕೃಷ್ಣರೆಡ್ಡಿ ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ. 49/2 ರಲ್ಲಿನ 01 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ / ಕೈಗಾರಿಕೆ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾ ಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುವುದು" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/1025/ಅಡ್ವರ್ಟೋರ್/2025-26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು-570017,
ಇ-ಮೇಲ್: gmit@cescmysore.org, ವೆಬ್‌ಸೈಟ್: www.cescmysore.org
ಸಂಖ್ಯೆ: ಚಾವಿಸನಿನಿ/ಪ್ರವ್ಯ(ಐಟಿ&ಎಮ್‌ಐಎಸ್)/ಉಪ್ರವ್ಯ(ಖರೀದಿ)/ಸಪ್ರವ್ಯ(ಯೋ-3)/2025-26/6146 ದಿನಾಂಕ: 02.06.2025

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ (ಕೆ.ಪಿ.ಪಿ. ಪೋರ್ಟಲ್ ಮೂಲಕ)

ಚಾ.ವಿ.ಸ.ನಿ.ನಿ ಯು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಿದೆ.

ವಿಷಯ	ಟೆಂಡರ್ ಸಂಖ್ಯೆ	MWನಲ್ಲಿ ಒಟ್ಟು ಫೀಡರ್ ಸೌರ ಸ್ಥಾವರ ಸಾಮರ್ಥ್ಯ
ಪಿ.ಎಮ್.ಕುಸುಮ್ ಕಾಂಪೊನೆಂಟ್ ಸಿ ಯೋಜನೆ-ಫೀಡರ್ ಮಟ್ಟದ ಸೌರೀಕರಣದ ಅಡಿಯಲ್ಲಿ 25 ವರ್ಷಗಳ ಕಾಲ RESCO ಮೋಡ್ ಮೂಲಕ ಚಾವಿಸನಿನಿ ವ್ಯಾಪ್ತಿಯಲ್ಲಿ ಒಟ್ಟು 29 ಉಪಕೇಂದ್ರ (SS) ಮಟ್ಟದಲ್ಲಿ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣ	CESC/IT&MIS/PM-KUSUM-C/2025-26/243 - Call-2	112.202

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in/ ನಲ್ಲಿ ದಿನಾಂಕ: 03-06-2025 ರ ನಂತರ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ +91-8046010000/ 8068948777ಗೆ ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆಕರೆ ಮಾಡಿ : 1912

ಸಹಿ/-
ಪ್ರಧಾನ ವ್ಯವಸ್ಥಾಪಕರು(ಐ.ಟಿ & ಎಮ್.ಐ.ಎಸ್)
ಚಾವಿಸಾನಿನಿ, ಮೈಸೂರು
DIPR/MYS/KAVITA/403/2025-26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
("ವಿ ಟಿ ಯು ಅಧಿನಿಯಮ 1994 ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ")
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ ರಾಜ್ಯ
ಫೋನ್ : (0831)2405468, ಫ್ಯಾಕ್ಸ್ : (0831)2405467
ಉಲ್ಲೇಖ : ವಿತಾವಿ/ಆ.ಸ./2025-26/ 384 ದಿನಾಂಕ : 02-06-2025

ಅಧಿಸೂಚನೆ

ವಿಷಯ: ವಿ.ತಾ.ವಿ.ಯ ಇಪ್ಪತ್ತೈದನೇಯ ವಾರ್ಷಿಕ ಘಟಿಕೋತ್ಸವ (ಭಾಗ-I) ಸಮಾರಂಭ- ಪದವಿ(UG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಪದವಿ (UG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ತೈದನೇಯ ಘಟಿಕೋತ್ಸವ (ಭಾಗ-I) ಸಮಾರಂಭವು ಶುಕ್ರವಾರ, ದಿನಾಂಕ 04 ಜುಲೈ 2025 ರಂದು, ಪೂರ್ವಾಹ್ನ 11-00 ಗಂಟೆಗೆ ವಿ.ತಾವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಪ್ರೇಕ್ಷಾಗೃಹ, "ಜ್ಞಾನ ಸಂಗಮ", ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಈ ಘಟಿಕೋತ್ಸವ ಸಮಾರಂಭದಲ್ಲಿ 2024-25ನೇ ಸಾಲಿನ ಪದವಿ(UG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ್‍ಯಾಂಕ ವಿಜೇತರಿಗೆ ಮತ್ತು ಸಂಶೋಧನ ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರುವುದು ಸಲಹೆ ನೀಡಲಾಗಿದೆ.
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು
* ಕುಲಸಚಿವರು(ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು
* ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಕಛೇರಿಯ ಮಾರನೇಯ ದಿನ, ಅಂದರೆ ದಿ:07-07-2025ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ತೋರಿಸಿ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು.
* ಉಳಿದವರಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ.ಬಿ. ಈ. ರಂಗಸ್ವಾಮಿ)
ಕುಲಸಚಿವರು

ಸಮಾಚಾರ ಸಣ್ಣದಲ್ಲ

ಶ್ಲೋಕ ಒದುವುದರಲ್ಲಿ ವಿಯಾನ್ಸ್ ವಿಶ್ವದಾಖಲೆ

ವಿಜಯಪುರ: ಒಂದು ನಿಮಿಷದಲ್ಲಿ ಗರಿಷ್ಠ ಸಂಸ್ಕೃತ ಶ್ಲೋಕಗಳನ್ನು ಪಠಿಸುವ ಮೂಲಕ ವಿಜಯಪುರದ

ವಿಯಾನ್ಸ್ ದೇಶಪಾಂಡೆ ಬಾಲಕ ಎಂಬ ವಿಶ್ವ ದಾಖಲೆಯನ್ನು ಮಾಡಿದ್ದಾನೆ. ವಿಯಾನ್ಸ್ ದೇಶಪಾಂಡೆ ಪೋಷಕರು ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 5 ವರ್ಷ 6 ತಿಂಗಳು 27 ದಿನ ವಯಸ್ಸಿನ ವಿಯಾನ್ಸ್ ದೇಶಪಾಂಡೆ, ಚಿಕ್ಕ ವಯಸ್ಸಿನಿಂದಲೂ ಶ್ಲೋಕ ಪಠಿಸುವ ಹವ್ಯಾಸ ಹೊಂದಿದ್ದ. ಮೇ 3 ರಂದು ಮಾಡಿದ ದಾಖಲೆ ಯಲ್ಲಿ ಒಂದು ನಿಮಿಷದಲ್ಲಿ 6 ಸಂಸ್ಕೃತ ಶ್ಲೋಕಗ ಳನ್ನು ಪಠಿಸಿದ್ದಾರೆ. ಇದರೊಂದಿಗೆ 6 ವರ್ಷ 4 ತಿಂಗಳ ಮಗು ಈ ಹಿಂದೆ ಒಂದು ನಿಮಿಷದಲ್ಲಿ 5 ಸಂಸ್ಕೃತ ಶ್ಲೋಕಗಳನ್ನು ಪಠಿಸಿ ಮಾಡಿದ್ದ ದಾಖಲೆ ಯನ್ನು ಮುರಿದರು. ಇಂಟರ್‌ನ್ಯಾಷನಲ್ ಬುಕ್ ಆಫ್ ರೆಕಾರ್ಡ್‌ನಲ್ಲಿ ತನ್ನ ಸಾಧನೆಯನ್ನು ದಾಖಲು ಮಾಡಿದ್ದಾನೆ. ವಿಯಾನ್ಸ್ ಪಾಲಕರಾದ ಹರ್ಷ ದೇಶ್ಪಾಂಡೆ ಹಾಗೂ ಶೀತಲ್ ದೇಶ್ಪಾಂಡೆ ಹರ್ಷ ವ್ಯಕ್ತಪಡಿಸಿದ್ದಾರೆ.

4,689 ಅತಿಥಿ ಉಪನ್ಯಾಸಕರ ನೇಮಕ

ಬೆಂಗಳೂರು: 2025–26ನೇ ಸಾಲಿಗೆ ರಾಜ್ಯದ ಸರಕಾರಿ ಪಿಯು ಕಾಲೇಜುಗಳಿಗೆ 4,689 ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವಂತೆ ಸೂಚಿಸಿ ಸರಕಾರ ಆದೇಶ ಹೊರಡಿಸಿದೆ. ರಾಜ್ಯದ ಪಿಯು ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಅಗತ್ಯಗಳಿಗೆ ಅನುಗುಣವಾಗಿ 5,752 ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಮತ್ತು ಅತಿಥಿ ಉಪನ್ಯಾಸಕರಿಗೆ ಗೌರವ ಧನಕ್ಕಾಗಿ ಅನುದಾನ ಬಿಡುಗಡೆ ಮಾಡುವಂತೆ ಪಿಯು ಇಲಾಖೆಯು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಬಳಿಕ ವಿವಿಧ ವೃಂದದ ಉಪನ್ಯಾಸಕರ ಹುದ್ದೆಗಳಿಗೆ ಎದುರಾಗಿ 4,689 ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಸರಕಾರವು ತೀರ್ಮಾನಿಸಿದೆ ಎಂದು ಇಲಾಖೆ ಅಧೀನ ಕಾರ್ಯದರ್ಶಿ ಆದೇಶಿಸಿದ್ದಾರೆ.

ಈರುಳ್ಳಿ ದರ ದಿಢೀರ್ ಕುಸಿತ: ರೈತ ಆಕ್ರೋಶ

ವಿಜಯಪುರ: ಈರುಳ್ಳಿ ದರ ದಿಢೀರ್ ಕುಸಿತ ಹಿನ್ನೆಲೆ ರಾಷ್ಟ್ರೀಯ ಹೆದ್ದಾರಿಗೆ ಈರುಳ್ಳಿ ಸುರಿದು ರೈತ ಹೊರಾಡಿದ ಘಟನೆ ವಿಜಯಪುರದಲ್ಲಿ ನಡೆದಿದೆ. ಜಿಲ್ಲೆಯ ಕೊಲ್ಹಾರ ತಾಲೂಕಿನ ರೋಣಿಹಾಳ ಗ್ರಾಮದ ರೈತ ನಂದಪ್ಪ ರಾಷ್ಟ್ರೀಯ ಹೆದ್ದಾರಿಗೆ ಈರುಳ್ಳಿ ಸುರಿದು ಹೊರಾಡಿ ಗೋಳಾಡಿದ್ದಾರೆ. ರೈತರಾದ ನಂದಪ್ಪ ಗುಡ್ಡದ, ಮಲ್ಲಿಕಾರ್ಜುನ ಗೋಲಗೊಂಡ ಎಂಬವರಿಗೆ ಈರುಳ್ಳಿ ಸೇರಿದ್ದು, ಕ್ವಿಂಟಾಲ್‌ಗೆ 250 ರು. ದರ ನಿಗದಿಗೆ ಆಕ್ರೋಶ ವ್ಯಕ್ತಪಡಿಸಿ ಈ ರೀತಿ ಮಾಡಿದ್ದಾರೆ. ಈ ವೇಳೆ ಸರಕಾರ ಹಾಗೂ ದಲ್ಲಾಳಿಗಳ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ: ಬಿಟಿಎಂ ಲೇಔಟ್, ಬೆಂಗಳೂರು**

ಸಮಸ್ಯೆಯೇನು..?: ರಾಜಕಾಲುವೆ ಹಾಗೂ ರಸ್ತೆ ಬದಿ ಹಾಕಿರುವ ತ್ಯಾಜ್ಯ ವಿಲೇವಾರಿ ಬಗ್ಗೆ

- **ಪರಿಹಾರ:** ಬಿಟಿಎಂ ಲೇಔಟ್‌ನ ಮೊದಲ ಹಂತದಲ್ಲಿ, ಸಿಲ್ಕ್ ಬೋರ್ಡ್ ಮೇಲುರಸ್ತೆಯ ಪಕ್ಕದಲ್ಲಿ ರಾಜಕಾಲುವೆ ಹಾಗೂ ರಸ್ತೆ ಬದಿ ಹಾಕಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗಿದೆ. ರಾಜಕಾಲುವೆ ಹಾಗೂ ರಸ್ತೆ ಬದಿಯಲ್ಲಿ ಸ್ವಚ್ಛತೆ ಕಾಪಾಡಲಾಗಿದೆ. ನಿತ್ಯವು ಕಸ ವಿಲೇವಾರಿ ಸಕಾಲಕ್ಕೆ ಆಗಲು ಕ್ರಮ ವಹಿಸಲಾಗಿದೆ.

ಟ್ವೀಟಾ-ಖಾರಾ

ಆರ್.ಅಶೋಕ, ವಿಪಕ್ಷ ನಾಯಕ

ಕನ್ನಡ ಚಿತ್ರರಂಗದ ಕಲಾವಿದರ ನಟ್ಟು ಬೋಲ್ಟು ಟೈಟ್ ಮಾಡುವ ಧಮ್ಕಿ ಹಾಕಿದ್ದಾಯ್ತು, ಈಗ ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತಂದ ತಮಿಳು ನಟ ಕಮಲ್ ಹಾಸನ್ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿರುವ ಕನ್ನಡಿಗರು ಲಿಮಿಟ್ ನಲ್ಲಿರಬೇಕು ಎಂದು ಕರ್ನಾಟಕದ ಜನತೆಗೆ ನೀತಿ ಪಾಠ ಹೇಳುತ್ತಿದ್ದಾರೆ ಸನ್ಮಾನ್ಯ ಡಿಸಿಎಂ ಡಿ.ಕೆ.ಶಿವಕುಮಾರ್ ಸಾಹೇಬರು. ಸ್ವಾಮಿ ಡಿಕೆ ಶಿವಕುಮಾರ್ ಅವರೇ, ಕಮಲ್ ಹಾಸನ್ ಅಂದರೆ ಅಷ್ಟೊಂದು ಸಾಫ್ಟ್ ಕಾರ್ನರ್ ಯಾಕೆ ಸ್ವಾಮಿ?

ಹನುಮಂತ

ನೀವೆಲ್ಲ ಹೊಂದಾಣಿಕೆ ರಾಜಕಾರಣ ಮಾಡ್ಕೊಂಡು ಭ್ರಷ್ಟಾಚಾರದಲ್ಲಿ ಪಾಲುದಾರರಾಗಿರಿ. ನಾಡದ್ರೋಹಿಗಳೆಲ್ಲ ತಮ್ಮ ನಾಲಗೆಯನ್ನು ಹರಿಬಿಟ್ಟು ನಮ್ಮ ಅಸ್ಮಿತೆಗೆ ಧಕ್ಕೆ ತರುತ್ತ ಮೆರೆಯುತ್ತಿರಲಿ.

ಅಸಮಾನತೆ ಅಳಿಸಲು ಶಿಕ್ಷಣವೇ ಪ್ರಮುಖ ಅಸ್ತ್ರ | ಗದಗ ಕುರುಬರ ಸಂಘದ ಶತಮಾನೋತ್ಸವದಲ್ಲಿ ಸಿಎಂ ಅಭಿಮತ

ಅನ್ನ, ಆರೋಗ್ಯ, ಶಿಕ್ಷಣಕ್ಕೆ ನಮ್ಮ ಸರಕಾರ ಒತ್ತು

ಗದಗ: ಅಂಬೇಡ್ಕರ್ ಅವರು ಕೊಟ್ಟಿರುವ ಶಿಕ್ಷಣ, ಸಂಘಟನೆ, ಹೋರಾಟ ಎನ್ನುವ ಮಂತ್ರವನ್ನು ಎಲ್ಲರೂ ಪಾಲಿಸಬೇಕು. ಸಂವಿಧಾನ ಜಾರಿಯಾಗಿ 75 ವರ್ಷವಾದರೂ ಸಂಪೂರ್ಣ ಶಿಕ್ಷಣ ಸಾಧ್ಯವಾಗಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಗದಗದ ಕರ್ನಾಟಕ ಕುರುಬರ ಸಂಘ ಆಯೋಜಿಸಿದ್ದ ಕರ್ನಾಟಕ ಕುರುಬರ ಸಹಕಾರ ಪತ್ತಿನ ಸಂಘದ ಶತಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಶೂದ್ರ ವರ್ಗದ ಜನ ಹಿಂದುಳಿಯಲು ಅವರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದೇ ಪ್ರಮುಖ ಕಾರಣ. ಶೂದ್ರರು, ದಲಿತರು ಮಾತ್ರ ಶಿಕ್ಷಣ ಪಡೆಯು ವಂತಿರಲಿಲ್ಲ. ಅಂಬೇಡ್ಕರ್ ಅವರ ಜೀವಮಾನದ ಹೋರಾಟವೇ ಈ ಅಸಮಾನತೆಯನ್ನು ಅಳಿಸುವುದಾಗಿತ್ತು. ಇದಕ್ಕೆ ಶಿಕ್ಷಣವೇ ಪ್ರಮುಖ ಅಸ್ತ್ರ ಎಂದು ಅಂಬೇಡ್ಕರ್ ಮನಗಂಡಿದ್ದರು. ಶಿಕ್ಷಣ ದೊರಕದಿದ್ದರೆ ಸ್ವಾಭಿಮಾನಿಗಳಾಗಿ ಇರಲು ಸಾಧ್ಯವೇ ಇಲ್ಲ. ನನಗೆ ರಾಜಪ್ಪ ಎನ್ನುವ ಶಿಕ್ಷಕರು ಸಿಗದೇ ಹೋಗಿದ್ದರೆ ನನಗೆ ಶಿಕ್ಷಣವೂ ಸಿಗುತ್ತಿರಲಿಲ್ಲ, ನಾನು ಮುಖ್ಯಮಂತ್ರಿಯೂ ಆಗುತ್ತಿರಲಿಲ್ಲ. ಹಸು ಕಾಯ್ಕೊಂಡು ಇರಬೇಕಾಗಿತ್ತು ಎಂದರು.

ಅದಕ್ಕೇ ನಮ್ಮ ಸರಕಾರ ಶಿಕ್ಷಣ, ಆರೋಗ್ಯ, ಅನ್ನಕ್ಕೆ ಪ್ರಮುಖ ಆದ್ಯತೆ ನೀಡುತ್ತಿದೆ. ಅಂಬೇಡ್ಕರ್, ಬಸವಣ್ಣ, ಮಹಾತ್ಮ ಗಾಂಧಿಯವರ ಆಶಯಗಳು ಈಡೇರಬೇ ಕಾದರೆ ಸರ್ವರಿಗೂ ಶಿಕ್ಷಣ ಸಿಗಬೇಕು. ಎಲ್ಲರಿಗೂ ಆರ್ಥಿಕ ಶಕ್ತಿ ಬರಬೇಕು ಎಂದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಮತ್ತು ಪೌರಾಡಳಿತ ಸಚಿವ ರಹೀಂ ಖಾನ್, ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ್, ಶಾಸಕರಾದ ಬಸವರಾಜ ಶಿವಣ್ಣನವರ, ಜಿ.ಎಸ್.ಪಾಟೀಲ, ಸಿ.ಸಿ.ಪಾಟೀಲ್, ಎನ್.ಎಚ್. ಕೋನರೆಡ್ಡಿ, ವಿ.ಪ ಸದಸ್ಯ ಎಸ್.ವಿ.ಸಂಕನೂರ, ಜಿಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಮಾಜಿ ಶಾಸಕ ಜಿ ಎಸ್ ಗಡ್ಡದೇವರಮಠ, ಅಜ್ಮಂಪೀರ ಖಾದ್ರಿ, ಮುಖಂಡರಾದ ರವಿ ದಂಡಿನ, ಪ್ರಕಾಶ ಕರಿ, ಶ್ರೀಧರ ಕುರಡಗಿ, ರುದ್ರಣ್ಣ ಗುಳಗುಳಿ, ವೀರೇಂದ್ರ ಪಾಟೀಲ್ ಉಪಸ್ಥಿತರಿದ್ದರು.



ಗದಗದ ಕರ್ನಾಟಕ ಕುರುಬರ ಸಹಕಾರ ಪತ್ತಿನ ಸಂಘದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಿಎಂ ಸಿದ್ದರಾಮಯ್ಯ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಗದಗ ಕುರುಬರ ಸಂಘಕ್ಕೆ ಸಿಎಂ ಮೆಚ್ಚುಗೆ

ನೂರು ವರ್ಷಗಳ ಹಿಂದೆಯೇ ಗದಗದಲ್ಲಿ ಕುರುಬ ಸಮಾಜವನ್ನು ಸಂಘಟಿಸಿ ಸಹಕಾರ ಸಂಘ ಸ್ಥಾಪಿಸಿದ್ದು, ಅತ್ಯಂತ ಮುಂದಾಲೋಚನೆಯ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ಕಾರ್ಯ. ಶಿಕ್ಷಣ, ಸಂಘಟನೆ, ಹೋರಾಟ ಅಂಬೇ ಡ್ಕರ್ ಅವರು ದೇಶದ ಹಿಂದುಳಿದವರಿಗೆ ಕೊಟ್ಟಿರುವ ಮಂತ್ರ. ಆದರೆ, ಸಂವಿಧಾನ ಜಾರಿಗೆ ಮೊದಲೇ ಮುಂದಾಲೋಚನೆ ಯಿಂದ ಪತ್ತಿನ ಸಹಕಾರ ಸಂಘ ಸ್ಥಾಪಿಸಿರುವುದು ಅತ್ಯಂತ ಶ್ಲಾಘನೀಯ ಎಂದು ಸಿಎಂ ಸಿದ್ದರಾಮಯ್ಯ ಸಂತಸ ವ್ಯಕ್ತಪಡಿಸಿದರು.

- ಅಂಬೇಡ್ಕರ್, ಬಸವಣ್ಣ, ಮಹಾತ್ಮ ಗಾಂಧಿಯವರ ಆಶಯಗಳು ಈಡೇರಬೇಕಾದರೆ ಸರ್ವರಿಗೂ ಶಿಕ್ಷಣ ಸಿಗಬೇಕು
- ಶೂದ್ರ ವರ್ಗ ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿಯಲು ಅಕ್ಷರ ಸಂಸ್ಕೃತಿ ಯಿಂದ ವಂಚಿತರಾಗಿದ್ದೇ ಕಾರಣ
- ಸಂವಿಧಾನ ಜಾರಿಗೆ ಮೊದಲೇ ಮುಂದಾಲೋಚನೆಯಿಂದ ಪತ್ತಿನ ಸಹಕಾರ ಸಂಘ ಸ್ಥಾಪಿಸಿರುವುದು ಅತ್ಯಂತ ಶ್ಲಾಘನೀಯ

ಅಧಿಕಾರಿಗಳಿಗೆ ಸಿಎಂ ತರಾಟೆ

ಮೆಟ್ಟಿಲು ಹತ್ತಲಾಗದ ಕಾರಣಕ್ಕೆ ಸಿಎಂ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಮೊಟಕುಗೊಳಿಸಿ ಹಿಂದಿರುಗಿದ ಪ್ರಸಂಗ ಮಂಗಳವಾರ ನಡೆಯಿತು. ಪೂರ್ವನಿಗದಿಯಂತೆ ಇಲ್ಲಿನ ಪಂಡಿತ್ ಭೀಮಸೇನ ಜೋಶಿ ರಂಗ ಮಂದಿರದಲ್ಲಿ ಗದಗ ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ಉದ್ಘಾಟನೆ ಹಾಗೂ ಪ್ರಾಧಿಕಾರದ ಅಭಿವೃದ್ಧಿ ಪರಿಕಲ್ಪನೆ ಅನಾವರಣ ಕಾರ್ಯಕ್ರಮದಲ್ಲಿ ಸಿಎಂ ಭಾಗವಹಿಸಬೇಕಿತ್ತು. ಮಧ್ಯಾಹ್ನದ ಊಟ ಮುಗಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರಂಗಮಂದಿರಕ್ಕೆ ಬಂದ ಮುಖ್ಯಮಂತ್ರಿ ಅವರಿಗೆ ಕಾಲು ನೋವು ಇದ್ದ ಕಾರಣ ಮೆಟ್ಟಿಲು ಹತ್ತಿ ವೇದಿಕೆಗೆ ಬರಲು ಸಾಧ್ಯವಾಗಲಿಲ್ಲ. ಹೀಗಾಗಿ, ವೇದಿಕೆಗೆ ನೇರ ಸಂಪರ್ಕ ಕಲ್ಪಿಸುವ ಕೆಳಬದಿಯಲ್ಲಿದ್ದ ಎರಡು ಬಾಗಿಲುಗಳ ಮೂಲಕ ಅವರನ್ನು ಕರೆತರಲು ಸಚಿವ ಎಚ್.ಕೆ.ಪಾಟೀಲ ಮುಂದಾದರು. ಆದರೆ, ಎಡ ಭಾಗದ ಬಾಗಿಲನ್ನು ವೆಲ್ಡಿಂಗ್ ಮಾಡಿ ಶಾಶ್ವತವಾಗಿ ಮುಚ್ಚಿದ್ದರಿಂದ ಇಲ್ಲಿಂದಲೂ ಒಳಕ್ಕೆ ಪ್ರವೇಶ ಸಾಧ್ಯವಾಗಲಿಲ್ಲ. ಬಲಭಾಗದಲ್ಲಿಯೂ ಬೀಗ ಹಾಕಿದ್ದರಿಂದ ಸಕಾಲದಲ್ಲಿ ತೆಗೆಯಲು ಸಾಧ್ಯವಾಗಲಿಲ್ಲ. ಬೀಗ ಒಡೆಯುವ ಪ್ರಯತ್ನವೂ ಸಫಲವಾಗಲಿಲ್ಲ. ಇಷ್ಟೆಲ್ಲಾ ನಡೆಯುವವರೆಗೆ ಸುಮಾರು 15 ನಿಮಿಷ ಸಿಎಂ ಕಾರಿನಲ್ಲಿಯೇ ಕುಳಿತಿದ್ದರು. ಕೊನೆಗೆ ಸಹನೆ ಕಳೆದುಕೊಂಡ ಸಿಎಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಕೊನೆಗೆ ಕಾರ್ಯಕ್ರಮ ಮೊಟಕುಗೊಳಿಸಿ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ತೆರಳಿದರು.

ಗದಗದ ಲಕ್ಕುಂಡಿಗೆ ಭೇಟಿ ನೀಡಿದ ಸಿಎಂ ಸಿದ್ದರಾಮಯ್ಯ ಅವರು ಉತ್ಖನನದಲ್ಲಿ ದೊರೆತ ಶಿಲ್ಪಕಲೆಯನ್ನು ವೀಕ್ಷಿಸಿದರು.

ರಾಜ್ಯದಲ್ಲಿ ಇನ್ನೊಂದು ವಾರ ಸಾಧಾರಣ ಮಳೆ ಸಾಧ್ಯತೆ

ನೈಋತ್ಯ ಮುಂಗಾರು ದುರ್ಬಲ

ಬೆಂಗಳೂರು: ನೈರುತ್ಯ ಮುಂಗಾರು ದುರ್ಬಲಗೊಂಡು ಒಳನಾಡಿನಲ್ಲಿ ಒಣಹವೆ ಮುಂದುವರೆದಿದ್ದು, ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನಲ್ಲಿ 123 ಮಿ.ಮೀ. ನಷ್ಟು ಅತಿ ಹೆಚ್ಚು ಮಳೆ ಯಾಗಿದ್ದು, ರಾಜ್ಯದಲ್ಲಿ ವಾಡಿಕೆಗಿಂತ ಕಡಿಮೆ ಪ್ರಮಾಣದ ಮಳೆಯಾಗುತ್ತಿದೆ. ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳಲ್ಲಿ ವ್ಯಾಪಕ ಪ್ರಮಾಣದ ಮಳೆಯಾಗಿದೆ. ಹಾವೇರಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದ್ದು, ಹಾಸನ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಚದುರಿದಂತೆ ಅಲ್ಲಲ್ಲಿ ಮಳೆ ಬಿದ್ದಿದೆ. ಬೆಂಗಳೂರು ನಗರ, ರಾಮನಗರ, ಚಾಮರಾಜನಗರ, ಮೈಸೂರು, ತುಮಕೂರು, ಬೆಂಗಳೂರು ಗ್ರಾಮಾಂತರ ಸೇರಿದಂತೆ 19 ಜಿಲ್ಲೆಗಳ ಕೆಲವೆಡೆ ಅಲ್ಲಲ್ಲಿ ಸಾಧಾರಣ ಮಳೆಯಾಗಿದೆ. ಚಿಕ್ಕಬಳ್ಳಾಪುರ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಅತ್ಯಲ್ಪ ಪ್ರಮಾಣದ ಮಳೆಯಾಗಿದೆ. ಹವಾಮಾನ ಮುನ್ಸೂಚನೆ ಪ್ರಕಾರ, ರಾಜ್ಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದೆ. ಕರಾವಳಿ ಹಾಗೂ ಮಲೆನಾಡಿಗೆ ಹೊಂದಿಕೊಂಡಂತ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಲಕ್ಷಣಗಳಿವೆ. ಉತ್ತರ ಹಾಗೂ ದಕ್ಷಿಣ ಒಳನಾಡಿನಲ್ಲಿ ಒಣಹವೆ ಮುಂದುವರೆಯಲಿದ್ದು, ವಾರಾಂತ್ಯದವರೆಗೂ ಮಳೆ ಪ್ರಮಾಣ ಕಡಿಮೆ ಇರಲಿದೆ. ಭಾರೀ ಮಳೆಯಾಗುವ ಮುನ್ಸೂಚನೆ ಸದ್ಯಕ್ಕಿಲ್ಲ ಎಂದು ಹವಾಮಾನ ಇಲಾಖೆ ಹೇಳಿದೆ.

ತಗ್ಗಿದ ಜಲಾಶಯಗಳ ಒಳಹರಿವು

ಮುಂಗಾರು ಆರಂಭದಲ್ಲೇ ಭಾರೀ ಮಳೆಯಾದ ಪರಿಣಾಮ ರಾಜ್ಯದ ಪ್ರಮುಖ ಜಲಾಶಯಗಳ ಒಳಹರಿವು ಗಣನೀಯವಾಗಿ ಏರಿಕೆಯಾಗಿತ್ತು. ಕಳೆದ ಮೂರಾಲ್ಕು ದಿನಗಳಿಂದ ಮಳೆ ಪ್ರಮಾಣ ಕಡಿಮೆ ಯಾಗಿರುವ ಹಿನ್ನೆಲೆ ನದಿಗಳ ಹಾಗೂ ಜಲಾಶಯಗಳ ನೀರಿನ ಮಟ್ಟದಲ್ಲೂ ಕುಸಿತ ಕಂಡುಬಂದಿದೆ. ಕಬಿನಿ ಜಲಾಶಯ ಶೇ.90ರಷ್ಟು ಭರ್ತಿಯಾಗಿದ್ದು, 6 ಸಾವಿರ ಕ್ಯೂಸೆಕ್ಸ್‌ಗೂ ಹೆಚ್ಚಿನ ಒಳಹರಿವಿದೆ. ಕೆಆರ್‌ಎಸ್ ಜಲಾಶಯದಲ್ಲಿ ಶೇ.56 ರಷ್ಟು ನೀರು ಸಂಗ್ರಹವಾಗಿದ್ದು, 9 ಸಾವಿರ ಕ್ಯೂಸೆಕ್ಸ್‌ಗೂ ಅಧಿಕ ಪ್ರಮಾಣದ ಒಳಹರಿವಿದೆ. ಒಟ್ಟಾರೆ ಕಾವೇರಿ ಕೊಳ್ಳದ ನಾಲ್ಕು ಜಲಾಶಯಗಳಲ್ಲಿ ಶೇ.66 ರಷ್ಟು ನೀರು ಭರ್ತಿಯಾಗಿದೆ. ಕೃಷ್ಣ ಕೊಳ್ಳದ ನದಿ ಹಾಗೂ ಜಲಾಶಯಗಳಲ್ಲಿ ಏರಿಕೆಯಾಗಿದ್ದ ನೀರಿನ ಮಟ್ಟ ದಿನದಿಂದ ದಿನಕ್ಕೆ ಇಳಿಕೆಯಾಗುತ್ತಿದೆ.

ವಾರವಿಡೀ ಓದಬಹುದಾದ ಸಮೃದ್ಧ ಪ್ರವಾಸಿ ಸಂಚಿಕೆ ಓದುಗರ ಕೈಗೆ

ಪ್ರವಾಸಿ ಪ್ರಪಂಚ ಇಂದು ಲೋಕಾರ್ಪಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಶ್ವವಾಣಿ ಸಮೂಹದ ಸಾಹಸ 'ಪ್ರವಾಸಿ ಪ್ರಪಂಚ' ವಾರಪತ್ರಿಕೆ ಜೂನ್ 4ರಂದು ಬುಧವಾರ ಲೋಕಾ ರ್ಪಣೆಗೊಳ್ಳಲಿದೆ. ಪ್ರವಾಸೋದ್ಯಮದ ವಿವಿಧ ಮಜಲುಗಳನ್ನು ಕನ್ನಡಿಗರ ಮನೆಮನೆಗೆ ತಲುಪಿಸುವ ಉದ್ದೇಶದೊಂದಿಗೆ ಈ ವಾರಪತ್ರಿಕೆ ರೂಪುಗೊಂಡಿದೆ.

ಪ್ರವಾಸಿ ಪ್ರಪಂಚವನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಎಫ್‌ಕೆಸಿಸಿಐ ಸಭಾಂಗಣದಲ್ಲಿ ಬೆಳಗ್ಗೆ 11ಕ್ಕೆ ಲೋಕಾರ್ಪಣೆ ಮಾಡಲಿದ್ದಾರೆ. ಪ್ರವಾಸಿ ಪ್ರಪಂಚದ ಮುದ್ರಣ ಆವೃತ್ತಿಯನ್ನು ಸಿಎಂ ಬಿಡುಗಡೆ ಮಾಡಿದರೆ, ವೆಬ್‌ಸೈಟ್ ಅನ್ನು ಪ್ರವಾಸೋದ್ಯಮ ಸಚಿವ ಎಚ್.ಕೆ ಪಾಟೀಲ್ ಅವರು ಲೋಕಾರ್ಪಣೆ ಮಾಡಲಿದ್ದಾರೆ. ಡಿಜಿಟಲ್ ಚಾನೆಲ್‌ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ ಪಾಟೀಲ್ ಚಾಲನೆ ನೀಡಲಿದ್ದಾರೆ. ಸೋಶಿಯಲ್ ಮೀಡಿಯಾಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ಚಾಲನೆ ನೀಡಲಿದ್ದಾರೆ. ಈ ವೇಳೆ ನಟ ಡಾಲಿ ಧನಂಜಯ, ಜಂಗಲ್ ಲಾಡ್ಜ್ಸ್ ಮತ್ತು ರೆಸಾರ್ಟ್ಸ್ ಅಧ್ಯಕ್ಷ ಅನಿಲ್ ಚಿಕ್ಕಮಾದು ಭಾಗವಹಿಸಲಿದ್ದಾರೆ.

ವಿಶ್ವೇಶ್ವರ ಭಟ್ ಅವರ ಸಾರಥ್ಯದಲ್ಲಿ ಹೊರಬರಲಿ ರುವ 'ಪ್ರವಾಸಿ ಪ್ರಪಂಚ'ದ ಕಾರ್ಯ ನಿರ್ವಾಹಕ ಸಂಪಾದಕರಾಗಿ ನವೀನ್ ಸಾಗರ್ ಕಾರ್ಯನಿರ್ವ ಹಿಸಲಿದ್ದಾರೆ. ವಿಶ್ವವಾಣಿ ದಿನಪತ್ರಿಕೆ, ಲೋಕಧ್ವನಿ ದಿನಪತ್ರಿಕೆ, ವಿಶ್ವವಾಣಿ ಟಿವಿ ವಾಹಿನಿ, ವಾಗ್ದೇವಿ ವಿದ್ಯಾವರ್ಧಕ ಟ್ರಸ್ಟ್, ವಿಶ್ವವಾಣಿ ಮಾಧ್ಯಮ ವಿದ್ಯಾಪೀಠ, ವಿಶ್ವವಾಣಿ ಪುಸ್ತಕ ಪ್ರಕಾಶನಗಳು ಈಗಾಗಲೇ ವಿಶ್ವವಾಣಿ ಸಮೂಹದಲ್ಲಿವೆ. ಈಗಾಗಲೇ ಪ್ರವಾಸಿ ಪ್ರಪಂಚದ ಟೈಟಲ್ ಅನ್ನು ಹಿರಿಯ ನಟ, ರಾಜ್ಯಸಭಾ ಸದಸ್ಯ ಜಗ್ಗೇಶ್, ಮಾಜಿ ಸಚಿವೆ, ಹಿರಿಯ ನಟಿ ಜಯಮಾಲಾ, ನಟ ವಸಿಷ್ಠ ಸಿಂಹ ಅನಾವರಣ ಗೊಳಿಸಿ ಶುಭ ಹಾರೈಸಿದ್ದಾರೆ.

ಪ್ರವಾಸಿ ಪ್ರಪಂಚದಲ್ಲಿ ಏನಿರುತ್ತದೆ?

ಪ್ರವಾಸಿ ಪ್ರಪಂಚ ವಾರಕ್ಕೊಮ್ಮೆ ಪ್ರತಿ ಶನಿವಾರ ಪ್ರಕಟವಾಗಲಿದೆ. ಬ್ರಾಡ್ ಶೀಟ್ ಆಕಾರದಲ್ಲಿ ಕನಿಷ್ಠ 16 ಪುಟಗಳೊಂದಿಗೆ ಮುದ್ರಣ ಆವೃತ್ತಿ ಬರಲಿದ್ದು, ರಾಜ್ಯ-ದೇಶ-ವಿದೇಶಗಳ ಪ್ರವಾಸಿ ತಾಣಗಳ ಸೊಗಸಾದ ಸಚಿತ್ರ ಪರಿಚಯ, ಅಲ್ಲಿಗೆ ತಲುಪುವ ಬಗೆ, ಪ್ರವಾಸಿಗರ ಅನುಭವ, ಕಡಿಮೆ ಬಜೆಟ್‌ನ ಟೂರ್ ಪ್ಲಾನಿಂಗ್, ಉತ್ತಮ ವಸತಿ ವ್ಯವಸ್ಥೆ ಇತ್ಯಾದಿಗಳನ್ನೆಲ್ಲ ಒಳಗೊಳ್ಳಲಿದೆ. ಇದು ವೆಬ್ ಸೈಟ್, ಡಿಜಿಟಲ್ ಚಾನೆಲ್ ಸ್ವರೂಪಗಳಲ್ಲೂ ಪ್ರಕಟವಾಗಲಿದ್ದು, ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಅನ್ನೂ ಹೊಂದಿರಲಿದೆ. ಪ್ರವಾಸ, ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನ, ಸುದ್ದಿ, ಅಂಕಣ, ಪ್ರವಾಸ ಕಥನ, ಪ್ರವಾಸ ಪುಸ್ತಕ ವಿಮರ್ಶೆ, ಪ್ರವಾಸಿ ತಾಣ ಪರಿಚಯ ಸೇರಿದಂತೆ ಇನ್ನೂ ಹತ್ತಾರು ಆಸಕ್ತಿದಾಯಕ, ಸ್ವಾರಸ್ಯಪೂರ್ಣ ಮಾಹಿತಿಗಳನ್ನು ಪ್ರವಾಸಿ ಪ್ರಪಂಚ ಹೊಂದಿರಲಿದೆ. ಒಂದು ವಾರವಿಡೀ ಓದಬಹುದಾದ ಸಮೃದ್ಧ ಹೂರಣವಿರುತ್ತದೆ. ಇದಕ್ಕೆ ಓದುಗರೂ ಬರೆಯಬಹುದು ಹಾಗೂ ತಾವು ಭೇಟಿ ನೀಡಿದ ತಾಣದ ಕುರಿತ ಲೇಖನ, ಚಿತ್ರ, ವಿಡಿಯೋಗಳನ್ನೂ ಕಳಿಸಬಹುದು.

ಮಕ್ಕಳ ದಾಖಲಾತಿ ಇಲ್ಲದೆ ಬಂದ್ ಸ್ಥಿತಿಯಲ್ಲಿ ಚಾಮರಾಜನಗರ ಸರಕಾರಿ ಶಾಲೆ

ಶಿಕ್ಷಕರ ಒಳಜಗಳ ಆರೋಪ: ಶಾಲೆಗಿಲ್ಲ ದಾಖಲಾತಿ

ಚಾಮರಾಜನಗರ: ಶಿಕ್ಷಕರ ಒಳಜಗಳ ಹಾಗೂ ಸರಿಯಾಗಿ ಪಾಠ ಪ್ರವಚನ ನಡೆಯದ ಆರೋಪದ ಹಿನ್ನೆಲೆ ಚಾಮರಾಜನಗರ ತಾಲೂಕಿನ ಮರಿಯಾಲ ಸ.ಹಿ.ಪ್ರಾ.ಶಾಲೆಯಲ್ಲಿ ಯಾವುದೇ ಅಡ್ಮಿಷನ್ ಆಗಿಲ್ಲ. ಇದರಿಂದ ಇಡೀ ಶಾಲೆ ಖಾಲಿಹೊಡೆಯುತ್ತಿದೆ.

ಇಬ್ಬರು ಶಿಕ್ಷಕರು, ಇಬ್ಬರು ಅಡುಗೆ ಸಿಬ್ಬಂದಿ, ಏಳು ಕೊಠಡಿಗಳು ಇರುವ ಈ ಸರಕಾರಿ ಶಾಲೆ ಯಾವುದೇ ವಿದ್ಯಾರ್ಥಿಗಳಿಲ್ಲದೇ ಬಿಕೋ ಎನ್ನುತ್ತಿದೆ. ಶಿಕ್ಷಕರ ಒಳಜಗಳ, ಸರಿಯಾಗಿ ನಡೆಯದ ಪಾಠ ಪ್ರವಚನ ಆರೋಪದಿಂದಾಗಿ ಶಾಲೆ ಆರಂಭವಾಗಿ ನಾಲ್ಕು ದಿನಗಳು ಕಳೆದರೂ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿಲ್ಲ. ಸರಕಾರಿ ಶಾಲೆಗೆ ಪ್ರವೇಶ ಪಡೆಯದೇ ವಿದ್ಯಾರ್ಥಿಗಳು ಖಾಸಗಿ ಶಾಲೆಗಳತ್ತ ಮುಖ ಮಾಡಿದ್ದಾರೆ. ಸಮರ್ಪಕ ಬಿಸಿಯೂಟ ನೀಡಲ್ಲ, ಕುಡಿಯುವ ನೀರಿಲ್ಲ, ಸ್ವಚ್ಛತೆ

ಇಲ್ಲ, ಶಿಕ್ಷಕರ ಜಗಳದಿಂದ ಶಾಲೆಯ ವಾತಾವರಣ ಹದಗೆಟ್ಟಿದೆ ಎಂದು ಪೋಷಕರು ಆರೋಪಿಸಿದ್ದಾರೆ. ಕಳೆದ ವರ್ಷ 26 ವಿದ್ಯಾರ್ಥಿಗಳಿದ್ದರು. ಈ ಬಾರಿ ಬಹುತೇಕ ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗೆ ಪ್ರವೇಶ ಪಡೆದಿದ್ದಾರೆ. ಮೂರು ತಿಂಗಳ ಹಿಂದೆ ಮುಖ್ಯ ಶಿಕ್ಷಕಿ ಸುಶೀಲಾ ಪೊಲೀಸ್ ರಕ್ಷಣೆ ಪಡೆದಿದ್ದರು. ತಮ್ಮೂರ ಶಾಲೆಗೆ ನಿತ್ಯ ಪೊಲೀಸ್ ಕಾವಲಿನಿಂದ ಪೋಷಕರು ಬೇಸತ್ತಿದ್ದರು. ಸರಕಾರಿ ಶಾಲೆಯ ದುರಾವಸ್ಥೆಯಿಂದ ಆಕ್ರೋಶಗೊಂಡು ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಲು ಮುಂದಾಗಿದ್ದಾರೆ.

- ಮರಿಯಾಲ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದುರಾವಸ್ಥೆ
- ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿ ಸಲು ಮುಂದಾಗಿರುವ ಪೋಷಕರು
- ಸಮರ್ಪಕ ಬಿಸಿಯೂಟ, ಕುಡಿಯುವ ನೀರು, ಸ್ವಚ್ಛತೆ ಇಲ್ಲದ ಆರೋಪ

ವಿಶ್ವವಾಣಿ

ಸಂಪಾದಕೀಯ

ಯಾವ ಹುತ್ತದಲ್ಲಿ ಯಾವ ಹಾವೋ?

ಇದು ನಿಜಕ್ಕೂ ಎಚ್ಚರಿಕೆಯ ಗಂಟೆಯೇ ಸರಿ. ಪಂಜಾಬ್ ಪೊಲೀಸರು ಭಾನುವಾರ ಭರ್ಜರಿ ಕಾರ್ಯಾಚರಣೆಯನ್ನು ನಡೆಸಿ 113 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ ಅವರಿಂದ ಗಣನೀಯ ಪ್ರಮಾಣದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಹೀಗೆ ವಶಪಡಿಸಿಕೊಳ್ಳಲಾದ ದ್ರವ್ಯಗಳಲ್ಲಿ 2 ಕೆ.ಜಿ.ಗೂ ಹೆಚ್ಚಿನ ಹೆರಾಯಿನ್, 330 ಗ್ರಾಂ.ನಷ್ಟು ಅಫೀಮು, 32 ಸಾವಿರಕ್ಕೂ ಹೆಚ್ಚಿನ ಮಾದಕ ವಸ್ತು ಮಾತ್ರೆಗಳು ಸೇರಿದ್ದವು ಎಂಬುದು ಲಭ್ಯಮಾಹಿತಿ. ಮಾದಕ ದ್ರವ್ಯಗಳ ವಿರುದ್ಧ ಪಂಜಾಬ್ ಸರಕಾರವು ಹಮ್ಮಿಕೊಂಡಿರುವ ಅಭಿಯಾನದ ಭಾಗವಾಗಿ ಕಳೆದ 92 ದಿನಗಳಲ್ಲಿ 14,944 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಲಾಗಿದೆ ಎಂಬ ಸಂಗತಿಯು, ಮಾದಕ ವಸ್ತುಗಳ ತಯಾರಕರು ಮತ್ತು ಮಾರಾಟಗಾರರ ಜಾಲವು ಅಲ್ಲಿ ಅದೆಷ್ಟು ವ್ಯಾಪಕವಾಗಿದೆ ಎಂಬುದಕ್ಕೆ ಸಾಕ್ಷಿಯಾಗಬಲ್ಲದು. ಹೀಗಾಗಿ ಮಾದಕದ್ರವ್ಯ ವ್ಯಸನಪೀಡಿತ ಪಂಜಾಬ್ ರಾಜ್ಯವನ್ನು ಉದ್ದೇಶಿಸಿ 'ಉಡ್ತಾ ಪಂಜಾಬ್' ಎಂಬ ಗ್ರಹಿಕೆ ಹೊಮ್ಮಿದ್ದರಲ್ಲಿ ಅತಿಶಯೋಕ್ತಿಯೇನಿಲ್ಲ ಎನಿಸುತ್ತದೆ. ಪಂಜಾಬ್ ಒಂದರಲ್ಲೇ ಈ ಪ್ರಮಾಣದಲ್ಲಿದ್ದರೆ ದೇಶದ ಮಿಕ್ಕ ಭಾಗಗಳಲ್ಲಿ ಈ ದುರುಳರ ಕಾರ್ಯಜಾಲ ಅದೆಷ್ಟು ವ್ಯಾಪಿಸಿರಬಹುದು ಎಂಬುದನ್ನು ಊಹಿಸಿಕೊಳ್ಳಿ. ಆದ್ದರಿಂದ, ಅನುಮಾನಾಸ್ಪದ ಚಟುವಟಿಕೆಗಳು ಕಂಡುಬಂದಲ್ಲಿ ಅದನ್ನು ಆಳುಗ ವ್ಯವಸ್ಥೆಯ ಗಮನಕ್ಕೆ ತರುವುದು ಪ್ರಜ್ಞಾವಂತ ನಾಗರಿಕರ ಹೊಣೆಗಾರಿಕೆಯಾಗಬೇಕು ಹಾಗೂ ಅಂಥ ಮಾಹಿತಿಯನ್ನು ಅನುಸರಿಸಿ ಸೂಕ್ತ ಕ್ರಮಗಳಿಗೆ, ಕಾರ್ಯಾಚರಣೆಗಳಿಗೆ ಮುಂದಾಗುವುದು ಆಳುಗರ ಆದ್ಯತಾ ಕಾರ್ಯವಾಗಬೇಕು. ಮಾದಕ ವಸ್ತುಗಳ ಮಾರಾಟಗಾರರಿಗೆ ಯುವಜನರೇ ಮುಖ್ಯಗುರಿ. ವಿಶ್ವದ ವಿವಿಧ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿನ ಯುವಸಮುದಾಯದ ಸಂಖ್ಯೆ ಗಣನೀಯವಾಗಿದೆ. 'ಭವ್ಯ ಭಾರತದ ಭವಿಷ್ಯ' ಎನಿಸಿಕೊಂಡಿರುವ ಯುವಜನರನ್ನು ಮಾದಕ ವಸ್ತುಗಳ ಮಾರಾಟಗಾರರ ಕಬಂಧಬಾಹುಗಳು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಮೊದಲೇ, ಅಂಥ ದುರುಳರಿಗೆ ತಕ್ಕ ಶಾಸ್ತಿ ಮಾಡಬೇಕಿದೆ. ಇದು ಈ ಕ್ಷಣದ ಅನಿವಾರ್ಯತೆಯೂ ಹೌದು.

ಸೊಂಪಾದಕೀಯ

ಮೊದಲು ಕ್ಷಮೆ, ಆಮೇಲೆ 'ಮುಂದಾ'!

ಬಹುಭಾಷಾ ನಟ ಕಮಲ್ ಹಾಸನ್ ಇತ್ತೀಚೆಗೆ ಕನ್ನಡ ಭಾಷೆ ವಿಷಯದಲ್ಲಿ ಇಲ್ಲಸಲ್ಲದ್ದು ಮಾತಾಡಿ ತಮ್ಮ ಕುತ್ತಿಗೆಗೆ ತಂದುಕೊಂಡ ಪ್ರಕರಣದಲ್ಲಿ ಕೋರ್ಟ್‌ನಲ್ಲೂ ಅವರಿಗೆ ಹಿನ್ನಡೆ ಆಗಿದೆ. ತಮಿಳು ಕನ್ನಡದ ಮಾತೃಭಾಷೆ, ತಮಿಳಿನಿಂದಲೇ ಕನ್ನಡ ಹುಟ್ಟಿದ್ದು ಅಂತ ಕನ್ನಡದ ಜನ್ಮದ ಬಗ್ಗೆ ಮಾತಾಡಿದ್ದ ಕಮಲ್ ಅವರ ಜನ್ಮ ಜಾಲಾಡಿದೆ ಕೋರ್ಟು. ತಮ್ಮ ಸಿನಿಮಾ ಪ್ರಮೋಷನ್ ವಿಷಯದಲ್ಲಿ ಸಿನಿಮಾ ಬಗ್ಗೆ ಮಾತಾಡೋದು ಬಿಟ್ಟು, ಇರಲಾರದೆ ಇರುವೆ ಬಿಟ್ಟುಕೊಂಡರು ಎಂಬಂತೆ ಸಂಬಂಧ ಇಲ್ಲದ ವಿಷಯ ಮಾತಾಡಲು ಹೋಗಿದ್ದಕ್ಕೆ ಕಮಲ್ ಅವರ 'ಥಗ್ ಲೈಫ್' ಸಿನಿಮಾ ಬಿಡುಗಡೆಯ ವಿಷಯದಲ್ಲಿ ತಗಲಾಕಿಕೊಂಡಿತ್ತು. ಕನ್ನಡ ಹೋರಾಟಗಾರರು, ವಾಣಿಜ್ಯ ಮಂಡಳಿಯವರು ಎಲ್ಲರೂ ಒಂದಾಗಿ ಕಮಲ್ ಕ್ಷಮೆ ಕೇಳುವವರೆಗೆ ಕರ್ನಾಟಕದಲ್ಲಿ ಸಿನಿಮಾ ಬಿಡುಗಡೆ ಮಾಡಲ್ಲ ಅಂತ ಪಟ್ಟು ಹಿಡಿದು ಕುಳಿತಿದ್ದರು. ಅತ್ತ ಕಮಲ್ ಹಾಸನ್ ಕೂಡಾ 'ನಾನು ಕ್ಷಮೆ ಕೇಳಲ್ಲ' ಅಂತಲೇ ಹಠ ಮಾಡುತ್ತಿದ್ದರು. ಇದರ ನಡುವೆಯೇ ತಮ್ಮ ಮರ್ಜಿಗೆ ತಕ್ಕಂತೆ ಮಾತಾಡಿದ್ದ ಕಮಲ್ ತಮ್ಮ ಚಿತ್ರದ ಬಿಡುಗಡೆಯ ವಿಷಯಕ್ಕೆ ಮಾತ್ರ ಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದರು. ಕರ್ನಾಟಕದಲ್ಲಿ ಥಗ್ ಲೈಫ್ ಚಿತ್ರದ ಬಿಡುಗಡೆಗೆ ಹಲವರು ತೊಂದರೆ ಮಾಡುತ್ತಿದ್ದಾರೆ. ಹಾಗಾಗಿ ಅದರ ಸುಸೂತ್ರ ಬಿಡುಗಡೆಗೆ ಮತ್ತು ಪ್ರದರ್ಶನದ ವೇಳೆ ಪ್ರೇಕ್ಷಕರಿಗೆ ತೊಂದರೆ ಆಗದಂತೆ ರಕ್ಷಣೆ ಕೊಡಬೇಕು ಅಂತ ಕೋರ್ಟ್‌ನ ಮೊರೆಹೋಗಿದ್ದರು ಕಮಲ್. ಆದರೆ ಈಗ ಕೋರ್ಟು ಕಮಲ್ ಹಾಸನ್ ಅವರಿಗೆ ವಿಮಲ್ ಹಾಕಿಕೊಳ್ಳದೆ ಉಗಿಯುವ ಕೆಲಸ ಮಾಡಿದೆ. ''ನೀವು ಮಾಡಿದ ತಪ್ಪಿಗೆ ಪೊಲೀಸರು ನಿಮಗೆ ರಕ್ಷಣೆ ನೀಡಬೇಕೇ, ಭಾಷೆಯ ಹುಟ್ಟಿನ ಬಗ್ಗೆ ಮಾತಾಡೋಕೆ ನೀವೇನು ಭಾಷಾತಜ್ಞರೇ?'' ಅಂತ ತಪರಾಕಿ ನೀಡಿದೆ ಕೋರ್ಟು. ''ನೀವು ಕನ್ನಡಿಗರ ಭಾವನೆಗಳಿಗೆ ಕುಂದು ತಂದಿದ್ದೀರಿ, ಹಂಗಾಗಿ 'ಮುಂದಾ?' ಅಂತ ಕೇಳುವ ಮುನ್ನ ಮೊದಲು ಕನ್ನಡಿಗರ ಕ್ಷಮೆ ಕೇಳಿ, ಆಮೇಲೆ ನಿಮ್ಮ ಸಿನಿಮಾ ಬಿಡುಗಡೆಯ ಅರ್ಜಿಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೇವೆ'' ಅಂತ ಕೋರ್ಟು ಕಮಲ್‌ಗೆ ಬಿಸಿ ಮುಟ್ಟಿಸಿದೆ. ಹಾಗಾಗಿ, ಕ್ಷಮೆ ಕೇಳೋದೇ ಇಲ್ಲ ಹಠ ಹಿಡಿದು ಕೂತಿದ್ದ ಕಮಲ್‌ಗೆ ಮತ್ತು ಅವರ ಚಿತ್ರಕ್ಕೆ ಇದು ಕರ್ನಾಟಕದಲ್ಲಿ ದೊಡ್ಡ ಹಿನ್ನಡೆಯಂತೂ ಆಗಿದೆ.

ಸಂಪಾದಕರ ಸದ್ಯಶೋಧನೆ

'ಭುಜಬಲ್'ದ ಪರಾಕ್ರಮ

ಅಧಿಕಾರ ರಾಜಕಾರಣದಲ್ಲಿ ಪಳಗುವುದು ಹೇಗೆ, ಯಾವ ನಾಣ್ಯ ಚಿಮ್ಮಿದರೂ ತಾನು ಹೇಳಿದ್ದೇ ಮೇಲ್ಮುಖವಾಗಿ ಬೀಳುವಂತೆ ಮಾಡುವುದು ಹೇಗೆ ಎಂಬ ತಂತ್ರವನ್ನು ಹಿಂದುಳಿದ ವರ್ಗಗಳ ನಾಯಕ ಹಾಗೂ ಮಹಾರಾಷ್ಟ್ರ ರಾಜ್ಯ ಸರಕಾರದಲ್ಲಿ ಪ್ರಸ್ತುತ ಸಂಪುಟ ದರ್ಜೆ ಸಚಿವರಾಗಿರುವ ಛಗನ್ ಚಂದ್ರಕಾಂತ ಭುಜಬಲ್ ಅವರಿಂದ ಕಲಿಯಬೇಕು. ಕಾರಣ, ಸರಕಾರದಲ್ಲಿ ಮಂತ್ರಿಯಾಗುವ ಕಲೆ ಅವರಿಗೆ ಸಿದ್ಧಿಸಿದೆ. ಮಹಾತ್ಮ ಗಾಂಧಿಯವರನ್ನು ಹತ್ಯೆಗೈದ ನಾಥೂರಾಮ್ ಗೋಡ್ಸೆಯನ್ನು 'ಹುತಾತ್ಮ' ಎಂದು ಬಿಜೆಪಿಯ ಸಂಸದ ಸಾಕ್ಷಿ ಮಹಾರಾಜ್ ಕರೆಯುವುದಕ್ಕಿಂತ ಎಷ್ಟೋ ವರ್ಷಗಳ ಮೊದಲೇ ಛಗನ್ ಭುಜಬಲ್, 'ಈ ದೇಶದಲ್ಲಿ ಎಲ್ಲೆಲ್ಲಿ ಮಹಾತ್ಮ ಗಾಂಧಿ ಪ್ರತಿಮೆಗಳಿವೆಯೋ, ಅಲ್ಲೆಲ್ಲ ಗೋಡ್ಸೆ ಪ್ರತಿಮೆಗಳನ್ನು ಸ್ಥಾಪಿಸಬೇಕು' ಎಂದು ಕರೆಕೊಟ್ಟು ವಿವಾದಕ್ಕೆ ಸಿಲುಕಿದ್ದರು. ಆಗ ಅವರು ಮುಂಬೈ ಮಹಾನಗರದ ಮೇಯರ್ ಆಗಿದ್ದರು ಮತ್ತು ಶಿವಸೇನೆಯಲ್ಲಿದ್ದರು. ಶಿವಸೇನೆಯ ನಾಯಕ ಬಾಳ್ ಠಾಕ್ರೆ ಅವರ ಬಲಗೈ ಬಂಟ ಎಂದು ಕರೆಯಿಸಿಕೊಂಡಿದ್ದ ಭುಜಬಲ್, ತಮ್ಮ ನಾಯಕ ಕಾಲಿನಲ್ಲಿ ತೋರಿಸಿದನ್ನು ತಲೆ ಮೇಲೆ ಇಟ್ಟು ಮಾಡಿತೋರಿಸುತ್ತಿದ್ದರು. 'ನನ್ನ ಮನೆದೈವ ಠಾಕ್ರೆ, ನನ್ನ ಮನೆ ಠಾಕ್ರೆ ಭಿಕ್ಷೆ' ಎಂದು ಹೇಳಿ ಸ್ವಾಮಿನಿಷ್ಠೆಯನ್ನು ಮೆರೆದಿದ್ದ ಭುಜಬಲ್, ಮುಂಬೈಯಲ್ಲಿದ್ದಾಗ ಬಾಳ್ ಠಾಕ್ರೆಯವರನ್ನು ಒಂದು ದಿನವೂ ನೋಡದ ದಿನಗಳಿರಲಿಲ್ಲ. ಸದಾ ಅವರ ಮನೆಯಲ್ಲಿಯೇ ಇರುತ್ತಿದ್ದ ಅವರನ್ನು ನೋಡದಿದ್ದರೆ ಠಾಕ್ರೆಗೂ ಸಮಾಧಾನವಾಗುತ್ತಿರಲಿಲ್ಲ. ಶಿವಸೇನೆಯ ಆರಂಭಿಕ ಕ್ರಿಯಾಶೀಲ ಸದಸ್ಯರ ಪೈಕಿ ಭುಜಬಲ್ ಸಹ ಒಬ್ಬರಾಗಿದ್ದರು. 1985ರಲ್ಲಿ ಮುಂಬೈನ ಹುತಾತ್ಮ ಚೌಕದಲ್ಲಿ ದಲಿತ ಸಮಾವೇಶ ನಡೆದಾಗ, ಗೋಮೂತ್ರ ಸಿಂಪಡಿಸುವುದರ ಮೂಲಕ ಸ್ವಚ್ಛಗೊಳಿಸಿ ವಿವಾದಕ್ಕೆ ತುತ್ತಾಗಿದ್ದರು. ಮುಂಬೈನ ಬೈಕುಲ್ಲಾ ಮಾರ್ಕೆಟ್‌ನಲ್ಲಿ ತಮ್ಮ ತಾಯಿಯ ಹಣ್ಣು-ತರಕಾರಿ ಅಂಗಡಿಯಲ್ಲಿ, ತಾವೂ ಅದೇ ವ್ಯಾಪಾರ ಮಾಡುತ್ತಿದ್ದ ಭುಜಬಲ್, ಮಹಾರಾಷ್ಟ್ರ ರಾಜಕಾರಣದಲ್ಲಿ ಬೆಳೆದು, ವ್ಯಾಪಿಸಿದ ರೀತಿ ಎಂಥವರಿಗಾದರೂ ಅಚ್ಚರಿ ಮೂಡಿಸಬಲ್ಲುದು. ಮೂಲತಃ ನಾಸಿಕ್‌ನವರಾದ ಅವರು, ಮಾಲಿ (ಗಾರ್ಡನರ್) ಜಾತಿಗೆ ಸೇರಿದವರು. ತಾಯಿಯ ತರಕಾರಿ ವ್ಯಾಪಾರದಲ್ಲಿ ಸಹಾಯ ಮಾಡುತ್ತಾ, ಶಾಲೆಗೆ ಹೋಗುತ್ತಿದ್ದರು. ಹಾಗೆ ಮುಂದೆ, ಮೆಕ್ಯಾನಿಕಲ್ ಎಂಜಿನಿಯರಿಂಗ್ ಡಿಪ್ಲೊಮ ಮುಗಿಸಿದರು. ಶಿವಸೇನೆ ಏರ್ಪಡಿಸಿದ ಕಾರ್ಯಕ್ರಮವೊಂದರಲ್ಲಿ ಆಕಸ್ಮಿಕವಾಗಿ ಪಾಲ್ಗೊಂಡಿದ್ದ ಭುಜಬಲ್‌ರ ಉತ್ಸಾಹ ಮತ್ತು ಕ್ರಿಯಾಶೀಲತೆಯನ್ನು ನೋಡಿ ಠಾಕ್ರೆ, ಪಕ್ಷ ಸೇರುವಂತೆ ಹೇಳಿದರು. ಅಲ್ಲಿಂದ ಅವರ ರಾಜಕೀಯ ನಂಟು ಆರಂಭವಾಗಿ ಇಲ್ಲಿ ತನಕ ಕರೆದುಕೊಂಡು ಬಂದಿದೆ. 1973ರಲ್ಲಿ ಮೊದಲ ಬಾರಿಗೆ ಮುಂಬೈ ಮಹಾನಗರದಲ್ಲಿ ಕಾರ್ಪೊರೇಟರ್ ಆಗಿ ಆಯ್ಕೆಯಾದ ಅವರು ಎರಡು ಸಲ ಮೇಯರ್ ಕೂಡ ಆದರು. 1985ರಿಂದ 1990ರವರೆಗೆ ಅವರು ಮಹಾರಾಷ್ಟ್ರ ವಿಧಾನಸಭೆಯಲ್ಲಿ ಶಿವಸೇನೆಯ ಏಕೈಕ ಶಾಸಕರಾಗಿದ್ದರು. 1990ರಲ್ಲಿ ಬಿಜೆಪಿ-ಶಿವಸೇನೆ ವಿಧಾನಸಭಾ ಚುನಾವಣೆಯಲ್ಲಿ 85 ಸ್ಥಾನಗಳನ್ನು ಪಡೆದುಕೊಂಡಾಗ, ತಮ್ಮನ್ನು ಸಹಜವಾಗಿ ಪ್ರತಿಪಕ್ಷದ ನಾಯಕನನ್ನಾಗಿ ಮಾಡುತ್ತಾರೆ ಎಂದು ಭುಜಬಲ್ ನಿರೀಕ್ಷಿಸಿದ್ದರು. ಆದರೆ ಬಾಳ್ ಠಾಕ್ರೆ, ತಮ್ಮ ಪಕ್ಷದ ಮತ್ತೊಬ್ಬ ನಾಯಕ ಮನೋಹರ ಜೋಶಿಯವರನ್ನು ಆ ಸ್ಥಾನದಲ್ಲಿ ಕುಳ್ಳಿರಿಸಿದರು. ಅದರಿಂದ ಮನನೊಂದ ಭುಜಬಲ್, 1991ರಲ್ಲಿ ಸೇನೆಯನ್ನು ತೊರೆದು, ಶರದ್ ಪವಾರ್ ನೇತೃತ್ವದ ಕಾಂಗ್ರೆಸ್ ಸೇರಿದರು. ಆ ದಿನಗಳಲ್ಲಿ ಠಾಕ್ರೆ ವಿರುದ್ಧ ಯಾರೂ ಮಾತಾಡುತ್ತಿರಲಿಲ್ಲ. ಆದರೆ ಠಾಕ್ರೆಯನ್ನು ಹಿಗ್ಗಾಮುಗ್ಗಾ ಟೀಕಿಸಿದವರಲ್ಲಿ ಮೊದಲಿಗರೆಂದರೆ ಭುಜಬಲ್.

ಜೀವಮಾನದ ಗುಟ್ಟುಗಳನ್ನು ರಟ್ಟು ಮಾಡುವ ಸತ್ಯಪ್ರೇರಕ ಮಿಶ್ರಣ

ಸ್ಕೊಪಾಲಮಿನ್ ಒಂದು ಶಕ್ತಿಶಾಲಿಯಾದ ಆಲ್ಕಲಾಯ್ಡ್. ಹೆನ್ಬೇನ್, ಬೆಲ್ಲಡೊನ್ನ, ದತ್ತೂರಿ ಮುಂತಾದ ಗಿಡಗಳಲ್ಲಿ ಅಧಿಕ ಪ್ರಮಾಣದಲ್ಲಿರುತ್ತದೆ. ಮಾನವನ ಇತಿಹಾಸದಲ್ಲಿ, ಅವನೊಡನೆ ಜತೆಜತೆಯಾಗಿ ಹೆಜ್ಜೆಯನ್ನು ಹಾಕಿರುವ ಸ್ಕೊಪಾಲಮಿನ್ ನಾಟಿ ವೈದ್ಯರಿಗೆ, ಕಳ್ಳಕಾಕರಿಗೆ, ಮಂತ್ರವಾದಿಗಳಿಗೆ ಹಾಗೂ ಆಧುನಿಕ ವೈದ್ಯರಿಗೆ ತನ್ನ ದಶಾವತಾರಗಳನ್ನು ತೋರುತ್ತಾ ಬಂದಿದೆ.



ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
vveditoped@gmail.com

ಸೋಲನೇಸಿ ಎಂಬ ಸಸ್ಯ ಕುಟುಂಬದ ಜನಪ್ರಿಯ ಸದಸ್ಯರೆಂದರೆ ನಮ್ಮ ಬದನೆಕಾಯಿ, ಆಲೂಗಡ್ಡೆ, ಟೊಮೇಟೊ, ದಪ್ಪ ಮೆಣಸಿನಕಾಯಿ, ತಂಬಾಕು, ದತ್ತೂರಿ ಹಾಗೂ ಅಶ್ವಗಂಧ. ಇವೆಲ್ಲವೂ ಜನಸಾಮಾನ್ಯರಿಗೆ ಪರಿಚಿತವಾದ ಸಸ್ಯಗಳು. ಬ್ರುಗ್‌ಮಾನ್ಷಿಯ, ಬೆಲ್ಲಡೊನ್ನ, ಹೆನ್ಬೇನ್, ಮಾಂಡ್ರೇಕ್, ಪೆಟೂನಿಯ ಮುಂತಾದವು ಅಷ್ಟು ಪರಿಚಿತವಲ್ಲ. ಆದರೆ ವೈದ್ಯಕೀಯದ ಪ್ರಾಥಮಿಕ ಅರಿವನ್ನು ಪಡೆದವರಿಗೆ ಈ ಸಸ್ಯಗಳ ಪರಿಚಯವಿರುತ್ತದೆ. ಈ ಸಸ್ಯಗಳಲ್ಲಿ ಪ್ರಧಾನವಾಗಿ ಟ್ರೋಪೇನ್ ಆಲ್ಕಲಾಯ್ಡುಗಳಿರುತ್ತವೆ. ಅವುಗಳಲ್ಲಿ ಅಟ್ರೋಪಿನ್, ಹೊಯಾಸಮಿನ್, ಸ್ಕೊಪಾಲಮಿನ್ ಮುಖ್ಯವಾದವು. ನಮ್ಮ ನರಮಂಡಲದ ಕೆಲಸ ಕಾರ್ಯಗಳಿಗೆ ಅಗತ್ಯವಾದ 'ಅಸಿಟೈಲ್ ಕೋಲಿನ್' ಎಂಬ ನರವಾಹಕವನ್ನು ಪ್ರತಿಬಂಧಿಸಬಲ್ಲಂಥವು. ಹಾಗಾಗಿ ಈ ಸಸ್ಯಗಳಲ್ಲಿರುವ ಆಯ್ದ ರಾಸಾಯನಿಕ ಘಟಕಗಳನ್ನು ರಾಸಾಯನಿಕ ಯುದ್ಧಗಳಲ್ಲಿ ಬಳಸುವುದುಂಟು. ಹಾಗೆಯೇ ಇವು ವಿಷ ಪದಾರ್ಥಗಳಾಗಿಯೂ ಕುಪ್ರಸಿದ್ಧ. ವಿಷ ಪದಾರ್ಥಗಳು ಎಂದರೆ ಏನು? ನಾಗರಹಾವಿನ ವಿಷವು ಜೀವವನ್ನು ತೆಗೆಯುತ್ತದೆ. ಅದೇ ವಿಷವನ್ನು ಮಿತ ಪ್ರಮಾಣದಲ್ಲಿ ನೀಡಿದರೆ ಹೃದಯದ ಮಕುಟ ಧಮನಿಯಲ್ಲಿ ಅಡಚಿಕೊಂಡಿರುವ ರಕ್ತದ ಹೆಪ್ಪನ್ನು ಕರಗಿಸುತ್ತದೆ. ಜೀವವನ್ನು ಉಳಿಸುತ್ತದೆ. ಹಾಗಾಗಿ ಒಂದು ರಾಸಾಯನಿಕದ ಪ್ರಮಾಣವು ಅದು ವಿಷವೋ ಇಲ್ಲ ಔಷಧವೋ ಎನ್ನುವುದನ್ನು ನಿರ್ಧರಿಸುತ್ತದೆ. ಈ ಹಿನ್ನೆಲೆಯಲ್ಲಿ ಹಲವು ಟ್ರೋಪೇನ್ ಆಲ್ಕಲಾಯ್ಡುಗಳು ವಿಷವಾಗಿಯೂ ಕೆಲಸ ಮಾಡುವುದರ ಜತೆಯಲ್ಲಿ ಉಪಯುಕ್ತ ಔಷಧಗಳಾಗಿಯೂ ಪ್ರಖ್ಯಾತವಾಗಿವೆ. ಜತೆಗೆ ಅನಾದಿ ಕಾಲದಿಂದಲೂ ನಾಟಿ ವೈದ್ಯದಲ್ಲೂ, ಧಾರ್ಮಿಕ ವಿಧಿ ವಿಧಾನಗಳಲ್ಲೂ, ಮಾಟ ಮಂತ್ರಗಳಲ್ಲಿಯೂ ಬಳಕೆಯಲ್ಲಿವೆ. ಅಂಥ ರಾಸಾಯನಿಕಗಳಲ್ಲಿ ಸ್ಕೊಪಾಲಮಿನ್ ಮುಖ್ಯವಾದದ್ದು.

ಸ್ಕೊಪಾಲಮಿನ್ ಒಂದು ಶಕ್ತಿಶಾಲಿಯಾದ ಆಲ್ಕಲಾಯ್ಡ್. ಹೆನ್ಬೇನ್, ಬೆಲ್ಲಡೊನ್ನ, ದತ್ತೂರಿ ಮುಂತಾದ ಗಿಡಗಳಲ್ಲಿ ಅಧಿಕ ಪ್ರಮಾಣದಲ್ಲಿರುತ್ತದೆ. ಮಾನವನ ಇತಿಹಾಸದಲ್ಲಿ, ಅವನೊಡನೆ ಜತೆಜತೆಯಾಗಿ ಹೆಜ್ಜೆಯನ್ನು ಹಾಕಿರುವ ಸ್ಕೊಪಾಲಮಿನ್ ನಾಟಿ ವೈದ್ಯರಿಗೆ, ಕಳ್ಳಕಾಕರಿಗೆ, ಮಂತ್ರವಾದಿಗಳಿಗೆ ಹಾಗೂ ಆಧುನಿಕ ವೈದ್ಯರಿಗೆ ತನ್ನ ದಶಾವತಾರಗಳನ್ನು ತೋರುತ್ತಾ ಬಂದಿದೆ. ಇಂದಿಗೂ ತನ್ನ ಸು/ಕುಖ್ಯಾತಿಯನ್ನು ಉಳಿಸಿಕೊಂಡಿದೆ. ಅದರ ದಶಾವತಾರಗಳಲ್ಲಿ ಕೆಲವು ಅವತಾರಗಳ ಪರಿಚಯವನ್ನು ಮಾಡಿಕೊಳ್ಳೋಣ.

- **ಮಾಟಗಾತಿಯರ ಲೇಪನ:** ಹ್ಯಾರಿ ಪಾಟರ್ ಕಾದಂಬರಿಗಳನ್ನು ಅಥವಾ ಚಲನಚಿತ್ರಗಳನ್ನು ನೋಡಿದವರಿಗೆ ಮಾಟಗಾತಿಯರ ಪರಿಚಯವಿರುತ್ತದೆ. ಯುರೋಪಿಯನ್ ದೇಶದ ಮಾಟಗಾತಿಯರು ಉದ್ದ ಕೋಲಿನ ಪೊರಕೆಯ ಮೇಲೆ ಕುಳಿತುಕೊಂಡು ಗಾಳಿಯಲ್ಲಿ ಹಾರುವುದು ಸಾಮಾನ್ಯ. ಮಕ್ಕಳಂತೂ ಹ್ಯಾರಿ ಪಾಟರ್ ಪೊರಕೆಯ ಮೇಲೆ ಕುಳಿತು ಹಾರುವ ರಮ್ಯಲೋಕವನ್ನು, ವಾಸ್ತವ ಎಂದು ಭಾವಿಸಿ ತಾವೂ ಹಾಗೆಯೇ ಹಾರುವಂತಾದರೆ ಎಂದು ಕಲ್ಪಿಸಿಕೊಂಡರೆ ಅದರಲ್ಲಿ ಏನೂ ಆಶ್ಚರ್ಯವಿಲ್ಲ. ಮಕ್ಕಳು ಮಾತ್ರವಲ್ಲ, ಒಂದು ಕಾಲದ ಯುರೋಪಿನ ಜನಸಾಮಾನ್ಯರೂ ಹೀಗೆ ಪೊರಕೆಯ ಮೇಲೆ ಕುಳಿತು ಗಾಳಿಯಲ್ಲಿ ಹಾರುವುದು ಸಾಧ್ಯ ಎಂದೇ ನಂಬಿದ್ದರು. ಹೀಗೆ ನಂಬಿದರು ಹಾಗೂ ನಂಬಿಸಿದರು ಮಧ್ಯಯುಗದ ಮಾಟಗಾತಿಯರು.

ಮಾಟಗಾತಿಯರಿಗೆ ರಾತ್ರಿಯಲ್ಲಿ ಮಾತ್ರ ಶಕ್ತಿ ಬರುತ್ತದೆಯಂತೆ. ಕೋಲುಪೊರಕೆಯ ಮೇಲೆ ಕುಳಿತು ದೂರ ದೂರದ ಊರುಗಳಿಗೆ ಹೋಗುತ್ತಾರಂತೆ. ಮಾಟಗಾತಿಯರ ಸಮ್ಮೇಳನದಲ್ಲಿ ಭಾಗವಹಿಸುತ್ತಾರಂತೆ. ಅವರ ವಿಧಿ ವಿಧಾನಗಳು ವಿಚಿತ್ರ. ಅವರು ರಾತ್ರಿಯ ಹೊತ್ತು ತಮ್ಮ ಉಡುಪನ್ನು ಕಳಚಿ ನಗ್ನವಾಗುತ್ತಿದ್ದರು. ಒಂದು ವಿಶೇಷವಾದ 'ಮಾಟಗಾತಿಯರ ಹಾರುವ ಲೇಪನ'ವನ್ನು ಮೈಗೆ ಲೇಪಿಸಿಕೊಳ್ಳುತ್ತಿದ್ದರು. ವಿಶೇಷವಾಗಿ ಯೋನಿ ಪ್ರದೇಶದಲ್ಲಿ ಧಾರಾಳವಾಗಿ ಹಚ್ಚಿಕೊಳ್ಳುತ್ತಿದ್ದರು. ಅವರು ಇದನ್ನು 'ವಿಚೆಸ್ ಫ್ಲೈಯಿಂಗ್ ಆಯಿಂಟ್‌ಮೆಂಟ್, ಗ್ರೀನ್ ಆಯಿಂಟ್‌ಮೆಂಟ್, ಮ್ಯಾಜಿಕ್ ಸ್ಯಾಲ್ವ್, ಲೈಕ್ಯಾಂಥ್ರೋಪಿಕ್ ಆಯಿಂಟ್‌ಮೆಂಟ್' ಎಂದೆಲ್ಲ ಕರೆಯುತ್ತಿದ್ದರು. ನಂತರ ಕೋಲು ಪೊರಕೆಯನ್ನು ತಮ್ಮ ತೊಡೆಗಳ ನಡುವೆ ಸಿಕ್ಕಿಸಿಕೊಂಡು ಹಾರುವ ಪ್ರಯತ್ನವನ್ನು ಮಾಡುತ್ತಿದ್ದರು. ಆದರೆ ಅವರು ಖಂಡಿತ ಹಾರುತ್ತಿರಲಿಲ್ಲ. ಆದರೆ ಹಾರುವ ಲೇಪನದಲ್ಲಿದ್ದ ರಾಸಾಯನಿಕಗಳು, ಅವರಲ್ಲಿ ಹಾರುವ ಭ್ರಮೆಯನ್ನು ಉಂಟುಮಾಡುತ್ತಿದ್ದವು. ಅವರು ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದರು. ಗಾಳಿಯಲ್ಲಿ ಹಾರುವ ಹಾಗೆ, ದೂರದ ಊರುಗಳಿಗೆ ಹೋಗುವ ಹಾಗೆ, ಶೈತಾನನೊಡನೆ ಸಂಭೋಗ ನಡೆಸಿದ ಹಾಗೆ... ನಾನಾ ರೀತಿಯ ಭ್ರಮೆಗಳಿಗೆ ತುತ್ತಾಗುತ್ತಿದ್ದರು. ಇಡೀ ರಾತ್ರಿಯನ್ನು ಭ್ರಮಾಲೋಕದಲ್ಲಿ ಕಳೆದು ಬೆಳಗ್ಗೆ ಎದ್ದಾಗ ಅವರಿಗೆ ಪ್ರಜ್ಞೆಯಿರುತ್ತಿರಲಿಲ್ಲ. ಎಚ್ಚರವಾದ ಕೂಡಲೆ ಹಿಂದಿನ ರಾತ್ರಿ ನಡೆದ ಬಹಳಷ್ಟು ವಿಚಾರಗಳು ನೆನಪಿನಲ್ಲಿ ಇರುತ್ತಿರಲಿಲ್ಲ. ಆದರೆ ಭ್ರಮೆಯಲ್ಲಿ ಹಾರಿದ್ದು ನೆನಪಿನಲ್ಲಿ ಇರುತ್ತದೆ. ಹಾರುವ ಲೇಪನದಲ್ಲಿ ಅಫೀಮು ರಸ (ಪೆಪಾವರಮ್ ಸಾಮ್ನಿಫೆರಂ), ಅಟ್ರೋಪ ಬೆಲ್ಲಡೋನ, ಹೆನ್ಬೇನ್ (ಹೊಯಾಸಿಮಸ್ ನೈಗರ್), ಮಾಂಡ್ರೇಕ್ (ಮ್ಯಾಂಡ್ರಗೋರ ಅಫಿಶಿನೇರಮ್), ದತೂರ (ದತ್ತೂರ ಆಲ್ಬ) ವತ್ಸನಾಭಿ (ಅಕೋನಿಟಮ್ ಫೆರಾಕ್) ಮುಂತಾದ ಮೂಲಿಕೆಗಳ ಸಾರ ಇದ್ದಿರಬಹುದು ಎನ್ನಲಾಗಿದೆ. ಇವುಗಳಲ್ಲಿ ಪ್ರಧಾನವಾಗಿ ಸ್ಕೊಪಾಲಮಿನ್ ಹಾಗೂ ಅದರ ಸೋದರ ಸದಸ್ಯರಾದ ಹೊಯಾಸಮಿನ್ ಮತ್ತು ಅಟ್ರೋಪಿನ್ ಪ್ರಧಾನವಾಗಿದ್ದು, ಮಾಟಗಾತಿಯರ ಎಲ್ಲ ಭ್ರಮೆಗಳಿಗೆ ಕಾರಣವಾಗಿರುತ್ತವೆ.

- **ವಿಶ್ಲೇಷಣೆ:** ಜರ್ಮನಿಯ ರಸಾಯನ ಶಾಸ್ತ್ರಜ್ಞ ಆಲ್ಬರ್ಟ್ ಲೇಡೆನ್ಬರ್ಗ್ (1842-1911) 1881ರಲ್ಲಿ ಸ್ಕೊಪಾಲಮಿನ್‌ನನ್ನು ಬದನೆ ಕುಟುಂಬದಿಂದ ಪ್ರತ್ಯೇಕಿಸಿದ. ಇದರ ಬಗ್ಗೆ ಅಧ್ಯಯನಗಳನ್ನು ನಡೆಸಿದ. ಇದು ಅಸಿಟೈಲ್ ಕೋಲಿನ್ ನರ-ರಾಸಾಯನಿಕವನ್ನು ಸ್ಥಗಿತಗೊಳಿಸುವುದನ್ನು ನೋಡಿದ.

ಸ್ಕೊಪಾಲಮಿನ್ ದೇಹದಲ್ಲಿ ಉತ್ಪಾದನೆಯಾಗುವ ಜೊಲ್ಲನ್ನು ನಿಯಂತ್ರಿಸಿ ಬಾಯಿಯನ್ನು ಒಣಗಿಸಿತು. ನಾನಾ ರೀತಿಯ ಭ್ರಮೆಗಳನ್ನು ಸೃಜಿಸಿ ಮಾನಸಿಕ ಗೊಂದಲವನ್ನು ಉಂಟುಮಾಡಿತು. ನಂತರ ಯಾವುದೂ ನೆನಪಿನಲ್ಲಿ ಉಳಿಯದಂತೆ ಮರೆಯಾಗಿಸಿತು. ಸ್ಕೊಪಾಲಮಿನ್ನಿನ ಹಲವು ಗುಣಲಕ್ಷಣಗಳು ಒಂದೊಂದಾಗಿ ಹೊರಬಂದವು. ಆಗ ವೈದ್ಯರು ಸ್ಕೊಪಾಲಮಿನ್‌ನನ್ನು ಔಷಧವನ್ನಾಗಿ ಉಪಯೋಗಿಸುವ ಸಾಧ್ಯಾಸಾಧ್ಯತೆಯನ್ನು ಅಧ್ಯಯನ ಮಾಡಿದರು.

* ಅರಿವಳಿಕೆಯನ್ನು ನೀಡಿ, ಶಸ್ತ್ರಚಿಕಿತ್ಸೆಯನ್ನು ಮಾಡಿ, ಅರಿವಳಿಕೆಯ ಪ್ರಭಾವದಿಂದ ಹೊರಬರುವಾಗ ಅನೇಕರಿಗೆ ವಾಕರಿಕೆ ಮತ್ತು ವಾಂತಿಯಾಗುತ್ತದೆ. ಸ್ಕೊಪಾಲಮಿನ್ ಅದನ್ನು ನಿಗ್ರಹಿಸುತ್ತದೆ.
* ಕೆಲವರಿಗೆ ಬಸ್ಸು, ರೈಲು, ಕಾರಿನಲ್ಲಿ ಪ್ರಯಾಣ ಮಾಡುವಾಗ ತಲೆಸುತ್ತು, ವಾಕರಿಕೆ, ವಾಂತಿಯಾಗುತ್ತದೆ. ಇದನ್ನು 'ಚಲನಾಬೇನೆ' ಅಥವಾ 'ಮೋಶನ್ ಸಿಕ್ನೆಸ್' ಎನ್ನುತ್ತಾರೆ. ಇಂಥವರು ಪ್ರಯಾಣದ ಮೊದಲೇ ಸ್ಕೊಪಾಲಮಿನ್ನನ್ನು ಸೇವಿಸಿದರೆ ಅವರ ಚಲನಾಬೇನೆ ನಿಯಂತ್ರಣಕ್ಕೆ ಬರುತ್ತದೆ.
* ಜಠರ, ಕರುಳು, ಮೂತ್ರಪಿಂಡ, ಪಿತ್ತಕೋಶದ ಸೆಡೆತ ಅಥವಾ ಸಾಸಮ್ಮನ್ನು ಕಡಿಮೆ ಮಾಡುತ್ತದೆ.
* ಪದೇ ಪದೆ ಮಲವಿಸರ್ಜನೆಯಾಗುವ 'ಕರುಳು ಕೆರಳಿಕೆಯ ಲಕ್ಷಣಾವಳಿ' ಅಥವಾ 'ಇರಿಟಬಲ್ ಬಾವೆಲ್ ಸಿಂಡ್ರೋಮ್' ನಿಗ್ರಹದಲ್ಲಿ ಉಪಯುಕ್ತವಾಗುತ್ತದೆ.

ಹೀಗೆ ಸ್ಕೊಪಾಲಮಿನ್‌ನನ್ನು ಹಿತ-ಮಿತ ಪ್ರಮಾಣದಲ್ಲಿ ಬಳಸಿ ನಾನಾ ಸಮಸ್ಯೆಗಳನ್ನು ನಿಯಂತ್ರಿಸಬಹುದು ಎನ್ನುವ ವಿಚಾರವು ಬೆಳಕಿಗೆ ಬಂದಿತು. ಹಾಗಾಗಿ ಸ್ಕೊಪಾಲಮಿನ್ ಇಂದಿಗೂ ಬಳಕೆಯಲ್ಲಿವೆ.

- **ಮುಸ್ಸಂಜೆಯ ನಿದ್ರೆ:** ಸ್ಕೊಪಾಲಮಿನ್ನಿನ ಇತಿಹಾಸದಲ್ಲಿ ಒಂದು ಪ್ರಮುಖ, ಗಣನೀಯ ಹಾಗೂ ಅತ್ಯಂತ ಪ್ರಭಾವಶಾಲಿ ಉಪಯೋಗವೊಂದನ್ನು ಜರ್ಮನ್ನರು ಕಂಡುಕೊಂಡರು. 1903. 'ಹೆರಿಗೆ ಎನ್ನುವುದು ಹೆಣ್ಣಿಗೆ ಪುನರ್ಜನ್ಮವನ್ನು ನೀಡಿದಂತೆ' ಎನ್ನುವ ಮಾತಿದೆ. ಹೆರಿಗೆಯ ನೋವು ಊಹಿಸಲಸದಳ. ಹಾಗಾಗಿ ಜರ್ಮನಿಯ ಫ್ರೀಬರ್ಗ್ ನಗರದ ವೈದ್ಯರು ಮಾರ್ಫಿನ್ ಮತ್ತು ಸ್ಕೊಪಾಲಮಿನ್ ಔಷಧಗಳನ್ನು ಬೆರೆಸಿ ಹೆರಿಗೆಯ ನೋವನ್ನು ಶಮನ ಮಾಡಲು ಪ್ರಯತ್ನಿಸಿದರು. ಈ ಔಷಧ ಮಿಶ್ರಣವು, ಅರಿವಳಿಕೆಯಂತೆ ಪ್ರಜ್ಞೆಯನ್ನು ಪೂರ್ಣ ಕಳೆಯುತ್ತಿರಲಿಲ್ಲ, ತಾಯಂದಿರು ಎಚ್ಚರವಾಗಿರುತ್ತಿದ್ದರು. ಆದರೆ ನೋವಿನ ಅನುಭವ ಮಾತ್ರ ಆಗುತ್ತಿರಲಿಲ್ಲ, ಹೆರಿಗೆಯಾದ ಮೇಲೆ, ಹೆರಿಗೆ ನೋವನ್ನು ಅನುಭವಿಸಿದ ನೆನಪೇ ಉಳಿಯುತ್ತಿರಲಿಲ್ಲ, ಹಾಗಾಗಿ ವೈದ್ಯರು, ಈ ಅವಸ್ಥೆಯನ್ನು 'ಹಗಲೂ ಅಲ್ಲದ, ರಾತ್ರಿಯೂ ಅಲ್ಲದ ಮುಸ್ಸಂಜೆ' ಹೋಲಿಸಿದರು. ಪೂರ್ಣ ಪ್ರಜ್ಞೆಯು ಇರುತ್ತಿರಲಿಲ್ಲ ಹಾಗೆಯೇ ಪೂರ್ಣ ಪ್ರಜ್ಞಾಹೀನತೆಯು ಇರುತ್ತಿರಲಿಲ್ಲ, ಇವೆರಡರ ನಡುವಿನ ಸ್ಥಿತಿಯಲ್ಲಿ ಇರುತ್ತಿದ್ದರು. ಹಾಗಾಗಿ ಇದನ್ನು 'ಮುಸ್ಸಂಜೆಯ ನಿದ್ರೆ' ಅಂದರೆ 'ಟ್ವಿಲೈಟ್ ಸ್ಲೀಪ್' ಎಂದು ಕರೆದರು. ಈ ಮಿಶ್ರಣವನ್ನು ಯುರೋಪಿನ ಶ್ರೀಮಂತ ಮಹಿಳೆಯರು ಮುಕ್ತ ಮನಸ್ಸಿನಿಂದ ಸ್ವಾಗತಿಸಿದರು. 1910ರಿಂದ 1920ರ ಅವಧಿ. ಅಮೆರಿಕನ್ ಮಹಿಳೆಯರು ಈ ನೋವುರಹಿತ ಹೆರಿಗೆಯನ್ನು ಮುಕ್ತವಾಗಿ ಸ್ವಾಗತಿಸಿದರು. ಆದರೆ ಈ ಮಿಶ್ರಣವನ್ನು ಸ್ವೀಕರಿಸಿದ ಕೆಲವು ಮಹಿಳೆಯರಲ್ಲಿ ಅನಿರೀಕ್ಷಿತ ಲಕ್ಷಣಗಳು ಕಂಡುಬಂದವು. ಅವರನ್ನು ಭಯಾನಕ ಭ್ರಮೆಗಳು ಕಾಡಿದವು. ಹಠಾತ್ ಆಕ್ರಮಣಶೀಲತೆ ಕಂಡುಬಂದು ಎಲ್ಲರ ಮೇಲೆ ಏರಿ ಹೋಗುವುದರ ಜತೆಯಲ್ಲಿ ಕೆಟ್ಟದಾಗಿ ಬೈಯಲಾರಂಭಿಸಿದರು. ಆ ಮಹಿಳೆಯರನ್ನು ಹಿಡಿದಿಡುವುದೇ ಒಂದು ದೊಡ್ಡ ಸಾಹಸವಾಯಿತು. ಅನೇಕ ಮಹಿಳೆಯರು ತಾವು ಮಗುವಿಗೆ ಜನ್ಮ ನೀಡಿದ್ದನ್ನೇ ಮರೆಯುತ್ತಿದ್ದರು. ಇವುಗಳಲ್ಲಿ ಅತ್ಯಂತ ಆತಂಕವನ್ನು ಉಂಟುಮಾಡಿದ ಲಕ್ಷಣವೆಂದರೆ, ಮಹಿಳೆಯರು ತಮ್ಮ ಜೀವಮಾನದ ಮುಚ್ಚಿಟ್ಟ ಗುಟ್ಟುಗಳನ್ನೆಲ್ಲ ರಟ್ಟು ಮಾಡಿ, ಸತ್ಯವನ್ನು ನುಡಿಯಲಾರಂಭಿಸಿದರು.

- **ಸತ್ಯಪ್ರೇರಕ:** ಅಮೆರಿಕದ ಡಾ. ರಾಬರ್ಟ್ ಹೌಸ್ ಎಂಬ ಸ್ತ್ರೀರೋಗ ತಜ್ಞನು, ಮಿಶ್ರಣದ ಪ್ರಭಾವದಲ್ಲಿ ಹೆಣ್ಣುಮಕ್ಕಳು ಎಲ್ಲ ರೀತಿಯ ಪ್ರಶ್ನೆಗಳಿಗೆ ಸ್ವಲ್ಪವೂ ಹಿಂಜರಿಯದೆ ಪ್ರಾಮಾಣಿಕ ಉತ್ತರವನ್ನು ನೀಡುವುದನ್ನು ಗಮನಿಸಿದ. ಹಾಗಾಗಿ ಕಳ್ಳ ಕಾಕರಿಂದ ಸತ್ಯವನ್ನು ಹೊರಹೊಮ್ಮಿಸಲು ಈ ಮಿಶ್ರಣವನ್ನು ಬಳಸಬಹುದೇ ಎಂದು ಯೋಚಿಸಿದ. ಅವರ ಈ ಯೋಚನೆಯು ಅಮೆರಿಕದ ಮಿಲಿಟರಿ ಅಧಿಕಾರಿಗಳನ್ನು ಆಕರ್ಷಿಸಿತು. ಕೂಡಲೇ ಅಮೆರಿಕದ ಬೇಹುಗಾರಿಕಾ ಸಂಸ್ಥೆ ಸಿಐಎ 'ಪ್ರಾಜೆಕ್ಟ್ ಎಂಕೆ ಅಲ್ಟ್ರಾ' ಎಂಬ ಯೋಜನೆಯನ್ನು ಗುಟ್ಟಿನಲ್ಲಿ ಆರಂಭಿಸಿತು. ಅಂದಿನ ಅಮೆರಿಕದಲ್ಲಿ ಕಮ್ಯುನಿಸ್ಟರ ಪ್ರಾಬಲ್ಯ ಹೆಚ್ಚಿತ್ತು. ಶೀತಲ ಸಮರದ ದಿನಗಳು. ಹಾಗಾಗಿ ಗುಮಾನಿಗೆ ಒಳಗಾದ ವ್ಯಕ್ತಿಗೆ ಈ ಸತ್ಯಪ್ರೇರಕ ಔಷಧವನ್ನು (ಟ್ರೂತ್ ಸೀರಮ್) ನೀಡಿ ಅವನ ಗುಟ್ಟುಗಳನ್ನೆಲ್ಲ ರಟ್ಟು ಮಾಡುವ ನಾನಾ ರೀತಿಯ ಚಿತ್ರವಿಚಿತ್ರ ಪ್ರಯೋಗಗಳು ಆರಂಭವಾದವು.

ಆಪರೇಷನ್ ಎಂಕೆ ಅಲ್ಟ್ರಾ ಯೋಜನೆಯನ್ನು 1953ರಲ್ಲಿ ಸಿಐಎ ಅಧಿಕೃತವಾಗಿ ಆರಂಭಿಸಿತು. ಸತ್ಯಪ್ರೇರಕ ಮಿಶ್ರಣದ ಮೂಲಕ ಮನಸ್ಸಿನ ನಿಯಂತ್ರಣ, ನಡವಳಿಕೆಯ ಮಾರ್ಪಾಡು, ಗುಟ್ಟನ್ನು ಹೊರಗೆಡಹುವ ವಿಚಾರಣಾ ತಂತ್ರಗಳು ಹಾಗೂ ಮಿದುಳಿನ ರಾಸಾಯನಿಕ ಸಹಜ ವ್ಯಾಪಾರವನ್ನೇ ಅಲ್ಲೋಲಕಲ್ಲೋಲ ಮಾಡಿ ತಮಗೆ ಬೇಕಾದ ಹಾಗೆ 'ಬ್ರೇನ್ ವಾಶ್' ಮಾಡುವ ಮಾರ್ಗಗಳನ್ನು ಅನ್ವೇಷಿಸುವುದು ಈ ಯೋಜನೆಯ ಉದ್ದೇಶವಾಗಿತ್ತು. ಡಾ. ಸಿಡ್ನಿ ಗಾಟ್ಲೀಬ್ (1918-1999) ಎಂಬ ಸಿಐಎ ರಸಾಯನ ತಜ್ಞನು ಈ ಯೋಜನೆಯ ನೇತೃತ್ವವನ್ನು ವಹಿಸಿದ. ಆಪರೇಶನ್ ಎಂಕೆ ಅಲ್ಟ್ರಾ ನಿರೀಕ್ಷಿತ ಫಲಿತಾಂಶವನ್ನು ಕೊಡಲು ವಿಫಲವಾಯಿತು. ಹಾಗಾಗಿ ಇದನ್ನು 1973ರಲ್ಲಿ ನಿಲ್ಲಿಸಿದರು. 1977ರಲ್ಲಿ 'ಫ್ರೀಡಮ್ ಆಫ್ ಇನ್ ಫರ್ಮೇಶನ್ ಆಕ್ಟ್' ಕಾರಣ, ಸರಕಾರವು 20,000 ಪುಟಗಳ ದಾಖಲೆಯನ್ನು ಬಿಡುಗಡೆ ಮಾಡಿತು.

ಈ ಯೋಜನೆಯಲ್ಲಿ ಸ್ಕೊಪಾಲಮಿನ್ ಮತ್ತು ಮಾರ್ಫಿನ್ ಮಿಶ್ರಣವನ್ನು ಮಾತ್ರ ಬಳಸಲಿಲ್ಲ. ನಾವು ಊಹಿಸಿಕೊಳ್ಳಲು ಸಾಧ್ಯವಾಗದ ರೀತಿಯಲ್ಲಿ ವಿವಿಧ ಔಷಧಗಳ ಮಿಶ್ರಣಗಳನ್ನು ಮನುಷ್ಯರ ಮೇಲೆ ಪ್ರಯೋಗಿಸಿದರು. ಆದರೆ ಅವು ಯಾವುವೂ ನಂಬಿಕೆಗೆ ಅರ್ಹವಾಗುವ ರೀತಿಯಲ್ಲಿ ಫಲಿತಾಂಶವನ್ನು ನೀಡಲಿಲ್ಲ. ಅವುಗಳ ವಿವರವೇ ರೋಚಕ ಹಾಗೂ ಭಯಾನಕ ಕಥೆಗಳಾಗುತ್ತವೆ. ಇವೆಲ್ಲವೂ ಅಮೆರಿಕನ್ ಮಿಲಿಟರಿಯ ಕರಾಳ ಅಧ್ಯಾಯಗಳು. ಅಮೆರಿಕದ ಸ್ತ್ರೀರೋಗ ತಜ್ಞರು ಸಹ, ಹೆರಿಗೆ ನೋವನ್ನು ಶಮನ ಮಾಡಲು ಮುಸ್ಸಂಜೆಯ ನಿದ್ರೆಯ ಮಿಶ್ರಣ ಪ್ರಯೋಗವನ್ನು ಶಾಶ್ವತವಾಗಿ ನಿಲ್ಲಿಸಿದರು.

- **ಬಾಹ್ಯಾಕಾಶ:** ನಾವು ಓಡುವ, ನಡೆಯುವ, ಕುಣಿಯುವ, ಕುಪ್ಪಳಿಸುವ ಕೆಲಸಗಳು ಸರಾಗವಾಗಿ ನಡೆಯಲು ನಮ್ಮ ಕಣ್ಣುಗಳು ಹಾಗೂ ಕಿವಿಯ ಮೂರನೆಯ ಭಾಗದಲ್ಲಿರುವ ಸಮತೋಲನಾಂಗವು ಸಾಮರಸ್ಯದಿಂದ ಕೆಲಸವನ್ನು ಮಾಡುತ್ತವೆ. ಈ ಚಟುವಟಿಕೆಗಳು ನಡೆಯಲು ದೇಹವು ಸಮತೋಲನದಲ್ಲಿರಬೇಕಾಗುತ್ತದೆ. ವಾಹನದಲ್ಲಿ ಚಲಿಸುವಾಗ, ನಮ್ಮ ಇಡೀ ದೇಹವು ಗಾಳಿಯಲ್ಲಿ ತೇಲಿಹೋದಂಥ ಅನುಭವವಾಗುತ್ತದೆ. ಆಗ 'ದೇಹವು ಕೆಳಕ್ಕೆ ಬೀಳುತ್ತಿದೆ' ಎಂದು ನಮ್ಮ ಸಮತೋಲನಾಂಗವು ಭಾವಿಸುತ್ತದೆ. ಬಿದ್ದರೆ ಗಾಯವಾಗಬಹುದು ಅಥವಾ ಜೀವವೇ ಹೋಗಬಹುದು ಎನ್ನುವ ಹಿನ್ನೆಲೆಯಲ್ಲಿ ಮಿದುಳಿಗೆ ಅಪಾಯದ ಕರೆಗಂಟೆಯನ್ನು ತೀವ್ರ ಸ್ವರೂಪದಲ್ಲಿ ನೀಡುತ್ತದೆ. ವ್ಯಕ್ತಿಯು ವಿಶ್ರಾಂತಿಯನ್ನು ತೆಗೆದುಕೊಳ್ಳಲೇಬೇಕು ಎಂದು ಮಿದುಳು ಆಗ್ರಹಿಸುತ್ತದೆ. ಆದರೆ ವ್ಯಕ್ತಿಯು ವಾಹನದಲ್ಲಿ ಚಲಿಸುತ್ತಲೇ ಇರುವ ಕಾರಣ, ಆತನು ಬಲವಂತವಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳುವಂತೆ ವಾಕರಿಕೆ, ವಾಂತಿ, ತಲೆನೋವು, ತಲೆಸುತ್ತು ಮುಂತಾದ ರೋಗಲಕ್ಷಣಗಳನ್ನು ಉಂಟುಮಾಡುತ್ತದೆ. ಬಾಹ್ಯಾಕಾಶದ ಶೂನ್ಯ ಗುರುತ್ವದಲ್ಲಿ (ನಿಖರವಾಗಿ ಸೂಕ್ಷ್ಮ ಗುರುತ್ವ ಅಥವಾ ಮೈಕ್ರೋ ಗ್ರಾವಿಟಿ) ಕೆಲಸ ಮಾಡಬೇಕಾದ ಶೇ.60-80 ಗಗನಯಾತ್ರಿಗಳು ತೀವ್ರ ಸ್ವರೂಪದ ಚಲನಾಬೇನೆಗೆ ತುತ್ತಾಗುತ್ತಾರೆ. ಇವರು ಶೂನ್ಯ ಗುರುತ್ವದಲ್ಲಿ ತೇಲುವ ದೃಶ್ಯವನ್ನು ನಾವು ಚಲನಚಿತ್ರಗಳಲ್ಲಿ ನೋಡಿದ್ದೇವೆ. ವಾಸ್ತವದಲ್ಲಿ ಗಗನಯಾತ್ರಿಗಳೇನೂ ಕೆಳಕ್ಕೆ ಬೀಳುತ್ತಿಲ್ಲ. ಆದರೆ ಅವರ ಮಿದುಳು ಹಾಗೆ ಭ್ರಮಿಸುತ್ತದೆ. ಹಾಗಾಗಿ ಈ ಭಾವನೆಯನ್ನು ನಿವಾರಿಸಲು ಇವರಿಗೆ ಸ್ಕೊಪಾಲಮಿನ್ + ಡೆಕ್ಸ್ಟ್ರೋಆಂಫಿಟಮಿನ್ ಮಿಶ್ರಣವನ್ನು ನೀಡುತ್ತಾರೆ. ಇದು 8-12 ಗಂಟೆಗಳ ಕಾಲ ಮಿದುಳಿನ ಆತಂಕವನ್ನು ನಿಗ್ರಹಿಸುತ್ತದೆ. ಹಾಗಾಗಿ ಇವುಗಳ ಪ್ರಯೋಗ ಇಂದಿಗೂ ಅಸ್ತಿತ್ವದಲ್ಲಿದೆ.

ಸ್ಕೊಪಾಲಮಿನ್, ಮಧ್ಯಯುಗದಿಂದ ಮಾಟ ಮಂತ್ರಗಳಿಂದ ಹಿಡಿದು ಇಂದಿನ ಬಾಹ್ಯಾಕಾಶ ಯಾನದವರೆಗೆ ನಾನಾ ರೀತಿಯಲ್ಲಿ ತನ್ನ ದಶಾವತಾರಗಳನ್ನು ತೋರಿದೆ. ಮುಂದಿನ ದಿನಗಳಲ್ಲಿಯೂ ಈ ಔಷಧದ ಬಳಕೆ ಮುಂದುವರಿಯಲಿದೆ.

(ಸ್ಕೊಪಾಲಮಿನ್, ಅಪರಾಧಕ್ಕೆ ಹೇಗೆ ನೆರವಾಗುತ್ತದೆ ಎನ್ನುವುದನ್ನು ಕಳೆದ ವಾರದ 'ಡೆವಿಲ್ಸ್ ಬ್ರೆತ್' ಲೇಖನದಲ್ಲಿ ವಿವರಿಸಿರುವ ಕಾರಣ, ಅದನ್ನು ಪುನರಾವರ್ತಿಸಲಿಲ್ಲ)

ಮತಾಂತರಿಗಳಿಗೆ ಮಾತೃಹೃದಯದ ಯಾಚನೆ, ತರವೇ?

800 ವರ್ಷಗಳ ಮುಸ್ಲಿಮರ ಆಕ್ರಮಣ ಮತ್ತು ದಬ್ಬಾಳಿಕೆಗಳಿದ್ದಾಗಲೂ, 200 ವರ್ಷಗಳ ನಿರಂಕುಶ ಬ್ರಿಟಿಷ್ ಆಡಳಿತವಿದ್ದಾಗಲೂ, ತಾರತಮ್ಯಗಳನ್ನು ಅನುಭವಿಸಿಯೂ ಯಾವ ಸಮುದಾಯಗಳು ಹಿಂದೂ ಧರ್ಮವನ್ನು ತೊರೆದಿಲ್ಲವೋ ಆ ಸಮುದಾಯಗಳಿಗೆ ನ್ಯಾಯಯುತವಾಗಿ ಸೌಲಭ್ಯಗಳು ಸಿಗಬೇಕು. ಇದು ಸಂವಿಧಾನಬದ್ಧವೂ ಹೌದು, ಡಾ. ಬಾಬಾಸಾಹೇಬರ ಆಶಯ ಕೂಡ.

ಜಾತಿಜಿಜ್ಞಾಸೆ
ಮಂಜುನಾಥ ಕೊಂಡಪಲ್ಲಿ
vveditoped@gmail.com

ಕರ್ನಾಟಕ ಸರಕಾರವು ಒಳಮೀಸಲಾತಿಯನ್ನು ಜಾರಿ ಮಾಡಲಾಗದೆ, ಆಯೋಗ, ಸಮೀಕ್ಷೆ, ಅಂತಿಮ ದಿನಾಂಕದ ಮೇಲೆ ದಿನಾಂಕ ಘೋಷಿಸುತ್ತ ಕಾಲದೂಡುತ್ತಿದೆ. ದೊಡ್ಡ ದೊಡ್ಡ ನಾಯಕರು ''ಹಿಂದೂ ಧರ್ಮದಲ್ಲಿಯೇ ಇರುವ ಈ ಜಾತಿ ಪರಿಗಣಿಸಬೇಡಿ, ಆ ಜಾತಿ ಪರಿಗಣಿಸಬೇಡಿ'' ಎಂದು ಉದ್ದುದ್ದ ಹೇಳಿಕೆ ಕೊಡುತ್ತಿದ್ದಾರೆ. ಎಲ್ಲದಕ್ಕೂ ಸಂವಿಧಾನಬದ್ಧವಾದ ಮಾನದಂಡಗಳಿವೆ, ಅದರ ಪ್ರಕಾರ ಅದು ನಡೆಯುತ್ತದೆ. ಆದರೆ ಅನ್ಯ ರಿಲಿಜನ್ನುಗಳಿಗೆ ಮತಾಂತರವಾಗಿಯೂ ಇನ್ನೂ ಇಲ್ಲಿಯ ಸೌಲಭ್ಯ ಪಡೆಯುತ್ತಿರುವವರ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಇವೆಲ್ಲದರ ನಡುವೆ ಆಯೋಗದ ಅಧ್ಯಕ್ಷರು ''ಮತಾಂತರಿಗಳನ್ನು ಮಾತೃ ಹೃದಯದಿಂದ ನೋಡಬೇಕು'' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದು ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟವಾದರೂ, ಮುಖ್ಯವಾಹಿನಿಯಲ್ಲಿ ಅಷ್ಟೊಂದು ಚರ್ಚೆಯಾಗದಿರುವುದು ವಿಪರ್ಯಾಸ.

ವಿದೇಶಿ ಸೆಮೆಟಿಕ್ ರಿಲಿಜನ್ನುಗಳಿಗೆ ಮತಾಂತರಗೊಂಡವರಿಗೂ ಅನುಸೂಚಿತ ಜಾತಿಗಳಿಗಿರುವ ಸೌಲಭ್ಯ ಕೊಡಿಸುವ ಪ್ರಯತ್ನ ನಿನ್ನೆ ಮೊನ್ನೆಯದಲ್ಲ. 2006ರಲ್ಲಿ ನ್ಯಾ. ಸಾಚಾರ್ ಆಯೋಗದ ವರದಿಯನ್ನು ಸರಕಾರ ಅಂಗೀಕರಿಸಿದ ನಂತರ ನಡೆದ ಚರ್ಚೆಯಲ್ಲಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ''ಅಲ್ಪಸಂಖ್ಯಾತರು ಈ ದೇಶದ ಸಂಪನ್ಮೂಲಗಳಿಗೆ ಮೊದಲ ಹಕ್ಕುದಾರರು ಎಂಬುದು ನಮ್ಮ ಸರಕಾರದ ನೀತಿಯಾಗಿದೆ. ಯಾವುದೇ ಆದರೂ ಮೊದಲ ಫಲಾನುಭವಿಗಳು ಅವರಾಗಿರಬೇಕು ಎಂಬುದು ನಮ್ಮ ಬಯಕೆ'' ಎಂದು ಸದನದಲ್ಲೇ ಹೇಳಿದ್ದರು. ಅದರ ಮುಂದುವರಿದ ಭಾಗವೇ ಇದು ಎಂದು ಜನಮಾನಸದಲ್ಲಿ ಸಂಶಯ ಎದ್ದಿದೆ. ತುಷ್ಟೀಕರಣ ಆಧರಿತ ಶೇ.4ರ ಮೀಸಲಾತಿಯನ್ನು ಇಲ್ಲಿ ಉದಾಹರಿಸಬಹುದು. ಈ ವಿಷಯ ಕುರಿತು ಒಂದಿಷ್ಟು ಬೆಳಕು ಚೆಲ್ಲುವ ಕೆಲಸ ಈ ಲೇಖನದ್ದು.

ಇದೇ ತಂತ್ರದ ಭಾಗವಾಗಿ 2004ರಲ್ಲಿ ಸುಪ್ರೀಂ ಕೋರ್ಟಿಗೆ PIL ಸಲ್ಲಿಕೆಯಾಗಿತ್ತು (WP(C) 180/2004). ಜತೆಗೆ ದಲಿತ ಮುಸ್ಲಿಂ, ದಲಿತ ಕ್ರಿಶ್ಚಿಯನ್ ಎಂಬ ಪದಗಳನ್ನು ಹರಿಬಿಡಲಾಯಿತು. ಸರ್ವೋಚ್ಚ ನ್ಯಾಯಾಲಯ ಇದಕ್ಕೆ ಅಧ್ಯಯನದ ವರದಿ ಕೇಳಿತು. ನ್ಯಾ.ರಂಗನಾಥ ಮಿಶ್ರಾ ಆಯೋಗ ರಚನೆಯಾಯಿತು. ಆ ವರದಿಯು ''ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಾಪ್ತಿಯನ್ನು ಸಂಪೂರ್ಣವಾಗಿ ಧರ್ಮದ ಕೊಂಡಿಯಿಂದ ಬೇರ್ಪಡಿಸಬೇಕು, ಧರ್ಮವನ್ನು ತಟಸ್ಥವಾಗಿ ಮಾಡಬೇಕು. ಈ ಮೂಲಕ ಕ್ರಿಶ್ಚಿಯನ್, ಮುಸ್ಲಿಂ, ಜೈನ, ಪಾರ್ಸಿಗಳನ್ನು ಇಲ್ಲಿ ಸೇರಿಸಬಹುದು'' ಎಂದು ಹೇಳಿತು. ವಿಚಿತ್ರವೆಂದರೆ ಈ ರಿಲಿಜನ್ನುಗಳಲ್ಲಿ ಯಾವುದೇ ಜಾತಿಗಳಿಲ್ಲ, ತಾರತಮ್ಯವಿಲ್ಲ, ಅಸ್ಪೃಶ್ಯತೆ ಇಲ್ಲ, ಸಮಾನತೆ-ಸೋದರತೆ ಈ ರಿಲಿಜನ್ನುಗಳ ವಿಶೇಷ ಎಂಬುದೇ ಆಯಾ ಧಾರ್ಮಿಕ ಮುಖಂಡರ 'ಸೆಲ್ಲಿಂಗ್ ಪಾಯಿಂಟ್'.

ಪರಿಶಿಷ್ಟ ಜಾತಿಗಳು ಯಾವುವು? ಎಂದು ತಿಳಿದುಕೊಳ್ಳಲು ಇತಿಹಾಸಕ್ಕೆ ಹೋಗಬೇಕು. ಈ ಪದ ಮೊದಲು ಕಾಣಿಸಿಕೊಂಡದ್ದು 1935ರಲ್ಲಿ. 1936ರಲ್ಲಿ ಅಂದಿನ ಸರಕಾರ, ಪರಿಶಿಷ್ಟ ಜಾತಿಗಳ ಆದೇಶವನ್ನು ಈ ಕಾಯ್ದೆಯ ಅಡಿಯಲ್ಲಿ ಹೊರಡಿಸಿತು. 1880ರಲ್ಲಿ ಬ್ರಿಟಿಷರ ಆಡಳಿತದ ಜನಗಣತಿಯ ಆಯುಕ್ತನಾಗಿದ್ದ ಸರ್ ಡೆಂಜಿಲ್ಲ್ ಇಬ್ಬೆಟ್ಸನ್ ತನ್ನ ಜನಗಣತಿಯಲ್ಲಿ, ಹಿಂದೂ ಧರ್ಮದಲ್ಲಿರುವ, ವಿವಿಧ ಉದ್ಯೋಗಗಳಲ್ಲಿ ತೊಡಗಿಕೊಂಡಿರುವ, ಸಮಾಜದ ಮುಖ್ಯವಾಹಿನಿಯಲ್ಲಿರದ, ಅತಿ ಹಿಂದುಳಿದ ವರ್ಗಗಳನ್ನು ಗುರುತಿಸಿ, ಅವುಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಗಳಿಗೆ ಸೇರಿಸಬೇಕೆಂದು ಹೇಳಿದನು. ಈ ವರ್ಗಗಳ ಹಿಂದೂ ಹಿನ್ನೆಲೆಯನ್ನು ಗುರುತಿಸಿ, ಶತ ಪ್ರತಿಶತ ಹಿಂದುಗಳಾಗಿರುವವರನ್ನು ಮಾತ್ರ ಈ ಪರಿಧಿಗೆ ಆರಿಸಿಕೊಳ್ಳಲಾಯಿತು. ಹೀಗಾಗಿ ಮಾನದಂಡಗಳು 1880ರಷ್ಟು ಹಿಂದೆಯೇ ಸ್ಪಷ್ಟವಾಗಿವೆ.

1931ರಲ್ಲಿ ಅಂದಿನ ಜನಗಣತಿ ಆಯುಕ್ತ ಜೆ.ಎಸ್. ಹಟ್ಟನ್ ತನ್ನ ವರದಿಯಲ್ಲಿ ಈ ವರ್ಗಗಳನ್ನು ಗುರುತಿಸುವ ಮಾನದಂಡಗಳನ್ನು ವಿವರವಾಗಿ ದಾಖಲಿಸಿದ್ದಾನೆ. ಅಸ್ಪೃಶ್ಯತೆಯು ಹಿಂದೂ ಧಾರ್ಮಿಕ ವ್ಯವಸ್ಥೆಯ ಕಳಂಕವಾಗಿದೆ, ಹೀಗಾಗಿ 1936 ಮತ್ತು 1950ರಲ್ಲಿ ಹಿಂದೂ ಧರ್ಮಾಧಾರಿತ ವ್ಯವಸ್ಥೆಯ ಆಧಾರದಿಂದ ಪರಿಶಿಷ್ಟ ಜಾತಿಗಳ ಪಟ್ಟಿಯನ್ನು ತಯಾರಿಸಲಾಯಿತು. 1950ರ ಕಾಯ್ದೆಗೆ 1956ರಲ್ಲಿ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಮೂಲಕ ಸಿಖ್ಖರನ್ನೂ ಈ ವ್ಯಾಪ್ತಿಗೆ ಒಳಗೊಳಿಸಲಾಯಿತು. 1930 ಮತ್ತು 1950ರಲ್ಲಿ ಬಳಸಿದ ಮಾನದಂಡಗಳ ಅಡಿಯಲ್ಲಿಯೇ ಸಿಖ್ಖರಲ್ಲಿಯ ಜಾತಿಗಳನ್ನು ಗುರುತಿಸಿ ಸೇರಿಸಲಾಯಿತು. 1990ರಲ್ಲಿ 1950ರ ಪರಿಶಿಷ್ಟ ಜಾತಿಗಳ ಕಾಯ್ದೆಗೆ ಮತ್ತೆ ತಿದ್ದುಪಡಿ ಮಾಡಿ ಬೌದ್ಧರನ್ನು ಪರಿಶಿಷ್ಟ ಜಾತಿಗಳ ವ್ಯಾಪ್ತಿಗೆ ತರಲಾಯಿತು.

ಎಲ್ಲ ತಿದ್ದುಪಡಿಗಳಿಗೆ ಭಾರತದ ಸಂವಿಧಾನದ 25ನೆಯ ಪರಿಚ್ಛೇದ ವಿವರಣೆ-2 ಸಹಾಯಕವಾಗಿದೆ. ಭಾರತದ ಸಂವಿಧಾನದ 25ನೆಯ ಪರಿಚ್ಛೇದ ವಿವರಣೆ-2 ಈ ಕೆಳಗಿನಂತಿದೆ. ವಿವರಣೆ-2:- (2) ನೆಯ ಖಂಡದ (ಬಿ) ಉಪಖಂಡದಲ್ಲಿನ ಹಿಂದೂಗಳನ್ನು ಕುರಿತ ಉಲ್ಲೇಖದಲ್ಲಿ ಸಿಖ್, ಜೈನ ಅಥವಾ ಬೌದ್ಧ ಧರ್ಮಾವಲಂಬಿಗಳು ಸೇರಿರುವರೆಂದು ಅರ್ಥೈಸತಕ್ಕದ್ದು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಕುರಿತ ಉಲ್ಲೇಖವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

15(4), 16(4), 46, 31 ಪರಿಚ್ಛೇದಗಳ ಅನ್ವಯ ಸಂವಿಧಾನಾತ್ಮಕವಾಗಿ ಪರಿಶಿಷ್ಟರಿಗೆ ವಿಶೇಷ ರಕ್ಷಣೆ ಮತ್ತು ಸೌಲಭ್ಯಗಳಿವೆ. ಹಿಂದೂ ಧರ್ಮದಲ್ಲಿ ಅಸ್ತಿತ್ವದಲ್ಲಿರುವ ತಾರತಮ್ಯದ ಆಚರಣೆಗಳ ಆಧಾರದ ಮೇಲೆ ಇವುಗಳನ್ನು ಗುರುತಿಸಲಾಗಿದೆ. ಈಗಾಗಲೇ 1936ರ ಆದೇಶದಲ್ಲೇ ಹಿಂದೂ ಧರ್ಮದ ಅಡಿಯಲ್ಲಿಯ ಜಾತಿಗಳನ್ನು ನಿಗದಿಪಡಿಸಲಾಗಿದೆ. ಭೌಗೋಳಿಕ ವಿಶಿಷ್ಟತೆಯ ಆಧಾರದ ಮೇಲೆ ಪರಿಶಿಷ್ಟ ಪಂಗಡಗಳಿಗೂ ರಕ್ಷಣೆ, ಆರಕ್ಷಣೆ ಮತ್ತಿತರ ಸೌಲಭ್ಯಗಳನ್ನು ನೀಡಲಾಗಿದೆ. ಇದೇ ಪರಿಚ್ಛೇದಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಅವಕಾಶ ಮಾಡಿಕೊಟ್ಟಿವೆ. 1950ರ ಪರಿಶಿಷ್ಟ ಜಾತಿಗಳಿಗೆ ಸಂಬಂಧಪಟ್ಟ ಆದೇಶದ ಸಾಂವಿಧಾನಿಕ ಸಿಂಧುತ್ವವನ್ನು ಭಾರತದ ಸರ್ವೋಚ್ಚ ನ್ಯಾಯಾಲಯ ಒಪ್ಪಿಕೊಂಡಿದೆ.

1986ರಲ್ಲಿ ಇದನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು (ರಿಟ್ ಅರ್ಜಿ ಸಂಖ್ಯೆ 9995/83 ಸೂಸೈ ವರ್ಸಸ್ ಭಾರತ ಸರಕಾರ ಮತ್ತು ಇತರರು). ಇದರ ವಿಚಾರಣೆ ನಡೆಸಿದ ನ್ಯಾಯಾಲಯ ತನ್ನ ತೀರ್ಪಿನ 7ನೆಯ ಪ್ಯಾರಾದಲ್ಲಿ ''ಜಾತಿ ವ್ಯವಸ್ಥೆಯು ಹಿಂದೂ ಧರ್ಮದ ಸಾಮಾಜಿಕ ಸಂರಚನೆಯ ವೈಶಿಷ್ಟ್ಯ ಎಂಬುದನ್ನು ಈಗ ಅಲ್ಲಗಳೆಯಲು ಸಾಧ್ಯವಿಲ್ಲ. ಹಿಂದೂ ಮತ್ತು ಸಿಖ್ ಸಮುದಾಯಗಳಲ್ಲಿ ತುಳಿತಕ್ಕೊಳಗಾದ ಹಿಂದುಳಿದ ವರ್ಗಗಳು, ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ದುರ್ಬಲತೆ ಮುಂತಾದ ಸಮಸ್ಯೆಗಳಿಂದ ಬಳಲಿವೆ. ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿವೆ ಎಂದು ಸ್ಥೂಲವಾಗಿ ಹೇಳಬಹುದು. ಪರಿಶಿಷ್ಟ ಜಾತಿಗಳು ಅಸ್ಪೃಶ್ಯತೆಯ ಆಚರಣೆಯಿಂದ ಸಮಾಜದ ಮುಖ್ಯವಾಹಿನಿಯಿಂದ ಹೊರಗಿಡಲ್ಪಟ್ಟದ್ದರಿಂದ ಹಿಂದುಳಿದ ವರ್ಗಗಳಾಗಿವೆ ಎಂಬುದನ್ನು ಕಾನ್ಸ್ಟಿಟ್ಯುಯೆಂಟ್ ಅಸೆಂಬ್ಲಿಯ ಕಾಲದಿಂದಲೂ ಚರ್ಚಿಸಲಾಗುತ್ತಿದೆ ಮತ್ತು ಇದು ಸಮರ್ಥನೀಯವಾಗಿದೆ. ಅಸ್ಪೃಶ್ಯತೆಯ ಅನಿಷ್ಟ ಪದ್ಧತಿಯನ್ನು ಹಿಂದೂ ಧರ್ಮವನ್ನು ಹೊರತುಪಡಿಸಿ ಬೇರೆ ಯಾವ ಧರ್ಮಗಳಲ್ಲಿಯೂ ಗುರುತಿಸಲಾಗಿಲ್ಲ; ಅಷ್ಟೇ ಅಲ್ಲದೆ ಮತಾಂತರವಾದವರನ್ನು ಹಿಂದಿನ ಪೀಡಿತ ವರ್ಗದಂತೆ ಪರಿಗಣಿಸಲಾಗುವುದಿಲ್ಲ. ಹೊಸ ಧರ್ಮವು ಅವರಿಗೆ ಸಮಾನತೆ ನೀಡಿದರೆ, ಹಳೆಯ ಪೀಡನೆಯ ಲಾಭವೇಕೆ?'' ಎಂದು ಹೇಳಿದೆ. Prafull Goradia vs Union of India (2011) ಪ್ರಕರಣದಲ್ಲಿ ಧರ್ಮಾಧಾರಿತ ಮೀಸಲಾತಿಗೆ ಅವಕಾಶವಿಲ್ಲ ಎಂಬ ತೀರ್ಪು ಬಂದಿದೆ.

800 ವರ್ಷಗಳ ಮುಸ್ಲಿಮರ ಆಕ್ರಮಣ ಮತ್ತು ದಬ್ಬಾಳಿಕೆಗಳಿದ್ದಾಗಲೂ, 200 ವರ್ಷಗಳ ನಿರಂಕುಶ ಬ್ರಿಟಿಷ್ ಆಡಳಿತವಿದ್ದಾಗಲೂ, ತಾರತಮ್ಯಗಳನ್ನು ಅನುಭವಿಸಿಯೂ ಯಾವ ಸಮುದಾಯಗಳು ಹಿಂದೂ ಧರ್ಮವನ್ನು ತೊರೆದಿಲ್ಲವೋ ಆ ಸಮುದಾಯಗಳಿಗೆ ನ್ಯಾಯಯುತವಾಗಿ ಸೌಲಭ್ಯಗಳು ಸಿಗಬೇಕು. ಇದು ಸಂವಿಧಾನಬದ್ಧವೂ ಹೌದು, ಡಾ. ಬಾಬಾಸಾಹೇಬರ ಆಶಯ ಕೂಡ. 1950ರ ಸುಪ್ರೀಂ ಕೋರ್ಟ್ ಆದೇಶವು ಹಿಂದುಗಳು ಯಾರು ಎಂದು ಸ್ಪಷ್ಟವಾಗಿ ವ್ಯಾಖ್ಯಾನಿಸಿದ್ದರೂ, ಈ ಬಗ್ಗೆ ಹಲವು ನ್ಯಾಯಾಲಯಗಳು ತೀರ್ಪುಗಳನ್ನು ನೀಡಿದಾಗಲೂ, ಅನ್ಯಮತೀಯರು ಸುಳ್ಳು ಪ್ರಮಾಣಪತ್ರಗಳನ್ನು ಪಡೆದು ಪ್ರಯೋಜನಗಳನ್ನು ಅನುಭವಿಸುತ್ತಿರುವುದು ನಿಜವೇ ಆಗಿದೆ. ಈ ಅಕ್ರಮಗಳನ್ನು ಸಕ್ರಮವಾಗಿ ಮಾಡುವ ತಂತ್ರವೇ 'ಮಾತೃಹೃದಯದ ಯಾಚನೆ' ಅಂದುಕೊಳ್ಳಬಹುದೇ?

''ಜಾತಿ ಇಲ್ಲದ ಧರ್ಮಕ್ಕೆ ಬನ್ನಿ, ಸಮಾನತೆಯ ತೋಟಕ್ಕೆ ಬನ್ನಿ'' ಎಂದು ಕೈಬೀಸಿ ಕರೆದ ಮಿಷನರಿಗಳು ಇಂದು ತಮ್ಮಲ್ಲಿ ಅದೇ ತಾರತಮ್ಯ ಎಸಗುತ್ತಿವೆ; ಇವರಿಗೆ ಬೇರೆ ಚರ್ಚುಗಳು ಅಥವಾ ಚರ್ಚುಗಳಲ್ಲಿ ಬೇರೆ ಆವರಣಗಳು, ಪ್ರತ್ಯೇಕವಾದ ಸ್ಮಶಾನಗಳು ಇವೆ ಎಂದರೆ ನಂಬಬೇಕಾಗಿದೆ. ಮುಸ್ಲಿಮರಲ್ಲಿಯೂ ಇದೇ ರೀತಿಯ ತಾರತಮ್ಯಗಳಿವೆ. ಒಂದು ಕಡೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತರಿಗೆ ಮೀಸಲಾತಿಗಳನ್ನು ಕೊಡಲು ಸಾಧ್ಯವಿಲ್ಲ ಎಂದು ನ್ಯಾಯಾಲಯದಲ್ಲಿ ಬರೆದುಕೊಟ್ಟು, ಇನ್ನೊಂದು ಕಡೆ ದಲಿತ ಕ್ರೈಸ್ತರಿಗೆ ಮತ್ತು ದಲಿತ ಮುಸಲ್ಮಾನರಿಗೆ ಪರಿಶಿಷ್ಟ ಜಾತಿಯ ಜನರಿಗಿರುವ ಸೌಲಭ್ಯವನ್ನು ಸರಕಾರದಿಂದ ಒದಗಿಸಿ ಎನ್ನುತ್ತಿದ್ದಾರೆ. ಇದು ಇಬ್ಬಗೆಯ ನೀತಿ ಅಲ್ಲವೇ?

(ಲೇಖಕರು ಸಾಮಾಜಿಕ ಹೋರಾಟಗಾರರು)

ಭಟ್ಟರ್ ಸ್ಕಾಚ್

- ದಿನೇಶ ಕಾಮತ, ಹುಬ್ಬಳ್ಳಿ
ಭಟ್ರೇ, ಹೆಂಡತಿಯ ಮಾತು ಕೇಳಿದರೆ ತಪ್ಪಾ?
- ಕೇಳದಿರುವುದು ತಪ್ಪು!

- ಬಾಲು, ಧಾರವಾಡ
ಭಟ್ರೇ, 'ಪ್ರವಾಸಿ ಪ್ರಪಂಚ'ಕ್ಕೆ ಬರೆಯಲು ಏನು ಅರ್ಹತೆಯಿರಬೇಕು?
- ಪ್ರವಾಸಿ ಆಗಿದ್ದರೆ ಸಾಕು !

- ರವಿಕುಮಾರ ಸಿ.,(ಇಮೇಲ್ ಮೂಲಕ)
ಭಟ್ರೇ, 'ತಿರುಗಿ ಕೆಟ್ಟವರಿಲ್ಲವೋ' ಅಂತ ಹೇಳಿದ್ದೀರಲ್ಲ?
- ಹೂಂ.. ಕೂತು ಕೆಟ್ಟವರಿದ್ದಾರಲ್ಲ!

- ರಶ್ಮಿ ಕುಲಕರ್ಣಿ, ಧಾರವಾಡ
ಭಟ್ರೇ, ಸಾಯಂಕಾಲದ ಕ್ಷಣಗಳು ಸ್ವಾರಸ್ಯ ಅಂತಾರಲ್ಲ?
- ಹೂಂ... ಐಪಿಎಲ್ ಮುಗಿಯಿತಲ್ಲ?!

- ಶ್ರೀಶ ಕೊಡಚಾದ್ರಿ, (ಇಮೇಲ್ ಮೂಲಕ)
ಭಟ್ರೇ, ಇತ್ತೀಚೆಗೆ ನನ್ನ ಬೇಸರಕ್ಕೆ ಕಾರಣಗಳೇನು ಹೇಳ್ತೀರಾ?
- ಕೆಲವರು ಲೈಕ್ಸ್ ಬರದಿದ್ದರೂ ಖಿನ್ನರಾಗುತ್ತಾರೆ!

- ರಾಗಿಣಿ, (ಇಮೇಲ್ ಮೂಲಕ)
ಭಟ್ರೇ, ಕೆಲವರಿಗೆ ವಯಸ್ಸಾದರೂ ಏನು ಮಾತಾಡಬೇಕು ಎಂಬುದು ಗೊತ್ತಾಗುವುದಿಲ್ಲವಲ್ಲ?
- ಕೆಲವರಿಗೆ ಅನ್ನೋ ಬದಲು ಕಮಲ್ ಹಾಸನ್‌ಗೆ ಎಂದು ನೇರವಾಗಿ ಹೇಳಬಹುದಿತ್ತು!

- ಜಿ.ವಿ.ವೈದ್ಯ, ಬೆಂಗಳೂರು
ಭಟ್ರೇ, ಏಕಕಾಲದಲ್ಲಿ ಖುಷಿ ಮತ್ತು ಬೇಸರದಲ್ಲಿರುವುದು ಸಾಧ್ಯವಾ?
- ಮದುವೆಯಾದವರನ್ನು ನೋಡಿದರೆ ಗೊತ್ತಾಗುವುದಿಲ್ಲವಾ?!

- ರೂಪಾ ಬೆಳಗಂಡಿ, ಶಿರಸಿ
ಭಟ್ರೇ, ಸರಿಯಾಗಿದ್ದಾಗಲೂ ತಪ್ಪು ಎಂದೇ ಕರೆಯಿಸಿಕೊಳ್ಳುವವರಿಗೆ ಏನಂತಾರೆ?
- ಗಂಡ!

- ಬಿ.ವಾಸು, ದಾವಣಗೆರೆ
ಭಟ್ರೇ, ಮಹಿಳೆಯರಿಗೆ ಆಹಾರ, ನೀರು, ಆಭರಣ, ಸೀರೆ ಇದ್ದರೆ ಸಾಕಂತೆ, ಹೌದಾ?
- ಜತೆಗೆ ಹೊಗಳಿಕೆ!

- ರಾಮದೇವ ದುರ್ಗ, (ಇಮೇಲ್ ಮೂಲಕ)
ಭಟ್ರೇ, ಹ್ಯಾಪಿ ಮ್ಯಾರೇಜ್ ಸೀಕ್ರೆಟ್ ಏನು?
- ಅದು ಸೀಕ್ರೆಟ್!

- ವಾಸಂತಿ ಕತ್ತಲಗೆರೆ, ಮಳವಳ್ಳಿ
ಭಟ್ರೇ, ಅವಳ ಹೆಸರನ್ನು ಕೂಗಿ ಕರೆದರೂ ಬರುವುದಿಲ್ಲವಲ್ಲ?
- 'ಕಸ್ತೂರಬಾ' ಅಂತ ಹೆಸರಿಟ್ಟುಕೊಂಡರೆ ಇದೊಂದು ಫಜೀತಿ!

- ಗಣಪತಿ ಪಂಡಿತ, ಯಲ್ಲಾಪುರ
ಭಟ್ರೇ, ನೀವು ಮೀಸೆ ಬಿಡಲು ನಿರ್ಧರಿಸಿದ್ದೀರಂತೆ?
- 'ಜಿರಳೆಗೂ, ಮೀಸೆ ಇರುತ್ತೆ' ಅಂತ ಹೇಳಿದ್ದನ್ನು ಈ ರೀತಿ ಭಾವಿಸಬಾರದಿತ್ತು!

- ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)
ಭಟ್ರೇ, ನೀವು ಜೀವನವನ್ನು ಸಖತ್ ಖುಷಿಯಿಂದ ಕಳೆಯುತ್ತೀರಲ್ಲ, ಹೇಗೆ?
- ಮದುವೆಯಾಗಿದ್ದರೂ ನೀವು ಜೀವನವನ್ನು ಸಖತ್ ಖುಷಿಯಿಂದ ಕಳೆಯುತ್ತೀರಲ್ಲ ಹೇಗೆ ಎಂದು ಕೇಳಿದ್ದರೆ ಉತ್ತರಿಸುತ್ತಿದ್ದೆ!

ನ್ಯಾ. ಗವಾಯಿ ನಡೆ ನ್ಯಾಯಾಂಗಕ್ಕೆ ಮೇಲ್ಪಂಕ್ತಿ

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ಸೀಜರ್‌ನ ಹೆಂಡತಿ ಸಂಶಯಾತೀತಳಾಗಿರಬೇಕೆನ್ನುವುದು ಹಳೆಯ ನುಡಿಗಟ್ಟು. ಸಾರ್ವಜನಿಕ ಹುದ್ದೆಯಲ್ಲಿರುವ ವ್ಯಕ್ತಿಗಳು, ಅದರಲ್ಲೂ ಉನ್ನತ ಸ್ಥಾನದಲ್ಲಿರುವವರು ತಾವು ಮಾತ್ರವಲ್ಲದೆ ತಮ್ಮ ಕುಟುಂಬದವರೂ ಸಹ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲದಂತೆ ನಡೆದುಕೊಳ್ಳಬೇಕೆನ್ನುವುದು ಈ ಮಾತಿನ ತಾತ್ಪರ್ಯ. ರಾಮಾಯಣದಲ್ಲಿ ಸೀತೆಯನ್ನು ಕಾಡಿಗೆ ಕಳುಹಿಸುವ ಮೂಲಕ ಶ್ರೀರಾಮನೇ ಆಳುವವರ ನಡವಳಿಕೆ ಹೇಗಿರಬೇಕೆಂದು ಸಾರಿದ ಅತ್ಯುನ್ನತ ಆದರ್ಶ ನಮ್ಮ ಮುಂದಿದೆ. ಆದರೆ ಸದ್ಯದ ನಮ್ಮ ಆಡಳಿತಗಾರರಿಗೆ ಈ ನಿಯಮಗಳನ್ನು ಅನ್ವಯಿಸಿದರೆ ಎಲ್ಲರನ್ನೂ ಮನೆಗೆ ಕಳುಹಿಸಬೇಕಾಗುತ್ತದೆ. ಈ ವಿಷಯ ಒತ್ತಟ್ಟಿಗಿರಲಿ. ನ್ಯಾಯದಾನದ ವಿಚಾರದಲ್ಲಿ ಈಗಲೂ ನಮ್ಮ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಾವು ನಂಬಿಕೆ ಇಟ್ಟಿದ್ದೇವೆ. ಅಂತಿಮವಾಗಿ ನ್ಯಾಯಕ್ಕೆ ಜಯ, ಸತ್ಯಕ್ಕೆ ಗೆಲುವು ಎಂಬ ನಂಬಿಕೆಯನ್ನು ಇಂದಿಗೂ ಕಾಪಿಟ್ಟುಕೊಳ್ಳಲು ಕಾರಣ ನ್ಯಾಯಾಂಗದ ಮೇಲಿನ ಭರವಸೆ. ಆದರೆ ನ್ಯಾಯಾಂಗವೂ ಕೂಡ ಇತರ ಅಂಗಗಳಂತೆ ಕಲುಷಿತವಾದರೆ ಏನು ಮಾಡಬೇಕು ?

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಪ್ರಕರಣವು ನ್ಯಾಯಾಂಗದ ಮೇಲಿನ ನಮ್ಮ ನಂಬಿಕೆಗೆ ಮತ್ತೊಮ್ಮೆ ಏಟು ನೀಡಿದೆ. ಈ ಪ್ರಕರಣ ದೇಶದ ನ್ಯಾಯಾಂಗ ವಲಯದಲ್ಲಿ ಅತಿ ದೊಡ್ಡ ಸಂಚಲನ ಸೃಷ್ಟಿಸಿದರೂ ಸಾರ್ವಜನಿಕವಾಗಿ ಇನ್ನು ಹೆಚ್ಚಿನ ಚರ್ಚೆಗೊಳಪಟ್ಟಿಲ್ಲ. ನ್ಯಾಯಾಂಗದ ನಡವಳಿಕೆ ಮೇಲೆ ಅಭಿಪ್ರಾಯ ವ್ಯಕ್ತಪಡಿಸಲು ಇರುವ ಹಿಂಜರಿಕೆಯೂ ಇದಕ್ಕೆ ಪ್ರಮುಖ ಕಾರಣ. ಆದರೆ ಪ್ರಜಾಪ್ರಭುತ್ವದಲ್ಲಿ ಅಂತಿಮವಾಗಿ ನ್ಯಾಯವನ್ನು ಎತ್ತಿ ಹಿಡಿಯುವ ಅವಕಾಶ ಇರುವುದು ನ್ಯಾಯಾಂಗಕ್ಕೆ. ಈ ಕಾರಣದಿಂದಲೇ ಜೂಲಿಯಸ್ ಸೀಜರ್ ತನ್ನ ಎರಡನೇ ಹೆಂಡತಿ ಪಾಂಪೆಯಾಳಲ್ಲಿ ಕಾಣ ಬಯಸಿದ್ದ ನೈತಿಕ ಪರಿಶುದ್ಧತೆ, ಪಾರದರ್ಶಕತೆ, ಪ್ರಾಮಾಣಿಕತೆ, ವಿಶ್ವಾಸ ಮತ್ತು ನಂಬಿಕೆಯನ್ನು ನ್ಯಾಯಾಂಗದಲ್ಲೂ ಬಯಸುತ್ತೇವೆ. ಅದು ಇಲ್ಲ ಎಂದಾದರೆ ನಮ್ಮ ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದರ್ಥ.

'ಆಗಿದ್ದೆಲ್ಲವೂ ಒಳ್ಳೆಯದಕ್ಕೆ' ಎಂಬ ಗೀತಾವಾಕ್ಯದಲ್ಲಿ ನಂಬಿಕೆ ಇಡುವುದಾದರೆ ಕಳೆದ ಮಾರ್ಚ್ 14ರ ರಾತ್ರಿ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಮನೆಗೆ ಬೆಂಕಿ ಬಿದ್ದ ಘಟನೆಯನ್ನು ಇದೇ ಸಾಲಿಗೆ ಸೇರಿಸಬಹುದು. ಬೆಂಕಿ ನಂದಿಸಲು ಹೋದ ಅಗ್ನಿಶಾಮಕ ದಳದ ಸಿಬ್ಬಂದಿ ಒಂದು ಕೋಣೆಯ ಪೂರ್ತಿ ಭಾಗಶ: ಸುಟ್ಟುಹೋದ ನೋಟುಗಳ ರಾಶಿಯನ್ನು ಕಂಡು ಬೆಚ್ಚಿ ಬಿದ್ದಿದ್ದರು. ಅಧಿಕಾರಿಗಳ ಪ್ರಕಾರ ಅಲ್ಲಿ ಸುಮಾರು ಒಂದೂವರೆ ಅಡಿ ಎತ್ತರದಲ್ಲಿ ನೋಟುಗಳನ್ನು ಪೇರಿಸಿಡಲಾಗಿತ್ತು. ನ್ಯಾಯಮೂರ್ತಿ ಈ ದುಡ್ಡಿನ ಒಡೆತನವನ್ನು ಒಪ್ಪಿಕೊಂಡು ಅದರ ಮೂಲವನ್ನು ತಿಳಿಸಿದ್ದರೆ ಪ್ರಕರಣ ಅಲ್ಲಿಗೇ ಮುಗಿದು ಹೋಗು ತ್ತಿತ್ತು. ಆದರೆ ನ್ಯಾಯಮೂರ್ತಿ ವರ್ಮಾ ಇದರ ಮಾಲೀಕ ನಾನಲ್ಲ ಎನ್ನುವಲ್ಲಿಂದ ನೂರಾರು ಪ್ರಶ್ನೆಗಳು ತಟ್ಟನೇ ಎದ್ದು ನಿಂತಿದ್ದವು.

'ಈ ದುಡ್ಡು ತಮಗೆ ಇಲ್ಲವೇ ತಮ್ಮ ಕುಟುಂಬ ಸದಸ್ಯರಿಗೆ ಸೇರಿದ್ದಲ್ಲ. ಇದು ತಮ್ಮನ್ನು ಸಿಲುಕಿಸಲು ನಡೆಸಿದ ಪಿತೂರಿ' ಎಂದು ನ್ಯಾಯಮೂರ್ತಿ ವರ್ಮಾ ಸಮಜಾಯಿಸಿ ನೀಡಿದ ಬಳಿಕ ಸರಣಿ ಘಟನಾವಳಿಗಳು ತೆರೆದುಕೊಂಡವು. ದೆಹಲಿ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಅವರು ಪ್ರಾಥಮಿಕ ವಿಚಾರಣೆಗೆ ಆದೇಶ ನೀಡಿದರು. ವಿಚಾರಣೆ ಮಧ್ಯೆಯೇ ವರ್ಮಾ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ಅಲ್ಲಿನ ಬಾರ್ ಕೌನ್ಸಿಲ್ ವಿರೋಧದ ನಡುವೆ ವರ್ಗಾಯಿಸಲಾಯಿತು. ಈ ಮಧ್ಯೆ ಅವರ ವರ್ಗಾವಣೆಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದು ಸ್ಪಷ್ಟನೆ ನೀಡಲಾಯಿತು. ನ್ಯಾ. ವರ್ಮಾ ಅವರನ್ನು ಎಲ್ಲ ರೀತಿಯ ನ್ಯಾಯಾಂಗ ಕೆಲಸಗಳಿಂದ ಹೊರಗಿಡಲಾಯಿತು. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮೂವರು ನ್ಯಾಯಮೂರ್ತಿಗಳ ಆಂತರಿಕ ಸಮಿತಿ ರಚಿಸಿ ಈ ಪ್ರಕರಣದ ತನಿಖೆಗೆ ಆದೇಶ ಹೊರಡಿಸಿದರು.

ಈಗ ಆಂತರಿಕ ಸಮಿತಿ ತನ್ನ ವರದಿ ನೀಡಿದೆ. ಆದರೆ ಸುಪ್ರೀಂಕೋರ್ಟ್ ಈ ವರದಿಯನ್ನು ಬಹಿರಂಗಪಡಿಸಿಲ್ಲ. ಈ ಸಂಬಂಧ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ ಅರ್ಜಿಯನ್ನೂ ತಿರಸ್ಕರಿಸಿದೆ. ಸಮಿತಿ ಮುಂದೆ ನ್ಯಾಯಮೂರ್ತಿ ವರ್ಮಾ ಅವರು ಹಣದ ಮೂಲದ ಬಗ್ಗೆ ಸಮರ್ಪಕ ವಿವರಣೆಯನ್ನು ನೀಡಲು ವಿಫಲರಾಗಿದ್ದಾರೆ ಎನ್ನಲಾಗಿದೆ. ರಾಜೀನಾಮೆ ನೀಡುವಂತೆ ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ನೀಡಿದ ಸಲಹೆಯನ್ನೂ ಅವರು ನಿರಾಕರಿಸಿದ್ದಾರೆ ಎಂಬ ವರದಿಗಳಿವೆ. ಪ್ರಕರಣ ಈಗ ಸುಪ್ರೀಂಕೋರ್ಟ್ ವ್ಯಾಪ್ತಿಯನ್ನೂ ದಾಟಿ ಸಂಸತ್ತಿನ ಅವಗಾಹನೆಗೆ ಬಂದಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಆಂತರಿಕ ತನಿಖಾ ಸಮಿತಿಯ ವರದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಕಳುಹಿಸಿ ದ್ದಾರೆ. ರಾಷ್ಟ್ರಪತಿಯವರು ಈ ಶಿಫಾರಸನ್ನು ರಾಜ್ಯಸಭೆಯ ಅಧ್ಯಕ್ಷರು ಮತ್ತು ಲೋಕಸಭೆಯ ಸ್ಪೀಕರ್‌ಗೆ ಕಳುಹಿಸಿದ್ದಾರೆ. ಇದೀಗ ನ್ಯಾಯಮೂರ್ತಿ ವರ್ಮಾ ವಿರುದ್ಧ ಇಂಪೀಚ್‌ಮೆಂಟ್ ಅಥವಾ ಮಹಾಭಿಯೋಗ ಪ್ರಕ್ರಿಯೆ ನಡೆಸಬೇಕೇ ಬೇಡವೇ ಎಂದು ಸಂಸತ್ತು ನಿರ್ಧರಿಸಬೇಕಾಗಿದೆ. ಮುಂಬರುವ ಮುಂಗಾರು ಅಧಿವೇಶನದಲ್ಲಿ ನ್ಯಾಯಮೂರ್ತಿ ವರ್ಮಾ ವಿರುದ್ಧ ಮಹಾಭಿಯೋಗ ನಿರ್ಣಯವನ್ನು ಮಂಡಿಸುವ ಸಾಧ್ಯತೆಯಿದೆ.

ದೀರ್ಘ ದಂಡ ಪ್ರಕ್ರಿಯೆ: ಭಾರತದ ಇತಿಹಾಸದಲ್ಲಿ ಇದುವರೆಗೆ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ನ ಯಾವುದೇ ನ್ಯಾಯಮೂರ್ತಿಗಳನ್ನು ಮಹಾಭಿಯೋಗದ ಮೂಲಕ ಪದಚ್ಯುತಿಗೊಳಿಸಿಲ್ಲ. ನ್ಯಾಯಮೂರ್ತಿ ವಿ. ರಾಮಸ್ವಾಮಿ, ಸೌಮಿತ್ರ ಸೇನ್ ಮತ್ತು ಇತರರ ವಿರುದ್ಧ ಇಂಪೀಚ್‌ಮೆಂಟ್ ಪ್ರಕ್ರಿಯೆ ಪ್ರಾರಂಭವಾಗಿದ್ದರೂ, ಪದಚ್ಯುತಿಯಾಗುವ ಮುನ್ನವೇ ಅವರು ರಾಜೀನಾಮೆ ನೀಡಿದ್ದರು. ಒಂದು ವೇಳೆ ನ್ಯಾ. ಯಶವಂತ್ ವರ್ಮಾ ಮಹಾಭಿಯೋಗದ ಮೂಲಕ ಪದಚ್ಯುತಿಗೊಂಡರೆ ಹೊಸ ಇತಿಹಾಸ ಸೃಷ್ಟಿಯಾಗಲಿದೆ. ಆದರೆ ಈ ಹಿಂದಿನ ಪ್ರಕರಣಗಳನ್ನು ಗಮನಿಸಿದರೆ ಈ ಸಾಧ್ಯತೆ ತೀರಾ ಕಡಿಮೆ.

ಭಾರತದಲ್ಲಿ ಅಧಿಕಾರಿಗಳನ್ನು, ಚುನಾಯಿತ ಪ್ರತಿನಿಧಿಗಳನ್ನು ಸುಲಭವಾಗಿ ಸುಲಭವಾಗಿ ವಜಾಗೊಳಿಸಬಹುದು. ಆದರೆ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನು ವಜಾಗೊಳಿಸುವ ಪ್ರಕ್ರಿಯೆ ಅತ್ಯಂತ ಸಂಕೀರ್ಣವಾದುದು. ಸಂವಿಧಾನದ ರಕ್ಷಕನಾಗಿ ಕೆಲಸ ಮಾಡುವ ಅಂಗಕ್ಕೆ ಸ್ಥಾನ ಭ್ರಷ್ಟತೆಯ ಎಳ್ಳಷ್ಟೂ ಭಯ ಇರಬಾರದೆಂಬ ಕಾರಣಕ್ಕೆ ಈ ಪ್ರಕ್ರಿಯೆಯನ್ನು ಜಟಿಲಗೊಳಿಸಲಾಗಿದೆ.

ಮಹಾಭಿಯೋಗ ಪ್ರಕ್ರಿಯೆಯನ್ನು ಪ್ರಾರಂಭಿಸಲು ಲೋಕಸಭೆಯಲ್ಲಿ ಕನಿಷ್ಠ 100 ಸದಸ್ಯರು ಅಥವಾ ರಾಜ್ಯಸಭೆಯಲ್ಲಿ ಕನಿಷ್ಠ 50 ಸದಸ್ಯರು ಸಹಿ ಮಾಡಿದ ನಿರ್ಣಯವನ್ನು ಲೋಕಸಭೆಯ ಸ್ಪೀಕರ್ ಅಥವಾ ರಾಜ್ಯಸಭೆಯ ಅಧ್ಯಕ್ಷರಿಗೆ ಸಲ್ಲಿಸಬೇಕು. ಸ್ಪೀಕರ್ ಅಥವಾ ಅಧ್ಯಕ್ಷರು ನಿರ್ಣಯವನ್ನು ಪರಿಶೀಲಿಸಿ ಆರೋಪಗಳು ಗಂಭೀರವಾಗಿದ್ದರೆ, ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಪ್ರಸಿದ್ಧ ಕಾನೂನು ತಜ್ಞರನ್ನೊಳಗೊಂಡ ಮೂವರು ಸದಸ್ಯರ ತನಿಖಾ ಸಮಿತಿಯನ್ನು ರಚಿಸುತ್ತಾರೆ. ಆರೋಪಿತ ನ್ಯಾಯಮೂರ್ತಿಯು ಸಮಿತಿ ಮುಂದೆ ಹಾಜರಾಗಿ ತನ್ನನ್ನು ಸಮರ್ಥನೆ ಮಾಡಿಕೊಳ್ಳಬಹುದು. ಸಮಿತಿಯು ನ್ಯಾಯಮೂರ್ತಿಯನ್ನು ದೋಷಿ ಇಲ್ಲವೇ ನಿರ್ದೋಷಿ ಎಂದು ಘೋಷಿಸುತ್ತದೆ.

ಸಮಿತಿಯು ನ್ಯಾಯಮೂರ್ತಿಯನ್ನು ದೋಷಿಯೆಂದು ಪರಿಗಣಿಸಿದರಷ್ಟೇ ಮಹಾಭಿಯೋಗ ನಿರ್ಣಯವನ್ನು ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಲಾಗುತ್ತದೆ. ಎರಡೂ ಸದನಗಳಲ್ಲಿ ಕನಿಷ್ಠ ಮೂರನೇ ಎರಡರಷ್ಟು ಬಹುಮತದಿಂದ ಈ ನಿರ್ಣಯ ಅಂಗೀಕಾರವಾಗಬೇಕು. ಆ ಬಳಿಕವಷ್ಟೇ ಈ ನಿರ್ಣಯವನ್ನು ರಾಷ್ಟ್ರಪತಿಯವರಿಗೆ ಕಳುಹಿಸಲಾಗುತ್ತದೆ. ರಾಷ್ಟ್ರಪತಿಯವರು ನ್ಯಾಯಮೂರ್ತಿಯನ್ನು ವಜಾಗೊಳಿಸುವ ಆದೇಶವನ್ನು ಹೊರಡಿಸುತ್ತಾರೆ.

ನ್ಯಾಯಮೂರ್ತಿ ವರ್ಮಾ ಅವರ ಮೇಲಿನ ಆರೋಪಗಳ ಬಗ್ಗೆ ಈಗಾಗಲೇ ಸುಪ್ರೀಂಕೋರ್ಟ್ ನೇಮಿಸಿದ ಆಂತರಿಕ ಸಮಿತಿ ತನಿಖೆ ನಡೆಸಿ ವರದಿ ನೀಡಿರುವುದರಿಂದ ಮತ್ತೊಮ್ಮೆ ಹೊಸ ಸಮಿತಿ ರಚಿಸಬೇಕೇ ಬೇಡವೇ ಎಂದು ಸಂಸತ್ತು ತೀರ್ಮಾನಿಸಬೇಕಾಗಿದೆ.

ದೇಶದ ಇತಿಹಾಸದಲ್ಲಿ ಇದುವರೆಗೆ ಯಾವುದೇ ನ್ಯಾಯಮೂರ್ತಿಯನ್ನು ಮಹಾಭಿಯೋಗದ ಮೂಲಕ ಪದಚ್ಯುತಿಗೊಳಿಸಿಲ್ಲ ಎಂದರೆ ಯಾವುದೇ ಎಲ್ಲ ನ್ಯಾಯಮೂರ್ತಿಗಳೂ ಅಕಳಂಕಿತರಾಗಿದ್ದರೆಂದು ಅರ್ಥವಲ್ಲ. ವಜಾ ಪ್ರಕ್ರಿಯೆ ಅತ್ಯಂತ ಕಠಿಣವಾಗಿರುವ ಕಾರಣಕ್ಕೆ ಮತ್ತು ಕೊನೆಯವರೆಗೂ ರಾಜೀನಾಮೆ ಬಿಸಾಕುವ ಅವಕಾಶ ಮುಕ್ತವಾಗಿರುವ ಕಾರಣಕ್ಕೆ ಇದುವರೆಗೂ ಯಾವುದೇ ನ್ಯಾಯಮೂರ್ತಿ ವಜಾ ಹಂತದ ತನಕ ಸಾಗಿ ಬಂದಿಲ್ಲ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದಾಗ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪ ಎದುರಿಸಿದ್ದ ನ್ಯಾಯಮೂರ್ತಿ ವಿ. ರಾಮಸ್ವಾಮಿ ವಿರುದ್ಧ 1993ರಲ್ಲಿ ಲೋಕಸಭೆಯಲ್ಲಿ ಮಹಾಭಿಯೋಗ ನಿರ್ಣಯದ ಮೇಲೆ ಮತದಾನ ನಡೆದಿತ್ತು. ಆಡಳಿತಾರೂಢ ಕಾಂಗ್ರೆಸ್ ಸದಸ್ಯರು ಮತದಾನದಿಂದ ದೂರ ಉಳಿದ ಕಾರಣ ನಿರ್ಣಯಕ್ಕೆ ಅಗತ್ಯವಿರುವ ಮೂರನೇ ಎರಡರಷ್ಟು ಬಹುಮತ ಸಿಗಲಿಲ್ಲ. ನ್ಯಾಯಮೂರ್ತಿ ರಾಮಸ್ವಾಮಿ ನಿವೃತ್ತಿವರೆಗೂ ತಮ್ಮ ಹುದ್ದೆಯಲ್ಲಿ ಮುಂದುವರಿದರು.

ಕೋಲ್ಕತ್ತ ಹೈಕೋರ್ಟ್ ನ್ಯಾಯಮೂರ್ತಿ ಸೌಮಿತ್ರ ಸೇನ್ ಅವರ ಮೇಲೂ ಹಣದುರುಪಯೋಗದ ಆರೋಪ ಕೇಳಿ ಬಂದಿತ್ತು. 2011ರಲ್ಲಿ ರಾಜ್ಯಸಭೆ ಸೌಮಿತ್ರ ಸೇನ್ ಅವರನ್ನು ಪದಚ್ಯುತಿಗೊಳಿಸುವ ನಿರ್ಣಯವನ್ನು ಅಂಗೀಕರಿಸಿತ್ತು. ಲೋಕಸಭೆಯಲ್ಲೂ ಚರ್ಚೆ ಆರಂಭವಾಗುವ ಹೊತ್ತಿಗೆ ನ್ಯಾಯಮೂರ್ತಿ ಸೇನ್ ಅವರು ರಾಜೀನಾಮೆ ಸಲ್ಲಿಸಿ ಹೊರನಡೆದಿದ್ದರು. ಇದೇ ರೀತಿ ಭೂ ಕಬಳಿಕೆ, ಭ್ರಷ್ಟಾಚಾರ ಮತ್ತು ಆಡಳಿತಾತ್ಮಕ ದುರ್ನಡತೆ ಸೇರಿದಂತೆ ಹಲವು ಗಂಭೀರ ಆರೋಪಗಳನ್ನು ಹೊತ್ತಿದ್ದ ನ್ಯಾಯಮೂರ್ತಿ ಪಿ.ಡಿ. ದಿನಕರನ್ ಅವರು ಮಹಾಭಿಯೋಗ ಪ್ರಕ್ರಿಯೆ ನಡುವೆಯೇ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಹೊಣೆಗಾರಿಕೆ ಮತ್ತು ಪಾರದರ್ಶಕತೆ ಪ್ರಶ್ನೆ: ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ನಡೆ ಸಂಶಯಾಸ್ಪದವಾಗಿದೆ ಎಂದು ಹೇಳುವಂತಿಲ್ಲ. ಆದರೆ ನ್ಯಾಯಾಂಗದ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕುರಿತ ಚರ್ಚೆಯನ್ನು ಈ ಪ್ರಕರಣ ಮತ್ತೊಮ್ಮೆ ಮುನ್ನೆಲೆಗೆ ತಂದಿದೆ. ಮುಖ್ಯವಾಗಿ ಸಾರ್ವಜನಿಕ ನಂಬಿಕೆಗೆ ಸಂಬಂಧಿಸಿದ ಇಂತಹ ಗಂಭೀರ ಪ್ರಕರಣಗಳಲ್ಲಿ ತನಿಖಾ ಸಮಿತಿಯ ವಿವರಗಳನ್ನು ಸುಪ್ರೀಂಕೋರ್ಟ್ ಸಾರ್ವಜನಿಕರ ಮುಂದೆ ಬಿಚ್ಚಿಡಬೇಕಿತ್ತು. ಗೌಪ್ಯತೆಯನ್ನು ಮುಂದಿಟ್ಟು ಮುಚ್ಚಿಡಬಾರದಿತ್ತು ಎಂಬ ಮಾತುಗಳು ಕೇಳಿ ಬರುತ್ತಿವೆ. ನ್ಯಾಯಮೂರ್ತಿ ವರ್ಮಾ ಅವರ ಪ್ರತಿಕ್ರಿಯೆಯನ್ನು ಸಾರ್ವಜನಿಕಗೊಳಿಸಲು ಸಾಧ್ಯವಿದ್ದರೆ ತನಿಖಾ ವರದಿಯನ್ನು ಬಹಿರಂಗಪಡಿಸಲು ಗೌಪ್ಯತೆ ಅಡ್ಡಿಯಾಗಿದ್ದೇಕೆ ಎಂಬ ಪ್ರಶ್ನೆ ನ್ಯಾಯಾಂಗದ ವಲಯದಲ್ಲಿಯೇ ಕೇಳಿ ಬಂದಿದೆ.

ನ್ಯಾಯಮೂರ್ತಿ ವರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರಿ ಸಲ್ಲಿಸಲಾದ ಅರ್ಜಿಯನ್ನೂ ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ನ್ಯಾಯಾಂಗದೊಳಗಿನ ತನಿಖೆಯು ಅಪರಾಧ ಪ್ರಕ್ರಿಯೆಗಿಂತ ಪ್ರತ್ಯೇಕವಾಗಿ ನಡೆಯುತ್ತದೆ ಎನ್ನುವುದು ಸರ್ವೋಚ್ಚ ನ್ಯಾಯಾಲಯದ ಅಭಿಮತ. ಆದರೆ ನ್ಯಾಯಾಂದ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರದ ನೇರ ಆರೋಪಗಳಿದ್ದಾಗ ಇತರ ಸಾರ್ವಜನಿಕ ಸೇವಕರಂತೆ ಅಪರಾಧದ ನೇರ ಮತ್ತು ಪಾರದರ್ಶಕ ತನಿಖೆಗೆ ಅವಕಾಶ ಮಾಡಿಕೊಡಬೇಕೆಂಬ ಆಗ್ರಹ ಕೇಳಿ ಬಂದಿದೆ.

ನಗದು ಪತ್ತೆಯಾದ ತಕ್ಷಣವೇ ನ್ಯಾಯಮೂರ್ತಿ ವರ್ಮಾ ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅವರ ಮೂಲ ಹೈಕೋರ್ಟ್ ಅಲಹಾಬಾದ್‌ಗೆ ವರ್ಗಾಯಿಸಿದ ವಿಚಾರದಲ್ಲೂ ಸುಪ್ರೀಂಕೋರ್ಟ್ ವಿವರಣೆ ನ್ಯಾಯಾಂಗ ವಲಯದಲ್ಲಿ ಟೀಕೆಗೆ ಗುರಿಯಾಗಿದೆ. ಅಲ್ಲಿಗೆ ವರ್ಗಾಯಿಸಿದ ಬಳಿಕ ಅವರಿಗೆ ಯಾವುದೇ ನ್ಯಾಯಾಂಗ ಕಾರ್ಯಗಳನ್ನು ನೀಡದಿರಲು ಆದೇಶಿಸಲಾಗಿತ್ತು. ಮುಖ್ಯವಾಗಿ ಆಂತರಿಕ ವರದಿಯ ಗೌಪ್ಯತೆ ನ್ಯಾಯಾಂಗದ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕಿರುವುದು ನಿಜ. ಸಾರ್ವಜನಿಕರ ನಂಬಿಕೆ ಮತ್ತು ವಿಶ್ವಾಸವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸುಪ್ರೀಂಕೋರ್ಟ್ ಈ ಪ್ರಕರಣವನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ನ್ಯಾಯಯುತವಾಗಿ ನಿರ್ವಹಿಸುವುದು ಅತ್ಯಗತ್ಯವಾಗಿತ್ತು. ಸಾರ್ವಜನಿಕರು ನ್ಯಾಯಾಂಗ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಮೇಲೆ ವಿಶ್ವಾಸ ಇಡಲು ಸಾಧ್ಯವಾಗದಿದ್ದರೆ, ನ್ಯಾಯಾಂಗದ ಮೇಲಿನ ನಂಬಿಕೆಗೂ ಚ್ಯುತಿ ಉಂಟಾಗಲಿದೆ.

ಭ್ರಷ್ಟಾಚಾರದ ಕಳಂಕ: ನ್ಯಾಯಾಧೀಶರ ಮೇಲಿನ ಹಣಕಾಸು ಅಕ್ರಮಗಳ ಆರೋಪಗಳು ಸಾರ್ವಜನಿಕರ ನಂಬಿಕೆಗೆ ನೇರವಾಗಿ ಧಕ್ಕೆ ತರುತ್ತವೆ. ಇತರ ಸರಕಾರಿ ನೌಕರರಂತೆ ನ್ಯಾಯಾಧೀಶರನ್ನೂ ಭ್ರಷ್ಟಾಚಾರ ತಡೆ ಕಾಯ್ದೆಯ ಅಡಿಯಲ್ಲಿ ತನಿಖೆಗೊಳಪಡಿಸಬೇಕೆಂಬ ಮಾತು ಈ ಪ್ರಕರಣದಿಂದಾಗಿ ಮತ್ತಷ್ಟು ಬಲವಾಗಿ ಕೇಳಿಬಂದಿವೆ. ನ್ಯಾಯಾಂಗವು ತನ್ನದೇ ಸದಸ್ಯರ ವಿರುದ್ಧದ ಆರೋಪಗಳನ್ನು ತಾನೇ ನಿರ್ವಹಿಸಿದರೆ ಪಕ್ಷಪಾತ ಅಥವಾ ರಕ್ಷಣೆಯ ಸಾಧ್ಯತೆಯ ಬಗ್ಗೆ ಸಾರ್ವಜನಿಕರಲ್ಲಿ ಸಂದೇಹ ಮೂಡುವುದು ಸ್ವಾಭಾವಿಕ.

ಬಹುಶ: ಸಾರ್ವಜನಿಕರ ಈ ಸಂದೇಹವನ್ನು ಪರಿಹರಿಸುವ ಉದ್ದೇಶದಿಂದಲೇ ವರ್ಮಾ ಪ್ರಕರಣದ ಬಳಿಕ ಸುಪ್ರೀಂ ಕೋರ್ಟ್‌ನ ಎಲ್ಲಾ ನ್ಯಾಯಾಧೀಶರು ಆಸ್ತಿ ವಿವರಗಳನ್ನು ಘೋಷಿಸಬೇಕೆಂಬ ನಿರ್ಧಾರಕ್ಕೆ ಬರಲಾಗಿದೆ. ಸುಪ್ರೀಂ ಕೋರ್ಟ್‌ನ 33 ಹಾಲಿ ನ್ಯಾಯಮೂರ್ತಿಗಳಲ್ಲಿ 21 ನ್ಯಾಯಮೂರ್ತಿಗಳು ಮೇ ಮೊದಲ ವಾರ ತಮ್ಮ ಆಸ್ತಿ ವಿವರಗಳನ್ನು ಬಹಿರಂಗಪಡಿಸಿದ್ದಾರೆ. ಅದರ ವಿವರಗಳನ್ನು ಸುಪ್ರೀಂ ಕೋರ್ಟ್ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಈ ಹಿಂದೆ ನ್ಯಾಯಾಧೀಶರು ತಮ್ಮ ಆಸ್ತಿ ಮತ್ತು ಸಾಲಗಳನ್ನು ಸಾರ್ವಜನಿಕವಾಗಿ ಘೋಷಿಸುವುದು ಕಡ್ಡಾಯವಾಗಿರಲಿಲ್ಲ.

ಒಟ್ಟಾರೆಯಾಗಿ, ನ್ಯಾಯಮೂರ್ತಿ ವರ್ಮಾ ಪ್ರಕರಣವು ಭಾರತೀಯ ನ್ಯಾಯಾಂಗ ವ್ಯವಸ್ಥೆಯು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುತ್ತಲೇ, ಸಾರ್ವಜನಿಕರ ವಿಶ್ವಾಸವನ್ನು ಉಳಿಸಿಕೊಳ್ಳುವ ಅಗತ್ಯವನ್ನು ಸಾರಿ ಹೇಳಿದೆ. ಈ ನಿಟ್ಟಿನಲ್ಲಿ ನ್ಯಾಯಾಧೀಶರ ನೇಮಕದಿಂದ ಹಿಡಿದು ನಿವೃತ್ತಿ ನಂತರದಲ್ಲಿ ಸ್ವೀಕರಿಸುವ ಹುದ್ದೆಗಳ ತನಕ ವಿವೇಚನಾಯುಕ್ತ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಮುಖ್ಯವಾಗಿ ನ್ಯಾಯಾಧೀಶರ ನೇಮಕ ಮತ್ತು ವರ್ಗಾವಣೆಯಲ್ಲಿ ಕೇಳಿ ಬರುತ್ತಿರುವ ಆರೋಪಗಳನ್ನು ದೂರ ಮಾಡಬೇಕಾಗಿದೆ.

ಇತ್ತೀಚೆಗಷ್ಟೇ ಸುಪ್ರೀಂಕೋರ್ಟ್ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸಿದ ಬಿ.ಆರ್. ಗವಾಯಿ ಅವರು ತಾವು ನಿವೃತ್ತಿ ಬಳಿಕ ಯಾವುದೇ ಹುದ್ದೆ ಅಲಂಕರಿಸುವುದಿಲ್ಲ ಎಂದು ಹೇಳಿರುವುದು ನಿಜಕ್ಕೂ ಮಾದರಿ ನಡೆ. ಸೀಜರನ ಹೆಂಡತಿ ಸಂಶಯಾತೀತಳಾಗಿರಬೇಕೆಂಬ ಮಾತು ನಿಜವಾಗಬೇಕಾದರೆ ನ್ಯಾಯಾಂಗದ ಅತ್ಯುನ್ನತ ಮಟ್ಟದಲ್ಲಿ ಈ ರೀತಿಯ ತ್ಯಾಗ ಮತ್ತು ದಿಟ್ಟ ಪ್ರಾಮಾಣಿಕ ಪ್ರಯತ್ನ ಅತ್ಯಗತ್ಯ.



ನಾರದ ಸಂಚಾರ
ಕಲಹಪ್ರಿಯ
naadigru@gmail.com

ಕಮಲ್ ಹಾಸನ್‌ಗೇನ್ ಗೊತ್ತು ಕಸ್ತೂರಿ ಕನ್ನಡದ ಕಂಪು..?!

'ಸುಮ್ಮನಿರಲಾರದೆ ಇರುವೆ ಬಿಟ್ಕೊಂಡ್ರು' ಅನ್ನೋ ರೀತಿಯಲ್ಲಿ, ನಮ್ಮ ಬಹುಭಾಷಾ ನಟ ಕಮಲ್ ಹಾಸನ್ ಅವರು ಕನ್ನಡದ ಹುಟ್ಟಿನ ಬಗ್ಗೆ ಏನೇನೋ ಮಾತಾಡಿ ಈಗ ತಗಲ್ಹಾಕಿಕೊಂಡಿರೋದು ನಿಮಗೆ ಗೊತ್ತು. ಇದಕ್ಕೆ ಕನ್ನಡಾಭಿಮಾನಿಗಳು ಸರಿಯಾಗೇ ಪ್ರತ್ಯುತ್ತರ ನೀಡಿದ್ದಾರೆ, ವಿದ್ವಾಂಸರು ಕೂಡ ವಿವಿಧ ಮಾಧ್ಯಮಗಳಲ್ಲಿ ವಾಸ್ತವ

ಸಂಗತಿಗಳನ್ನು ಹಂಚಿ ಕೊಂಡಿದ್ದಾರೆ. ಒಟ್ಟಿನಲ್ಲಿ ಕಮಲ್‌ರಿಗೆ ಚೆನ್ನಾಗೇ ಬಿಸಿ ತಟ್ಟಿದೆ. ಇಷ್ಟಾಗಿಯೂ, 'ಜಟ್ಟಿ ಕೆಳಗೆ ಬಿದ್ರೂ ಮೀಸೆ ಮಣ್ಣಾಗ್ಲಿಲ್ಲ' ಅನ್ನೋ ಮಾತಿಗೆ ಪುಷ್ಟಿ ನೀಡುವಂತೆ ನಮ್ ಕಮಲ್ ಸಾಹೇಬ್ರು ಕನ್ನಡಿಗರಲ್ಲಿ ಕ್ಷಮೆ ಕೋರೋದಕ್ಕೆ ಮೀನ-ಮೇಷ ಎಣಿಸುತ್ತಿರೋದಕ್ಕೆ ಏನನ್ನುವುದು?

ಈ ಸಂದರ್ಭದಲ್ಲಿ, ಕನ್ನಡದ ಹೆಮ್ಮೆಯ ಲೇಖಕಿ ಬಾನು ಮುಷ್ತಾಕ್ ಅವರು ಈ ವಿವಾದಕ್ಕೆ ಸಂಬಂಧಿಸಿದಂತೆ ನೀಡಿರುವ 'ಸೂಕ್ಷ್ಮ' ಪ್ರತಿಕ್ರಿಯೆಯೂ ಮಜಬೂತಾಗಿದೆ. ''ಬುಕರ್ ಪ್ರಶಸ್ತಿ ನನ್ನೊಬ್ಬಳಿಗೆ ಸಿಕ್ಕಿದ್ದು ಅಲ್ಲ; ಅದು ಕನ್ನಡಕ್ಕೆ ಮತ್ತು ಕನ್ನಡದ ಜನತೆಗೆ ಸಿಕ್ಕಿರುವಂಥದ್ದು. ಜತೆಗೆ ಕನ್ನಡಕ್ಕೆ ಎಂಟು ಸಲ ಜ್ಞಾನಪೀಠ ಪುರಸ್ಕಾರ ದಕ್ಕಿದೆ. ಕಮಲ್ ಹಾಸನ್ ನೀಡಿದ ವಿವಾದಾತ್ಮಕ ಹೇಳಿಕೆಗೆ ಅದೇ ಉತ್ತರ'' ಎಂದಿದ್ದಾರೆ ಬಾನು ಮುಷ್ತಾಕ್. ಇನ್ನು, ಬಾನು ಮುಷ್ತಾಕ್ ಅವರ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ದೀಪಾ ಭಸ್ತಿ ಅವರು ಕೂಡ, ''ಎಲ್ಲಾ ಭಾಷೆಗಳಿಗೂ ಅವುಗಳದ್ದೇ ಆದ ಸ್ಥಾನಮಾನ ಅನ್ನೋದು ಇರುತ್ತೆ. ಒಂದು ಭಾಷೆಯ ವಯಸ್ಸು ಇಟ್ಟುಕೊಂಡು ಮಾತಾಡಬಾರದು. ಅದು ಹಳೆಯದು, ಇದು ಹೊಸದು ಅಂತ ಹೇಳೋದು ಚರ್ಚೆ ಅಲ್ಲ'' ಎನ್ನುವ ಮೂಲಕ ಬಿಸಿ ಮುಟ್ಟಿಸಿದ್ದಾರೆ.

ಕಮಲ್ ಹಾಸನ್ ಅವರಿಗೆ ಮಾತ್ರವೇ ಅಲ್ಲ, ಕನ್ನಡದ ಬಗ್ಗೆ ಕೇವಲವಾಗಿ ಮಾತನಾಡುವ ಹಾಗೂ ಕನ್ನಡಿಗರನ್ನು ಹಗುರವಾಗಿ ಪರಿಗಣಿಸುವ ಯಾರಿಗೇ ಆಗಲಿ ಇಂಥ ಹೇಳಿಕೆಗಳು ಪಾಠವಾಗಬೇಕು. ನೀವೇನಂತೀರಿ?

ನಾರಾಯಣ ನಾರಾಯಣ!

ಮಾಡಬಾರದ್ದನ್ನು ಮಾಡಿ ''ನಾನವನಲ್ಲ, ನಾನವನಲ್ಲ'' ಎಂದು ಅಲವತ್ತುಕೊಳ್ಳುವ ಪಾಕಿಸ್ತಾನಕ್ಕೆ ಕೇಂದ್ರ ಸಚಿವ ಕೀರ್ತಿವರ್ಧನ್ ಸಿಂಗ್ ಮಾತಿನಲ್ಲೇ ಚಾಟಿ ಬೀಸಿದ್ದಾರೆ. ''ಪಾಕ್ ಸರಕಾರವು ಭಯೋತ್ಪಾದನೆಗೆ ನಿರಂತರ ಚಿತಾವಣೆ ನೀಡುತ್ತಿದ್ದರೆ ಭಾರತ ಅದನ್ನು ನೋಡಿಕೊಂಡು ಸುಮ್ಮನಿರಲು ಸಾಧ್ಯವೇ? ಹೀಗಾಗಿ ಸಿಂಧೂ ನದಿನೀರು ಹಂಚಿಕೆ ಒಪ್ಪಂದವನ್ನು ಭಾರತ ಅಮಾನತಿನಲ್ಲಿರಿಸಬೇಕಾಯಿತು. ಈ ಹೆಜ್ಜೆಗೆ ಪಾಕಿಸ್ತಾನವೇ ಕಾರಣ. ಹೀಗಾಗಿ ಜಾಗತಿಕ ವೇದಿಕೆಗಳಲ್ಲಿ ಭಾರತದ ಮೇಲೆ ಗೂಬೆ ಕೂರಿಸುವುದನ್ನು ಪಾಕಿಸ್ತಾನ ನಿಲ್ಲಿಸಲಿ'' ಎಂದಿದ್ದಾರೆ ಸಚಿವರು. ಪಾಕ್ ಇನ್ನಾದರೂ ತನ್ನ ತಪ್ಪನ್ನು ಅರಿತರೆ ಒಳಿತು.

ಪಂಚ್ ಭಕ್ಷ್ಯ ಪರಮಾನ್ನ..!

ಯಗಟಿ ರಘು ನಾಡಿಗ್

ಬ್ಯಾಂಕಿಂಗ್ ಉದ್ಯಮದಲ್ಲಿ ಹೀಗೊಂದು ಗ್ರಾಹಕ-ಸ್ನೇಹಿ ಬೆಳವಣಿಗೆ

ವಿತ್ತಲೋಕ
ರಮಾನಂದ ಶರ್ಮಾ
vveditoped@gmail.com

ಬ್ಯಾಂಕಿಂಗ್ ಉದ್ಯಮದಲ್ಲಿ ಕಳೆದ ವಾರ ಎರಡು ಗ್ರಾಹಕ-ಸ್ನೇಹಿ ಬೆಳವಣಿಗೆಗಳಾಗಿದ್ದು, ಇದರಿಂದಾಗಿ ಬ್ಯಾಂಕ್ ಗ್ರಾಹಕರು ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ. ಗ್ರಾಹಕರು ತಮ್ಮ ಉಳಿತಾಯ ಖಾತೆಗಳಲ್ಲಿ ನಿಗದಿತ ಕನಿಷ್ಠ ಮೊತ್ತವನ್ನು ಇರಿಸದಿದ್ದರೆ, ಅಂಥವರಿಗೆ ಬ್ಯಾಂಕುಗಳು ದಂಡ ವಿಧಿಸುತ್ತವೆ. ಈ ದಂಡ ಪ್ರಮಾಣವು ಏಕರೂಪವಾಗಿರದೆ ಬ್ಯಾಂಕಿನಿಂದ ಬ್ಯಾಂಕಿಗೆ ಭಿನ್ನವಾಗಿರುತ್ತದೆ. ಜತೆಗೆ, ಪಟ್ಟಣ, ನಗರ ಮತ್ತು ಮೆಟ್ರೋಪಾಲಿಟನ್ ಶಾಖೆಗಳ ಖಾತೆಗಳಲ್ಲಿ ಉಳಿಸಬೇಕಿರುವ ಕನಿಷ್ಠ ಮೊತ್ತದ ಪ್ರಮಾಣವನ್ನು ಕಾಯ್ದುಕೊಳ್ಳದಿದ್ದರೆ ವಿಧಿಸಲಾಗುವ ದಂಡಗಳಲ್ಲೂ ವ್ಯತ್ಯಾಸ ಇರುತ್ತದೆ.

ಬೇಸಿಕ್ ಉಳಿತಾಯ ಠೇವಣಿ ಖಾತೆಗಳು ಮತ್ತು ಪ್ರಧಾನಮಂತ್ರಿ ಜನಧನ ಯೋಜನೆ ಖಾತೆಗಳಿಗೆ ಈ ದಂಡ ನಿಬಂಧನೆಯಿಂದ ವಿನಾಯಿತಿ ನೀಡಲಾಗಿದೆ. ಈ ದಂಡವನ್ನು ಪ್ರತಿ ತಿಂಗಳೂ ವಿಧಿಸಲಾಗುತ್ತಿದ್ದು, ಇದು ಉಳಿತಾಯ ಖಾತೆಗಳಿಗೆ ರುಪಾಯಿ 25ರಿಂದ 600ರವರೆಗೆ ಮತ್ತು ಚಾಲ್ತಿ ಖಾತೆಗಳಿಗೆ ರುಪಾಯಿ 1000ದಿಂದ 10,000ದವರೆಗೆ ಇದೆ ಎಂದು ಹೇಳಲಾಗುತ್ತಿದೆ. ಕೆಲವು ಮಾಧ್ಯಮಗಳ ವರದಿ ಮತ್ತು ರಾಜ್ಯಸಭಾ ಪ್ರಶ್ನೋತ್ತರದಲ್ಲಿ ನೀಡಿದ ಹೇಳಿಕೆ ಪ್ರಕಾರ, 2018ರಿಂದ 2023ರವರೆಗೆ ಬ್ಯಾಂಕುಗಳು 35,000 ಕೋಟಿ ರು. ದಂಡವನ್ನು ಸಂಗ್ರಹಿಸಿದ್ದು, ಅದರಲ್ಲಿ ಸಾರ್ವಜನಿಕ ರಂಗದ ಬ್ಯಾಂಕುಗಳ ಪಾಲು 8,495 ಕೋಟಿಯಷ್ಟಿದೆ. ಬ್ಯಾಂಕುಗಳು ಸಾಲಮನ್ನಾ ಮತ್ತು ರೈಟ್-ಆಫ್‌ನಿಂದ ಆದ ನಷ್ಟವನ್ನು ಈ ರೀತಿ ಸಮತೋಲನಗೊಳಿಸುತ್ತವೆ ಎಂದು ವಿಪಕ್ಷದವರು ಭಾರಿ ಟೀಕೆ ಮಾಡಿದ್ದರು. ಈ ದಂಡದ ಬಗ್ಗೆ ಸಾರ್ವಜನಿಕರಿಂದ ಭಾರಿ ಆಕ್ರೋಶ ವ್ಯಕ್ತವಾಗಿತ್ತು; ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 2020ರಲ್ಲಿಯೇ ಈ ದಂಡವನ್ನು ನಿಲ್ಲಿಸಿದ್ದು, ಈಗ ಕೆನರಾ ಬ್ಯಾಂಕ್ ಈ ತಿಂಗಳ 1ನೇ ತಾರೀಖಿನಿಂದ ಅನ್ವಯವಾಗುವಂತೆ ಇದನ್ನು ನಿಲ್ಲಿಸುವುದಾಗಿ ಹೇಳಿದೆ. ಇದರಿಂದಾಗಿ ವೇತನವರ್ಗ, ಹಿರಿಯ ನಾಗರಿಕರು, ಆರ್ಥಿಕವಾಗಿ ಕೆಳಸ್ತರದಲ್ಲಿರುವವರಿಗೆ, ಮಧ್ಯಮ ವರ್ಗದವರಿಗೆ ಅನುಕೂಲವಾಗುತ್ತಿದೆ. ಮೊತ್ತ ಸಣ್ಣದಿದ್ದರೂ, ಹಣದುಬ್ಬರದ ಕಾಲದಲ್ಲಿ ಆ ಮೊತ್ತ ಎಷ್ಟೇ ಸಣ್ಣದಿರಲಿ ಅದಕ್ಕೆ ತೂಕ ಇರುತ್ತದೆ. 'ಈ ಗಲ್ಲಿಯ ಕೋಳಿ ಕೂಗಿದರೆ, ಪಕ್ಕದ ಗಲ್ಲಿಯ ಕೋಳಿಯೂ ಕೂಗುತ್ತದೆ' ಎಂಬ ಜಾಣನುಡಿಯಂತೆ, ಕೆನರಾ ಬ್ಯಾಂಕ್ ರೀತಿಯಲ್ಲಿ ಉಳಿದ ಬ್ಯಾಂಕುಗಳೂ ಈಗಿನ ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ವ್ಯವಹಾರವನ್ನು ಉಳಿಸಿ-ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸ್ವಲ್ಪ ಅನನುಕೂಲವಾದರೂ ಅನಿವಾರ್ಯವಾಗಿ ಈ ಹಾದಿಯನ್ನು ಹಿಡಿಯಲೇಬೇಕಾಗಿದೆ. ಹೀಗಾಗಿ, 'ಖಾತೆಯಲ್ಲಿ ಕನಿಷ್ಠ ಮೊತ್ತವನ್ನು ಉಳಿಸದಿದ್ದರೆ ದಂಡ ಹಾಕುವಿಕೆ'ಯ ಪರಿಪಾಠವು ಇತಿಹಾಸದ ಪುಟವನ್ನು ಸೇರುವುದು ಖಾತ್ರಿ.

ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಯಾವುದೇ ಕಾರಣಕ್ಕೆ ಮುಚ್ಚಿದರೆ, ಸಮಾಪ್ತಿಯಾದರೆ, ದಿವಾಳಿಯಾದರೆ, ವಿಫಲಗೊಂಡರೆ, ಅದರಿಂದಾಗಿ ಠೇವಣಿದಾರರು ಅತಂತ್ರಗೊಳ್ಳುವುದನ್ನು ತಪ್ಪಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ನ ಅಧೀನ ಸಂಸ್ಥೆಯಾದ 'ಠೇವಣಿ ವಿಮಾ ಮತ್ತು ಸಾಲ ಖಾತ್ರಿ ನಿಗಮವು (Deposit Insurance and Credit Guarantee Corporation- DICGC) ಠೇವಣಿದಾರರಿಗೆ ಪರಿಹಾರವನ್ನು ನೀಡುತ್ತದೆ. 1962ರಲ್ಲಿ ಆರಂಭವಾಗಿರುವ ಈ ನಿಗಮವು, ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ಗ್ರಾಹಕರು ಹೊಂದಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿನ ಠೇವಣಿಗಳಿಗೆ ವಿಮಾ ಭದ್ರತೆಯನ್ನು ಒದಗಿಸುತ್ತದೆ. ಈ ನಿಗಮದಲ್ಲಿ ಪ್ರಸ್ತುತ 140 ವಾಣಿಜ್ಯ ಬ್ಯಾಂಕುಗಳು ಮತ್ತು 1857 ಸಹಕಾರಿ ಬ್ಯಾಂಕುಗಳು ನೋಂದಾಯಿಸಿಕೊಂಡಿವೆ. ಈ ನಿಗಮ ಆರಂಭವಾದಾಗ ಗರಿಷ್ಠ ಪರಿಹಾರ 1,500 ರು. ಆಗಿತ್ತು. ಇದು 1976ರಲ್ಲಿ 20,000 ರು., 1980ರಲ್ಲಿ 30,000 ರು.ಗೆ ಏರಿತು. ಹಣದುಬ್ಬರ, ಕುಸಿಯುತ್ತಿರುವ ರುಪಾಯಿ ಮೌಲ್ಯ ಮತ್ತು ವಿದೇಶಗಳಲ್ಲಿ ಈ ನಿಟ್ಟಿನಲ್ಲಿ ನೀಡುವ ಪರಿಹಾರದ ಮೊತ್ತವನ್ನು ಪರಿಗಣಿಸಿ, ಗರಿಷ್ಠ ವಿಮಾ ಪರಿಹಾರ ಮೊತ್ತವನ್ನು 1993ರಲ್ಲಿ 1 ಲಕ್ಷ ರುಪಾಯಿಗೆ ಏರಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ವೈಫಲ್ಯ ಹೆಚ್ಚುತ್ತಿದ್ದು, ಠೇವಣಿದಾರರು ಬೀದಿಗೆ ಬೀಳುವುದನ್ನು ತಪ್ಪಿಸಲು ವಿಮಾ ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕೆಂದು ದೇಶಾದ್ಯಂತ ಆಗ್ರಹ ಹೊಮ್ಮಿತ್ತು. ಆಗ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2020-21ರ ಬಜೆಟ್‌ನಲ್ಲಿ ಠೇವಣಿ ವಿಮಾ ಪರಿಹಾರ ಮೊತ್ತವನ್ನು 1ರಿಂದ 5 ಲಕ್ಷ ರುಪಾಯಿಗೆ ಏರಿಸಿದ್ದರು. ಇದು ಒಟ್ಟೂ ಠೇವಣಿ ಖಾತೆಗಳ ಶೇ.92ರಷ್ಟು ಮತ್ತು ಒಟ್ಟು ಠೇವಣಿಯ ಶೇ.28ರಷ್ಟು ಭಾಗಕ್ಕೆ ವಿಮಾ ರಕ್ಷಣೆ ನೀಡುತ್ತಿದೆ.

ಹಣದುಬ್ಬರ ಮತ್ತು ಬ್ಯಾಂಕುಗಳ ವೈಫಲ್ಯ ನಿರಂತರವಾಗಿ ಹೆಚ್ಚುತ್ತಿರುವುದನ್ನು ನೋಡಿ ಬ್ಯಾಂಕುಗಳ ಗ್ರಾಹಕರು ಠೇವಣಿ ವಿಮಾ ಪರಿಹಾರದ ಮೊತ್ತವನ್ನು ಹೆಚ್ಚಿಸಬೇಕೆಂದು ಸರಕಾರವನ್ನು ಆಗ್ರಹಿಸುತ್ತಿದ್ದಾರೆ. ಹೀಗಾಗಿ, ಸರಕಾರವು ಪ್ರಸ್ತುತ ಇರುವ 5 ಲಕ್ಷ ರು. ಪರಿಹಾರದ ಗರಿಷ್ಠ ಮಿತಿಯನ್ನು ಇನ್ನು ಆರು ತಿಂಗಳಿನಲ್ಲಿ ಹೆಚ್ಚಿಸುವ ಚಿಂತನೆಯಲ್ಲಿದೆ ಎಂಬ ಹಣಕಾಸು ಸಚಿವಾಲಯದ ಮಾಹಿತಿಯನ್ನು ಉಲ್ಲೇಖಿಸಿ ಹಣಕಾಸು ಮಾಧ್ಯಮಗಳು ವರದಿ ಮಾಡಿವೆ. ಈ ವಿಷಯದಲ್ಲಿ ಹಣಕಾಸು ಸಚಿವಾಲಯವು ಅಂತಿಮ ನಿರ್ಣಯ ಕೈಗೊಳ್ಳುವುದು ಇನ್ನೂ ಬಾಕಿಯಿದ್ದು, ಐದು ವರ್ಷಗಳ ಹಿಂದೆ ನಿಗದಿಯಾಗಿದ್ದ 5 ಲಕ್ಷ ರು. ಗರಿಷ್ಠ ಮಿತಿಯು 10 ಲಕ್ಷ ರು. ವರೆಗೆ ಏರುವ ಸಾಧ್ಯತೆ ದಟ್ಟವಾಗಿದೆ. ಈ ನಿಟ್ಟಿನಲ್ಲಿ ಸಚಿವಾಲಯವು ಕಾರ್ಯೋನ್ಮುಖವಾಗಿದ್ದು, ಇದಕ್ಕೆಷ್ಟು ಠೇವಣಿದಾರರನ್ನು ಒಳಪಡಿಸಬಹುದು, ಒಳಪಡುವ ಒಟ್ಟು ಠೇವಣಿ, ಎಷ್ಟು ಠೇವಣಿಗೆ ಸರಕಾರ ಗ್ಯಾರಂಟಿ ಕೊಡಬಹುದು ಮತ್ತು ಸದ್ಯ ವಿಮಾ ರಕ್ಷಣೆಗೆ ಒಳಪಟ್ಟ ಠೇವಣಿ ಮುಂತಾದ ಮಾಹಿತಿಗಳನ್ನು ಅದು ಕಲೆಹಾಕುತ್ತಿದೆ.

- **ಪರಿಹಾರದ ಲೆಕ್ಕಾಚಾರ ಹೇಗೆ?:** ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯು ದಿವಾಳಿಯಾದಾಗ, ವಿಫಲಗೊಂಡಾಗ, ಸಮಾಪ್ತಿಯಾದಾಗ ಅಥವಾ ಲಿಕ್ವಿಡೇಟ್ ಆದಾಗ, ಠೇವಣಿ ವಿಮಾ ನಿಗಮವು ಠೇವಣಿದಾರರಿಗೆ, ಅವರು ಬ್ಯಾಂಕ್‌ನಲ್ಲಿ ಇರಿಸಿದ ಠೇವಣಿ (ಬಡ್ಡಿಯೂ ಸೇರಿ) ಅಥವಾ ಗರಿಷ್ಠ ಐದು ಲಕ್ಷ ರುಪಾಯಿಗಳ ಪರಿಹಾರವನ್ನು, ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆ ಸ್ಥಗಿತವಾದ ದಿನ ಖಾತೆ ಯಾರ ಹೆಸರಿನಲ್ಲಿ ಇರುತ್ತದೆಯೋ ಅವರಿಗೆ ನೀಡಲಾಗುತ್ತದೆ. ಈ ಪರಿಹಾರದ ಮೊತ್ತವು ಗ್ರಾಹಕನು ಒಂದು ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಹೊಂದಿರುವ ಎಲ್ಲಾ ರೀತಿಯ (ಉಳಿತಾಯ, ಚಾಲ್ತಿ, ರೆಕರಿಂಗ್ ಮತ್ತು ನಿಶ್ಚಿತ ಠೇವಣಿ) ಖಾತೆಗಳಿಗೆ ಅನ್ವಯವಾಗುತ್ತದೆ. ಈ ಪರಿಹಾರವನ್ನು ನೀಡುವಾಗ ಒಂದು ಬ್ಯಾಂಕ್ ಹೆಸರಿನಲ್ಲಿ ಲೆಕ್ಕ ಹಾಕಲಾಗುತ್ತದೆಯೇ ವಿನಾ, ಶಾಖೆಗಳಲ್ಲಿ ಇರುವ ಠೇವಣಿಗಳನ್ನು ಪ್ರತ್ಯೇಕವಾಗಿ ಪರಿಗಣಿಸುವುದಿಲ್ಲ. ಉದಾಹರಣೆಗೆ, ಗ್ರಾಹಕನೊಬ್ಬನು ಕೆನರಾ ಬ್ಯಾಂಕ್‌ನ ನಾಲ್ಕು ಶಾಖೆಗಳಲ್ಲಿ ಠೇವಣಿ ಇಟ್ಟಿದ್ದರೆ, ವಿಮಾ ಪರಿಹಾರ ನೀಡುವಾಗ ಠೇವಣಿ ವಿಮಾ ನಿಗಮವು, ನಾಲ್ಕೂ ಶಾಖೆಗಳಲ್ಲಿರುವ ಠೇವಣಿಗಳನ್ನು ಪ್ರತ್ಯೇಕವಾಗಿ ಪರಿಗಣಿಸದೇ ಎಲ್ಲವನ್ನೂ ಒಟ್ಟಿಗೆ ಸೇರಿಸಿ ಲೆಕ್ಕ ಹಾಕಿ ಪರಿಹಾರವನ್ನು ನೀಡುತ್ತದೆ. ಗ್ರಾಹಕನೊಬ್ಬ ಒಂದು ಶಾಖೆಯಲ್ಲಿ ನಿಶ್ಚಿತ ಠೇವಣಿಯಾಗಿ 4 ಲಕ್ಷ ರು., ರೆಕರಿಂಗ್ ಡಿಪಾಸಿಟ್ ಆಗಿ 25,000 ರು., ಉಳಿತಾಯ ಖಾತೆಯಲ್ಲಿ 75,000 ರು., ಚಾಲ್ತಿ ಖಾತೆಯಲ್ಲಿ 50,000 ರು. ಮತ್ತು ಸಂಚಿತ ಖಾತೆಯಲ್ಲಿ 25,000 ರು. ಇರಿಸಿದ್ದು, ಅಕಸ್ಮಾತ್ತಾಗಿ ಬ್ಯಾಂಕ್ ಸ್ಥಗಿತಗೊಂಡರೆ/ದಿವಾಳಿಯಾದರೆ, ಆ ಗ್ರಾಹಕನಿಗೆ ಆತನ ಒಟ್ಟೂ 5,75,000 ರು. ಠೇವಣಿಗೆ ಬದಲಾಗಿ 5,00,000 ರು. ಪರಿಹಾರ ದೊರಕುತ್ತದೆ. ಇದೇ ಬ್ಯಾಂಕಿನ ಇನ್ನೊಂದು ಶಾಖೆಯಲ್ಲಿ ಬೇರೆ ಡಿಪಾಸಿಟ್ ಇದ್ದರೆ, ಈಗಾಗಲೇ ಈ ಬ್ಯಾಂಕಿನಲ್ಲಿ ಈ ಗ್ರಾಹಕನ ಕೋಟಾ ಮುಗಿದಿದ್ದು ಬೇರೆ ಪರಿಹಾರ ದೊರಕುವುದಿಲ್ಲ. ಡಿಪಾಸಿಟರ್ ಅಪ್ರಾಪ್ತನ ಪೋಷಕರಾಗಿದ್ದರೆ, ಆ ಗ್ರಾಹಕನಿಗೆ ಐದು ಲಕ್ಷದವರೆಗೆ ಪರಿಹಾರ ದೊರಕುತ್ತದೆ. ಹಾಗೆಯೇ ಠೇವಣಿ ಇರಿಸಿದ ಪ್ರತಿ ಬ್ಯಾಂಕ್‌ನಲ್ಲೂ ಐದು ಲಕ್ಷ ರುಪಾಯಿವರೆಗೆ ಪರಿಹಾರ ಸಿಗುತ್ತದೆ. ಈ 5 ಲಕ್ಷ ರುಪಾಯಿಯ ಗರಿಷ್ಠ ಮಿತಿಯು ಸದ್ಯದಲ್ಲೇ ಗಮನಾರ್ಹವಾಗಿ ಏರುವ ಸೂಚನೆಯು ಹಣಕಾಸು ಸಚಿವಾಲಯದಿಂದ ಬಂದಿದ್ದು, ಬ್ಯಾಂಕ್ ಠೇವಣಿದಾರರು ಸ್ವಲ್ಪ ನೆಮ್ಮದಿಯನ್ನು ಎದುರುನೋಡುತ್ತಿದ್ದಾರೆ.

ಈ ಹೊಸ ವ್ಯವಸ್ಥೆ ಜಾರಿಗೆ ಬಂದರೆ, ಠೇವಣಿದಾರರು ತಮ್ಮ ಠೇವಣಿಯನ್ನು ವಿಭಜಿಸಿ, ಬೇರೆ ಬೇರೆ ಬ್ಯಾಂಕುಗಳಲ್ಲಿ ಇರಿಸುವ ತಂತ್ರಗಾರಿಕೆಯು ಸ್ವಲ್ಪ ನಿಯಂತ್ರಣಕ್ಕೆ ಬರಬಹುದು, ಬ್ಯಾಂಕ್ ಶಾಖೆಗಳಲ್ಲಿ ಠೇವಣಿ ಸ್ವಲ್ಪ ಹೆಚ್ಚಬಹುದು. ಯಾವುದೇ ಒಂದು ಬ್ಯಾಂಕಿನಲ್ಲಿ (ಎಲ್ಲ ಶಾಖೆಗಳು ಸೇರಿ) ತಮ್ಮ ಠೇವಣಿಯು 5 ಲಕ್ಷ ರುಪಾಯಿಯನ್ನು ಮೀರದಂತೆ ಎಚ್ಚರ ವಹಿಸುವವರು, ಈ ಮೊತ್ತವನ್ನು ಸ್ವಲ್ಪ ಏರಿಸಬಹುದು.

ಒಟ್ಟಾರೆ ಹೇಳುವುದಾದರೆ, ಬ್ಯಾಂಕಿಂಗ್ ಉದ್ಯಮದ ಈ ಎರಡು ಬೆಳವಣಿಗೆಗಳಿಂದಾಗಿ ಗ್ರಾಹಕರು ಕೊಂಚ ನಿರಾಳರಾಗುವಂತಾಗಿದೆ. 'ಗ್ರಾಹಕರ ಠೇವಣಿ ಮೇಲಿನ ಬಡ್ಡಿ ಇಳಿತ' ಮತ್ತು 'ಸಾಲದ ಮೇಲಿನ ಬಡ್ಡಿ ಏರಿಕೆ' ಎಂಬ ಮಾತುಗಳನ್ನಷ್ಟೇ ಬ್ಯಾಂಕುಗಳಿಂದ ಕೇಳುತ್ತಿದ್ದ ಗ್ರಾಹಕರಿಗೆ ಈ ಎರಡು ಬೆಳವಣಿಗೆಗಳು ಅಚ್ಚರಿ ಮೂಡಿಸಿವೆ. ಬ್ಯಾಂಕುಗಳ ವೈಫಲ್ಯದ ಪ್ರಮಾಣ ಇತ್ತೀಚೆಗೆ ಹೆಚ್ಚಿರುವುದು ಠೇವಣಿದಾರರಲ್ಲಿ ಚಿಂತೆಗೆ ಕಾರಣವಾಗಿತ್ತು. ಠೇವಣಿದಾರರಲ್ಲಿ ಹಿರಿಯ ನಾಗರಿಕರು ಮತ್ತು ನಿವೃತ್ತರು ಹೆಚ್ಚಿನ ಪ್ರಮಾಣದಲ್ಲಿದ್ದು, ತಾವು ಜತನದಿಂದ ಕೂಡಿಟ್ಟ ಹಣವು ತಮ್ಮ ಕೊನೆಗಾಲದಲ್ಲಿ ತಮಗೇ ಸಿಗುವಂತಾಗಲಿ ಎಂದು ಅವರು ಆಶಿಸುತ್ತಿದ್ದರು. ಸರಕಾರದ ಈ ಕ್ರಮದಿಂದಾಗಿ ಅವರ ಆತಂಕ ಪೂರ್ಣವಾಗಿ ದೂರವಾಗದಿದ್ದರೂ, ಅವರ ನೆಮ್ಮದಿಯನ್ನು ಅದು ಸ್ವಲ್ಪ ಹೆಚ್ಚಿಸಲಿದೆ ಎಂದು ತೋರುತ್ತದೆ.

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 30

ಸಮಾಚಾರ ಸಣ್ಣದಲ್ಲ

ಜೂ.15ರ ನೀಟ್ ಪಿಜಿ ಪರೀಕ್ಷೆ ಮುಂದೂಡಿಕೆ

ದೆಹಲಿ: ರಾಷ್ಟ್ರೀಯ ಅರ್ಹತಾ-ಪ್ರವೇಶ ಪರೀಕ್ಷೆ (ನೀಟ್) ಪಿಜಿ-2025 ಒಂದೇ ಹಂತದಲ್ಲಿ ನಡೆಸುವಂತೆ ರಾಷ್ಟ್ರೀಯ ಪರೀಕ್ಷಾ ಮಂಡಳಿ(ಎನ್‌ಟಿಎ)ಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ ಹಿನ್ನೆಲೆ ಪರೀಕ್ಷೆಯ ದಿನಾಂಕ ಮುಂದೂಡಲಾಗಿದೆ. ಜೂ.15 ರಂದು ಪರೀಕ್ಷೆ ನಡೆಯಬೇಕಿತ್ತು. ಪರಿಷ್ಕೃತ ದಿನಾಂಕ ಶೀಘ್ರ ತಿಳಿಸಲಾಗುವುದು. ಪರೀಕ್ಷೆ ಸುಗಮ ವಾಗಿ ನಡೆಸಲು ಅವಕಾಶವಾಗುವಂತೆ ಹೆಚ್ಚಿನ ಪರೀಕ್ಷಾ ಕೇಂದ್ರಗಳು ಮತ್ತು ಅಗತ್ಯ ಮೂಲಸೌ ಕರ್ಯ ವ್ಯವಸ್ಥೆ ಮಾಡುವುದಾಗಿ ಎನ್‌ಟಿಎ ಮಂಗಳ ವಾರ ತಿಳಿಸಿದೆ. ಈ ಮೊದಲು ಜೂ.15ರಂದು 2 ಪಾಳಿಗಳಲ್ಲಿ ಪರೀಕ್ಷೆ ನಡೆಸಲುವ ಮಂಡಳಿ ನಿರ್ಧರಿ ಸಿತ್ತು. ಆದರೆ, ನ್ಯಾಯಾಲಯ ಆ ಪ್ರಸ್ತಾವವನ್ನು ತಿರಸ್ಕರಿಸಿದೆ.

ಬಿಆರ್‌ಎಸ್ ಪಕ್ಷದಿಂದ ಕವಿತಾ ವಜಾ ಸಂಭವ

ಹೈದರಾಬಾದ್: ತೆಲಂಗಾಣದಲ್ಲಿನ ಪ್ರತಿಪಕ್ಷ ಕೆ. ಚಂದ್ರಶೇಖರ ರಾವ್ ನೇತೃತ್ವದ 'ಭಾರತ ರಾಷ್ಟ್ರ ಸಮಿತಿ' (ಬಿಆರ್‌ಎಸ್) ಪಕ್ಷದಲ್ಲಿ ಭಿನ್ನಮತ ತಲೆದೋರಿದೆ. ಪಕ್ಷದ ಸಂಸ್ಥಾಪಕ ಅಧ್ಯಕ್ಷ ಕೆ.ಸಿ.ಆರ್ ಅವರ ಪುತ್ರಿ ಕೆ.ಕವಿತಾ ಹಾಗೂ ಪುತ್ರ ಕೆ.ಟಿ.ರಾಮರಾವ್ ನಡುವೆಯೇ ಭಾರೀ ಸಂಘರ್ಷವೇರ್ಪಟ್ಟಿದೆ.

ಪುತ್ರಿ ಕವಿತಾ ನಡವಳಿಕೆಯಿಂದ ಬೇಸರಗೊಂಡಿರುವ ಕೆಸಿಆರ್, ಕವಿತಾರನ್ನು ಪಕ್ಷದಿಂದಲೇ ವಜಾ ಮಾಡುವ ಸಂಭವವಿದೆ ಎಂದು ಮೂಲಗಳು ಹೇಳಿವೆ. ಬಿಆರ್‌ಎಸ್ ಪಕ್ಷವನ್ನು ಬಿಜೆಪಿಯಲ್ಲಿ ಲೀನಗೊಳಿಸಲು ಸೋದರ ರಾಮರಾವ್ ಸಂಚು ನಡೆಸಿದ್ದಾರೆಂದು ಕವಿತಾ ಇತ್ತೀಚೆಗೆ ಆರೋಪಿಸಿ ದ್ದರು. ಇದರಿಂದ ಸಿಟ್ಟಿಗೆದ್ದಿರುವ ಕೆಸಿಆರ್, ಪುತ್ರಿ ಕವಿತಾರ ಪ್ರಮಾದಗಳನ್ನು ಪಟ್ಟಿ ಮಾಡುತ್ತಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಭೂಕಂಪ: ಪಾಕ್‌ನ 216 ಕೈದಿ ಪರಾರಿ

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಸೋಮವಾರ ರಿಕ್ಟರ್ ಮಾಪಕದಲ್ಲಿ 3.2 ಮತ್ತು 3.6ರಷ್ಟು ತೀವ್ರತೆಯ 3 ಸರಣಿ ಭೂಕಂಪ ಸಂಭವಿಸಿದ್ದು, ಭೂಕಂಪದ ಕೇಂದ್ರಬಿಂದು ಲಂಧಿ ಫಾಲ್ಟ್ ಪ್ರದೇಶದಲ್ಲಿತ್ತು. ಭೂಕಂಪದಿಂದಾಗಿ ಜೈಲಿನ ಗೋಡೆಗಳು ಭಾಗಶಃ ಕುಸಿದು ಬಿದ್ದವು. ಪರಿಸ್ಥಿತಿಯ ಲಾಭ ಪಡೆದ 216 ಕೈದಿಗಳು ಕರಾಚಿಯ ಜಿಲ್ಲಾ ಕಾರಾಗೃಹದಿಂದ ಪರಾರಿಯಾಗಿದ್ದಾರೆ. ಜೈಲಿನಿಂದ ಕಾಲ್ಕೀಳುವ ವೇಳೆ ತಡೆಯಲೆತ್ನಿಸಿದ ಕಾವಲು ಸಿಬ್ಬಂದಿಗಳ ಬಳಿಕ ಇದ್ದ ಶಸ್ತ್ರಾಸ್ತ್ರಗಳನ್ನು ಕೈದಿಗಳು ಕಸಿದುಕೊಂಡಿದ್ದಾರೆ. ಈ ವೇಳೆ ಗುಂಡಿನ ಚಕಮಕಿ ನಡೆದು ಒಬ್ಬ ಕೈದಿ ಸಾವಿಗೀಡಾದ. ಮೂವರು ಕಾವಲು ಸಿಬ್ಬಂದಿಗಳೂ ಗಾಯಗೊಂಡರು ಎಂದು ವರದಿಯಾಗಿದೆ. ಸರಣಿ ಭೂಕಂಪದಿಂದ ಕೈದಿಗಳು ಭಯಗೊಂಡಿದ್ದರು. ಜೈಲಿನೊಳಗೆ ತಳ್ಳಾಟ ಶುರುವಾಗಿದೆ. ಆ ಸಂದರ್ಭ ಕೆಲವರು ತಪ್ಪಿಸಿಕೊಂಡಿದ್ದಾರೆ ಎಂದು ಕಾನೂನು ಸಚಿವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

5000 ಬಾಂಗ್ಲಾ ದೇಶಿ ನುಸುಳುಕೋರರಿಗೆ ತಡೆ

ದೆಹಲಿ: ಪಶ್ಚಿಮ ಬಂಗಾಳ, ಅಸ್ಸಾಂ, ತ್ರಿಪುರ ಸೇರಿದಂತೆ ದೇಶದ ಪೂರ್ವ ಮತ್ತು ಈಶಾನ್ಯ ಭಾಗದ ಗಡಿಗಳಲ್ಲಿ ಭಾರತದೊಳಕ್ಕೆ ನುಸುಳಲು ಯತ್ನಿಸಿದ ನೆರೆಯ ಬಾಂಗ್ಲಾದೇಶದ 5,000ಕ್ಕೂ ಹೆಚ್ಚು ಜನರನ್ನು ಕಳೆದ 3 ವರ್ಷಗಳಲ್ಲಿ ಬಂಧಿಸಿ ಹಿಂದಕ್ಕೆ ಕಳುಹಿಸಲಾಗಿದೆ ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮಂಗಳವಾರ ಹೇಳಿದೆ. ಅಕ್ರಮವಾಗಿ ಭಾರತಕ್ಕೆ ಪ್ರವೇಶಿಸಲು ಯತ್ನಿಸಿದ ಮತ್ತು ಬಾಂಗ್ಲಾದೇಶಕ್ಕೆ ವಾಪಸ್ ಕಳುಹಿಸಿಕೊಡಲಾದ ಜನರ ವಾರ್ಷಿಕ ಅಂಕಿ ಅಂಶಗಳನ್ನು ಬಿಎಸ್‌ಎಫ ಅಧಿಕಾರಿಗಳು ಬಹಿರಂಗ ಪಡಿಸಿದ್ದಾರೆ. 2023ರಲ್ಲಿ 2,406 ಅಕ್ರಮ ಬಾಂಗ್ಲಾ ವಲಸಿಗರನ್ನು ವಾಪಸ್ ಕಳುಹಿಸಲಾಗಿದೆ. 2024ರಲ್ಲಿ 2,425 ಮತ್ತು 2025ರ ಮೇ 31ರವರೆಗೆ 557 ನುಸುಳುಕೋರರನ್ನು ಬಾಂಗ್ಲಾಕ್ಕೆ ವಾಪಸ ದೂಡಲಾಗಿದೆ.

386 ಶಾಲೆಗೆ ಬೀಗ

ಇಟಾನಗರ: ಭಾರತದ ಪೂರ್ವದ ತುದಿಯ ರಾಜ್ಯ ಅರುಣಾಚಲ ಪ್ರದೇಶದಲ್ಲಿ ಸರಕಾರಿ ಶಾಲೆಗಳು ಅಳಿವಿನಂಚಿನಲ್ಲಿವೆ. ಸರಕಾರದ ಶಾಲೆಗಳಿಗೆ ಮಕ್ಕಳು ಸೇರುವುದೇ ಕಡಿಮೆಯಾಗಿರುವುದೇ ಇದಕ್ಕೆ ಕಾರಣವಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷ ಆರಂಭಗೊಂಡಿರುವಾಗಲೇ ರಾಜ್ಯ ಶಿಕ್ಷಣ ಇಲಾಖೆ ಆಘಾತಕಾರಿ ಸುದ್ದಿ ಪ್ರಕಟಿಸಿದೆ. ಹೊಸದಾಗಿ ಒಂದು ಮಗುವೂ ಸೇರ್ಪಡೆಯಾಗದ ಹಿನ್ನೆಲೆಯಲ್ಲಿ ರಾಜ್ಯ ಶಿಕ್ಷಣ ಇಲಾಖೆಯ ಅಧೀನದ 386 ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಗುತ್ತಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

{ ಎರೋಲ್ ಮಸ್ಕ್ } ಎಲಾನ್ ಮಸ್ಕ್ ತಂದೆ

ಭಗವಾನ್ ಪರಶಿವನ ತತ್ವಗಳನ್ನು ಪಾಲಿಸಿದರೆ ಎಲ್ಲವೂ ಸರಿ ಇರುತ್ತದೆ ಎಂಬುದು ನನ್ನ ನಂಬಿಕೆ. ಸನಾತನ ಧರ್ಮದ ಬಗ್ಗೆ ಹೆಚ್ಚಿನ ಅರಿವಿಲ್ಲ. ಆದರೆ, ಸನಾತನ ಧರ್ಮವನ್ನು ಅನುಸರಿಸಿದರೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಗುತ್ತದೆ ಎಂದು ಮಾತ್ರ ಹೇಳಬಲ್ಲೆ. ಪರಶಿವನ ಆರಾಧನೆಯಿಂದ ಜಾಗತಿಕ ಮಟ್ಟದ ಸಮಸ್ಯೆಗಳೆಲ್ಲಾ ಖಂಡಿತಾ ನಿವಾರಣೆ ಆಗುತ್ತವೆ.



ಮಂಗಳವಾರದಿಂದ 3 ದಿನಗಳ ಕಾರ್ಯಕ್ರಮ | ಜೂ.5 ಬೆಳಗ್ಗೆ 11.25ರಿಂದ 11.40 ಮುಹೂರ್ತ | ಮೊದಲ ಮಹಡಿಯಲ್ಲಿ ಶ್ರೀರಾಮ ದರ್ಬಾರ್ | 8 ದೇವಾಲಯಗಳ ರಚನೆ | ಗೋಪುರದ ತುದಿಗೆ ಸ್ವರ್ಣ ಕಳಸದ ಜೋಡಣೆ

ರಾಮ ಮಂದಿರ 2ನೇ ಹಂತ ಪ್ರಾಣ ಪ್ರತಿಷ್ಠೆ

ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದಲ್ಲಿ ಮಂಗಳವಾರ 2ನೇ ಹಂತದ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮ ಶುರುವಾಗಿದೆ. ಮಂದಿರದ ಗೋಪುರದ ತುತ್ತ ತುದಿಯಲ್ಲಿ ಬಂಗಾರದ ಕಳಶವನ್ನೂ ಜೋಡಿಸಲಾಗುತ್ತಿದೆ.

ಜ್ಯೇಷ್ಠ ಶುಕ್ಲ ಅಷ್ಟಮಿಯಿಂದ ಪ್ರಾರಂಭವಾಗಿರುವ 3 ದಿನಗಳ ಕಾರ್ಯಕ್ರಮದಲ್ಲಿ ಜೂ.5ರ ದಶಮಿ ದಿನ ಪೂಜೆ, ಭೋಗ ಮತ್ತು ಆರತಿಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಜೂ.5ರಂದು ಬೆಳಗ್ಗೆ 11.25ರಿಂದ 11.40ರ ನಡುವಿನ ಅಭಿಜಿತ್ ಮುಹೂರ್ತದಲ್ಲಿ ಮೊದಲ ಮಹಡಿಯ ದರ್ಬಾರ್ ಹಾಲ್‌ನಲ್ಲಿ ಶ್ರೀ ರಾಜಾರಾಮನ ಪ್ರಾಣ ಪ್ರತಿಷ್ಠೆ ಈ ಅಭಿಜಿತ್ ಮುಹೂರ್ತದಲ್ಲಿ ನಡೆಯುತ್ತದೆ. ರಾಮ ಮಂದಿರದ ಮೊದಲ ಮಹಡಿಯಲ್ಲಿ ರಾಜ ಶ್ರೀರಾಮ ಚಂದ್ರರ ಆಸ್ಥಾನಕ್ಕೆ ಸ್ಥಳಾವಕಾಶ ಮಾಡಿಕೊಡಲಾಗಿದ್ದು, ಸಿಂಹಾಸನದ ಮೇಲೆ ಮಹಾರಾಜರ ಪ್ರಾಣ ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಆಸ್ಥಾನದಲ್ಲಿ, ಲಕ್ಷ್ಮಣ, ಭರತ, ಶತ್ರುಘ್ನ, ತಾಯಿ ಜಾನಕಿ ಮತ್ತು ಹನುಮಂತ ದೇವರ ಮೂರ್ತಿಗಳ ಪ್ರತಿಷ್ಠಾಪನೆ ಆಗಲಿದೆ.

ಮೂರು ದಿನಗಳ ಮಹತ್ವದ ಪೂಜಾ ವಿಧಿವಿಧಾನಗಳ ಹಿನ್ನೆಲೆಯಲ್ಲಿ ಶ್ರೀರಾಮ ಮಂದಿರವನ್ನು ಆಕರ್ಷಕ ವಿದ್ಯುತ್ ದೀಪಗಳಿಂದ ಹಾಗೂ ಬಗೆಬಗೆಯ ಹೂವುಗಳಿಂದ ಅಲಂಕರಿಸಲಾಗಿದೆ. ಶ್ರೀರಾಮ ಮಂದಿರವನ್ನು ಸಂಪರ್ಕಿಸುವ ರಸ್ತೆಗಳನ್ನೂ ಹೂವುಗಳು ಮತ್ತು ಬಣ್ಣಬಣ್ಣದ ತೋರಣಗಳಿಂದ ಅಲಂಕರಿಸಲಾಗಿದೆ. ಅಯೋಧ್ಯೆಗೆ ಮತ್ತೊಮ್ಮೆ ಲಕ್ಷಾಂತರ ಭಕ್ತರು ಧಾವಿಸಿದ್ದು, ಶ್ರೀರಾಮಚಂದ್ರನ ದರ್ಭಾರ್ ಹಾಲ್ ಮತ್ತು 8 ನೂತನ ದೇಗುಲಗಳ ಪ್ರಾಣಪ್ರತಿಷ್ಠಾಪನೆ ಕಾರ್ಯವನ್ನು ಕಣ್ತುಂಬಿಕೊಳ್ಳಲಿದ್ದಾರೆ.

ಶ್ರೀರಾಮ ಮಂದಿರದ ಮೊದಲ ಮಹಡಿಯಲ್ಲಿ ಶ್ರೀರಾಮಚಂದ್ರ ಮಹಾರಾಜರ ದರ್ಭಾರ್ ಸಭಾಂಗಣ.

ಅಯೋಧ್ಯೆಯ ಶ್ರೀರಾಮ ಮಂದಿರದ ಗೋಪುರದ ತುತ್ತ ತುದಿಯಲ್ಲಿ ಬಂಗಾರದ ಕಳಶವನ್ನೂ ಜೋಡಿಸಲಾಗುತ್ತಿದೆ.

ಪಂಡಿತ್ ಜೈಪ್ರಕಾಶ್ ತಿವಾರಿ ಅವರ ನೇತೃತ್ವ

ಶ್ರೀರಾಮ ಮಂದಿರದ ಮೊದಲ ಮಹಡಿಯ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಇಲ್ಲಿ ಶ್ರೀರಾಮ ಚಂದ್ರ ಮಹಾರಾಜರ ದರ್ಭಾರ್ ಹಾಲ್ ವಿನ್ಯಾಸ ಮಾಡಲಾ ಗಿದೆ. ಹೊಸದಾಗಿ ನಿರ್ಮಿಸಲಾಗಿರುವ 8 ಕಿರು ದೇವಾಲ ಯಗಳಲ್ಲಿ ಶ್ರೀ ಗಣೇಶ ಸೇರಿದಂತೆ 8 ದೇವರುಗಳ ವಿಗ್ರ ಹಗಳ ಪ್ರಾಣ ಪ್ರತಿಷ್ಠೆ ಏಕಕಾಲದಲ್ಲಿ ನಡೆಯಲಿದೆ. ಚಂದೌಲಿಯ ಪಂಡಿತ್ ಜೈಪ್ರಕಾಶ್ ತಿವಾರಿ ಅವರ ನೇತೃತ್ವದಲ್ಲಿ ನಡೆಯಲಿರುವ 2ನೇ ಹಂತದ ಈ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮವನ್ನು 101 ವೈದಿಕ ಆಚಾರ್ಯರ ದೊಡ್ಡ ತಂಡ ಮೂರು ದಿನಗಳ ಕಾಲ ನಡೆಸಿ ಕೊಡಲಿದೆ. ಈ ಮೊದಲು, 2024ರ ಜ.22ರಂದು ನೆಲ ಅಂತಸ್ತಿನ ವಿಶಾಲ ಸ್ಥಳದಲ್ಲಿ ಶ್ರೀರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ನಡೆಸಿಕೊಟ್ಟಿದ್ದಾರೆ.

ಸಾರ್ವಜನಿಕರಿಗೆ 6ರಿಂದ ದರ್ಶನ

2ನೇ ಹಂತದ ಪ್ರಾಣಪ್ರತಿಷ್ಠಾಪನಾ ಕಾರ್ಯದ ನಂತರ ಜೂ.6ರಿಂದ ಸಾರ್ವಜನಿಕರಿಗೆ ಶ್ರೀರಾಮಮಂದಿರ ಮತ್ತು ದರ್ಭಾರ್ ಹಾಲ್ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗುವುದು ಎಂದು ಶ್ರೀರಾಮ ಮಂದಿರ ನಿರ್ಮಾಣ ಸಮಿತಿ ಮುಖ್ಯಸ್ಥ ನೃಪೇಂದ್ರ ಮಿಶ್ರಾ ಅವರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ಸ್ಥಳದಲ್ಲಿ 2020ರಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಕಾಮಗಾರಿ ಆರಂಭಗೊಂಡಿತು. ಈಗ ಸ್ವರ್ಣ ಕಳಸ ಪ್ರತಿಷ್ಠಾಪನೆಯೊಂದಿಗೆ ಅಂತಿಮ ಹಂತಕ್ಕೆ ತಲುಪಿದೆ. 2024ರ ಜನವರಿಯಲ್ಲಿ ಮೊದಲ ಪ್ರಾಣಪ್ರತಿಷ್ಠೆ ನಡೆದಿದ್ದರೆ, 2ನೇ ಹಂತದ ಕಾರ್ಯಕ್ರಮ ಈಗ ನಡೆಯುತ್ತಿದೆ.

8 ದೇವರುಗಳ ಕಿರು ಮಂದಿರ

ಶ್ರೀರಾಮಚಂದ್ರ ಮಹಾರಾಜರ ದರ್ಬಾರ್ ಹಾಲ್ ಅಲ್ಲದೇ, ಶ್ರೀರಾಮ ಮಂದಿರದ ಮೊದಲ ಮಹಡಿಯಲ್ಲಿ 8 ದೇವಾಲಯಗಳನ್ನೂ ರಚಿಸಲಾಗಿದೆ. ಪಾರ್‌ಕೋಟಾ, ಶಿವಲಿಂಗ, ಗಣಪತಿ, ಹನುಮಾನ್, ಸೂರ್ಯ, ಭಗವತಿ ಮತ್ತು ಅನ್ನಪೂರ್ಣ ದೇಗುಲಗಳು ಮತ್ತು ಶೇಷಾವತಾರ ವಿಗ್ರಹಗಳ ಪ್ರಾಣ ಪ್ರತಿಷ್ಠಾಪನೆ ಈ ನೂತನ ದೇವಾಲಯಗಳಲ್ಲಿ ಜೂ.5ರವರೆಗಿನ ಕಾರ್ಯಕ್ರಮಗಳಲ್ಲಿ ನಡೆಯಲಿದೆ.

ವಿವಿಧತೆಯಲ್ಲಿ ಏಕತೆ ರಾಷ್ಟ್ರಭಾಷೆ: ಕನಿಮೋಳಿ

ಮ್ಯಾಡ್ರಿಡ್: 'ವಿವಿಧತೆ ಮತ್ತು ಏಕತೆ'ಯೇ ಭಾರತದ ರಾಷ್ಟ್ರಭಾಷೆ ಎಂದು ಸರ್ವಪಕ್ಷ ನಿಯೋಗದ ಮುಂದಾಳುವಾಗಿರುವ ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷದ ಸಂಸದೆ ಕನಿಮೋಳಿ ಸ್ಪೇನ್‌ನ ಭೇಟಿ ವೇಳೆ ಜಾಣ್ಮೆಯ ಉತ್ತರ ನೀಡುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪಾಕಿಸ್ತಾನದ ಭಯೋತ್ಪಾದನೆ ಚಟುವಟಿಕೆಗಳು, ಪಹಲ್ಗಾಮ್ ದಾಳಿ, ಅದಕ್ಕೆ ಪ್ರತಿಯಾಗಿ ಭಾರತ ನಡೆಸಿದ 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ಬಗ್ಗೆ ವಿವಿಧ ದೇಶಗಳಿಗೆ ತಿಳಿಸಿಕೊಡಲು ತೆರಳಿರುವ ಸರ್ವಪಕ್ಷಗಳ ನಿಯೋಗವೊಂದರ ನೇತೃತ್ವ ವಹಿಸಿರುವ ಕನಿಮೋಳಿ ಸದ್ಯ ಸ್ಪೇನ್ ದೇಶದಲ್ಲಿದ್ದಾರೆ. ಅಲ್ಲಿ ಸುದ್ದಿಗಾರರು ಕೇಳಿದ 'ಭಾರತದ ರಾಷ್ಟ್ರಭಾಷೆ ಯಾವುದು?' ಎಂಬ ವಿವಾದ ಉಂಟು ಮಾಡಬಹುದಾಗಿದ್ದ ಪ್ರಶ್ನೆಗೆ ಅಷ್ಟೇ ಚಾಣಾಕ್ಷತೆಯಿಂದ ಉತ್ತರಿಸಿದ್ದಾರೆ. 'ವಿವಿಧತೆಯಲ್ಲಿ ಏಕತೆಯೇ ನಮ್ಮ ರಾಷ್ಟ್ರಭಾಷೆ. ಅದರ ಮೂಲಕವೇ ನಮ್ಮ ದೇಶದ ಸಂದೇಶವನ್ನು ವಿವಿಧ ದೇಶಗಳಲ್ಲಿ ಪಸರಿಸಲು ಬಂದಿದ್ದೇವೆ' ಎಂದು ಕವಯಿತ್ರಿಯೂ ಆಗಿರುವ ಕನಿಮೋಳಿ ಜಾಣ್ಮೆಯ ಉತ್ತರ ನೀಡಿದ್ದಾರೆ. ನಮ್ಮ ದೇಶದಲ್ಲಿ ಪ್ರಗತಿಯ ಉದ್ದೇಶದೊಂದಿಗೆ ಬಹಳಷ್ಟು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಆದರೆ, ನೆರೆಯ ದೇಶ ಪಾಕಿಸ್ತಾನ ಪ್ರೇರಿತ ಭಯೋ ತ್ಪಾದನೆ ಚಟುವಟಿಕೆಗಳು ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯಾಗಿವೆ. ಹಾಗೆಂದು ಯುದ್ಧ ಮಾಡುವುದೂ ಭಾರತಕ್ಕೆ ಇಷ್ಟವಿಲ್ಲ. ಹಾಗಾಗಿಯೇ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಮೂಲಕ ಪಾಕ್‌ನಲ್ಲಿನ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಲಾಗಿದೆ ಎಂಬುದನ್ನು ಕನಿಮೋಳಿ ಅವರ ನೇತೃತ್ವದ ನಿಯೋಗ ಸ್ಪೇನ್ ಗಮನಕ್ಕೆ ತಂದಿದೆ.

ಸಿಕ್ಕಿಂ: ಕಣ್ಮರೆಯಾದ 6 ಯೋಧರಿಗೆ ಶೋಧ

ಗ್ಯಾಂಗ್ಟಕ್: ಸಿಕ್ಕಿ ರಾಜ್ಯದ ಪರ್ವತ ಪ್ರದೇಶದಲ್ಲಿ ಭಾನುವಾರ ಸಂಜೆ ಮೇಘಸ್ಫೋಟವಾಗಿದ್ದು, ಪರಿಣಾಮವಾಗಿ ಧಾರಾಕಾರ ಮಳೆ ಸುರಿದು ರಾಜ್ಯದ ಹಲವೆಡೆ ಭೂಕುಸಿತವಾಗಿದೆ. ಲಾಛನ್‌ನಲ್ಲಿ ಸೇನಾ ಶಿಬಿರ ಇರುವೆಡೆಯೂ ಪರ್ವತದ ಒಂದು ಭಾಗ ಕುಸಿದಿದ್ದರಿಂದ 3 ಯೋಧರು ಸಾವಿಗೀಡಾದರು. ಇದೇ ವೇಳೆ 6 ಸೈನಿಕರು ಕಣ್ಮರೆಯಾಗಿದ್ದು, ಅವರಿಗಾಗಿ ಎರಡು ದಿನಗಳಿಂದಲೂ ಶೋಧ ಕಾರ್ಯ ನಡೆಯುತ್ತಿದೆ. ಈಗ ರಾಷ್ಟ್ರೀಯ ಪ್ರಾಕೃತಿಕ ವಿಕೋಪ ಪರಿಹಾರ ರಕ್ಷಣಾ ಪಡೆ(ಎನ್‌ಡಿಆರ್‌ಎಫ್) ಕೂಡಾ ಮಂಗಳವಾರ ಶೋಧ ಕಾರ್ಯಕ್ಕೆ ಕೈಜೋಡಿಸಿದೆ. ಎನ್‌ಡಿಆರ್‌ಎಫ್‌ನ 23 ಮಂದಿಯ ತಂಡ ಸೈನಿಕರು ಮತ್ತು ರಾಜ್ಯ ಸರಕಾರದ ಕಾರ್ಯಪಡೆ ಜತೆಗೂಡಿ ಶೋಧ ಕಾರ್ಯ ನಡೆಸಲಾರಂಭಿಸಿದೆ. ಎನ್‌ಡಿಆರ್‌ಎಫ್ ಬಳಿ ಕಾರ್ಯಾಚರಣೆಗೆ ಅಗತ್ಯವಾದ ಉಪಗ್ರಹ ಸಂಪರ್ಕದ ದೂರವಾಣಿ ಮತ್ತು ತುರ್ತು ಕಾರ್ಯಾಚರಣೆ ಉಪಕರಣಗಳೂ ಇರುವುದರಿಂದ ಕಾರ್ಯಾಚರಣೆಗೆ ಬಹಳ ಸಹಾಯಕವಾಗಲಿದೆ ಎನ್ನಲಾಗಿದೆ. ಇನ್ನೊಂದೆಡೆ, ಮಳೆ ಅವಘಡಗಳಿಂದಾಗಿ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದ 34 ಜನರನ್ನು ಹೆಲಿಕಾಪ್ಟರ್ ಮೂಲಕ ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಕರೆತಂದು ಬಿಡಲಾಗಿದೆ.

ದೇಶದ್ರೋಹಿ ಮೂರು ನೌಕರರ ವಜಾ

ಶ್ರೀನಗರ: ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಜಮ್ಮು-ಕಾಶ್ಮೀರದ ಒಬ್ಬ ಪೊಲೀಸ್ ಮತ್ತು ಒಬ್ಬ ಶಿಕ್ಷಕ ಸೇರಿದಂತೆ ಮೂವರು ಸರಕಾರಿ ನೌಕರರನ್ನು ಮಂಗಳವಾರ ವಜಾಗೊಳಿಸಲಾಗಿದೆ. ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಮೂವರು ದೇಶದ್ರೋಹಿಗಳನ್ನು ಸರಕಾರಿ ಸೇವೆಯಿಂದ ವಜಾಗೊಳಿಸಿ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ಕಾಶ್ಮೀರ ಪೊಲೀಸ್ ಸಾರ್ಜೆಂಟ್ ಕಾನ್‌ಸ್ಟೆಬಲ್ ಮಲಿಕ್ ಇಶ್ಫಾಕ್ ನಸೀರ್ ಮತ್ತು ಶಾಲಾ ಶಿಕ್ಷಕ ಐಜಾಜ್ ಅಹ್ಮದ್ ಹಾಗೂ ಲೆಫ್ಟಿನೆಂಟ್ ಗುಲಾಮ್ ಮೊಹಮ್ಮದ್ ಖಾನ್ ಅವರ ಪುತ್ರ, ಆರೋಗ್ಯ-ವೈದ್ಯಕೀಯ ಶಿಕ್ಷಣ ಇಲಾಖೆ ಕಿರಿಯ ಸಹಾಯಕ ವಸೀಮ್ ಅಹ್ಮದ್ ಖಾನ್ ವಜಾಗೊಂಡವರು. ಸಂವಿಧಾನದ 311ನೇ ವಿಧಿಯ ಷರತ್ತು 2ರ ನಿಬಂಧನೆ ಉಪ-ಷರತ್ತು ಸಿ ಅನ್ವಯ ರಾಜ್ಯದ ಭದ್ರತೆ ದೃಷ್ಟಿಯಿಂದ ಹಾಗೂ ಕಾನೂನು ಜಾರಿ-ಗುಪ್ತಚರ ಸಂಸ್ಥೆಯ ತನಿಖೆಯ ನಂತರ ಮೂವರನ್ನು ವಜಾಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಜಮ್ಮು-ಕಾಶ್ಮೀರದಲ್ಲಿ ಈವರೆಗೆ 70ಕ್ಕೂ ಅಧಿಕ ಸರಕಾರಿ ನೌಕರರು ಉಗ್ರರ ನಂಟು, ದೇಶ ವಿರೋಧಿ ಚಟುವಟಿಕೆ ಕಾರಣ ವಜಾಗೊಂಡಿದ್ದಾರೆ.

ಪಾಕ್‌ಗೆ ರಹಸ್ಯ ಮಾಹಿತಿ: ಪಂಜಾಬ್ ವ್ಯಕ್ತಿ ಬಂಧನ

ಚಂಡೀಗಢ: ಪಾಕಿಸ್ತಾನದ ವಿರುದ್ಧ ಭಾರತದ ಸಶಸ್ತ್ರ ಪಡೆಗಳು 'ಆಪರೇಷನ್ ಸಿಂಧೂರ' ಸೇನಾ ಕಾರ್ಯಾಚರಣೆ ನಡೆಸಿದ್ದ ಸಮಯದಲ್ಲಿ ಸೇನೆಯ ಚಲನವಲನಗಳ ಸೂಕ್ಷ್ಮ ಮಾಹಿತಿಯನ್ನು ಪಾಕ್ ಗುಪ್ತಚರರೊಂದಿಗೆ ಹಂಚಿಕೊಂಡ ಆರೋಪದಡಿ ಪಂಜಾಬ್ ರಾಜ್ಯದ ತರಣ್‌ತರಣ್ ಜಿಲ್ಲೆಯ ವ್ಯಕ್ತಿಯನ್ನು ಬಂಧಿಸಲಾಗಿದೆ.

ತರಣ್ ಮೊಹಲ್ಲಾ ನಿವಾಸಿ ಗಗನ್ ದೀಪ್ ಸಿಂಗ್ ಅಲಿಯಾಸ್ ಗಗನ್ ಆರೋಪಿ. ಸ್ಥಳೀಯ ಪೊಲೀಸರು ಮತ್ತು ಪೊಲೀಸ್ ಕೌಂಟರ್ ಇಂಟೆಲಿಜೆನ್ಸ್ ವಿಭಾಗ ಜಂಟಿ ಕಾರ್ಯಾಚರಣೆ ನಡೆಸಿ ಗಗನ್‌ನನ್ನು ಬಂಧಿಸಿದೆ. ಗಗನ್ ಮೊಬೈಲ್‌ನಲ್ಲಿ 20ಕ್ಕೂ ಹೆಚ್ಚು ಐಎಸ್‌ಐ ಸಂಪರ್ಕಗಳ ವಿವರಗಳು ಪತ್ತೆಯಾಗಿವೆ. ಮಾಹಿತಿ ರವಾನೆಗೆ ಬಳಸಲಾಗಿದ್ದ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ.

ಆರೋಪಿ ಪಾಕ್‌ನ ಗುಪ್ತಚರ ಸಂಸ್ಥೆ ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್(ಐಎಸ್‌ಐ) ಜತೆ ಸಂಪರ್ಕದಲ್ಲಿದ್ದ. ಹಣ ಪಡೆದು ಸೂಕ್ಷ್ಮ ಮಾಹಿತಿ ಹಂಚಿಕೊಳ್ಳುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಅಲ್ಲದೇ, ಪಾಕ್ ಮೂಲದ ಖಲಿಸ್ತಾನಿ ಬೆಂಬಲಿಗ ಗೋಪಾಲ್ ಸಿಂಗ್ ಚಾವ್ಲಾ ಜತೆಗೂ 5 ವರ್ಷಗಳಿಂದ ಸಂಪರ್ಕದಲ್ಲಿದ್ದ. ಸೇನಾಪಡೆ ನಿಯೋಜನೆ ಮತ್ತು ಕಾರ್ಯತಂತ್ರ ಸ್ಥಳಗಳ ಬಗ್ಗೆ ಐಎಸ್‌ಐ ಬಂಟರ ಜತೆ ಹಂಚಿಕೊಳ್ಳುತ್ತಿದ್ದ ಎಂದು ತನಿಖೆಯಿಂದ ತಿಳಿದುಬಂದಿದೆ. ತರಣ್ ತರಣ್ ನಗರದ ಪೊಲೀಸ್ ಠಾಣೆಯಲ್ಲಿ ಅಧಿಕೃತ ರಹಸ್ಯ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಲಾಗಿದೆ ಮತ್ತು ಹೆಚ್ಚಿನ ತನಿಖೆ ಪ್ರಗತಿಯಲ್ಲಿದೆ ಎಂದರು.

ಆಪರೇಷನ್ ಸಿಂದೂರ್ ವೇಳೆ 28 ಕಡೆ ಭಾರತ ದಾಳಿ: ಪಾಕ್

ದೆಹಲಿ: ಭಯೋತ್ಪಾದಕರ ವಿರುದ್ಧ ಭಾರತ ಆಪರೇಷನ್ ಸಿಂದೂರ್ ಹೆಸರಲ್ಲಿ ನಡೆಸಿದ ಅತ್ಯಂತ ಯಶಸ್ವಿ ಸೇನಾ ಕಾರ್ಯಾಚರಣೆಯಲ್ಲಿ ಮೊದಲಿಗೆ ಪಾಕಿಸ್ತಾನ ಮತ್ತು ಪಿಒಕೆಯಲ್ಲಿನ ಉಗ್ರರ 9 ನೆಲೆಗಳು, ತರಬೇತಿ ಶಿಬಿರಗಳನ್ನು ಧ್ವಂಸಗೊಳಿಸಲಾಗಿದೆ ಎಂದೇ ತಿಳಿಯಲಾಗಿತ್ತು. ಅದಷ್ಟೇ ನಿಜವಲ್ಲ. ಭಾರತ ಸೇನಾಪಡೆಗಳು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ)ದಲ್ಲಿನ ಒಟ್ಟು 28 ಸ್ಥಳಗಳ ಮೇಲೆ ದಾಳಿ ನಡೆಸಿವೆ ಎಂಬ ಸತ್ಯ ಸಂಗತಿ ಇದೀಗ ಹೊರಬಿದ್ದಿದೆ. ಈ ಸಂಗತಿಯನ್ನು ಇತ್ತೀಚಿನ ಪಾಕಿಸ್ತಾನದ ದಾಖಲೆಗಳೇ ದೃಢಪಡಿಸಿವೆ.

ಭಾರತ ಲಷ್ಕರ್-ಎ-ತಯ್ಯಬಾ ಮತ್ತು ಜೈಶ್-ಎ-ಮೊಹಮ್ಮದ್‌ನಂತಹ ಉಗ್ರ ಸಂಘಟನೆಗಳ ತಾಣವಾಗಿರುವ ಮುರಿಡ್ಕೆ ಮತ್ತು ಬಹವಾಲ್‌ಪುರ ಸೇರಿದಂತೆ 9 ಪ್ರಮುಖ ತಾಣಗಳನ್ನು ಗುರಿಯಾಗಿಸಿ ಭಾರತದ ಸೇನಾಪಡೆಗಳು ದಾಳಿ ನಡೆಸಿದ್ದವು. ಭಾರತ ಮೇ 7ರಿಂದ 10ರವರೆಗೆ ಪೇಶಾವರ, ಸಿಂಧ್, ಜಾಂಗ್, ಗುಜ್ರನ್‌ವಾಲಾ, ಭವಾಲ್ ನಗರ ಮತ್ತು ಶೋರ್ ಸೇರಿದಂತೆ ಒಟ್ಟು 28 ಸ್ಥಳಗಳ ಮೇಲೆ ದಾಳಿ ನಡೆಸಿದೆ ಎಂದು ಪಾಕಿಸ್ತಾನದ ದಾಖಲೆಗಳು ಸ್ಪಷ್ಟಪಡಿಸಿವೆ. ನೂರ್‌ಖಾನ್, ರಫಿಕಿ, ಸುಕ್ರೂರ್, ಸಿಯಾಲ್‌ಕೋಟ್, ಪಸ್ರೂರ್, ಚುನಿಯನ್ ಮತ್ತು ಸರ್ಗೋಧಾ ಸೇರಿದಂತೆ ಪಾಕಿಸ್ತಾನದ 11 ವಾಯುನೆಲೆಗಳು ಭಾರೀ ಹಾನಿಗೊಳಗಾಗಿವೆ. ಇದನ್ನು ಮ್ಯಾಕ್ಸರ್ ಟೆಕ್ನಾಲಜೀಸ್ ಉಪಗ್ರಹ ಚಿತ್ರಗಳು ದೃಢಪಡಿಸಿವೆ. ಭಾರತದ ಸೇನಾಪಡೆಯಿಂದ ದೊಡ್ಡಮಟ್ಟದ ದಾಳಿಯೇನೂ ನಡೆದಿಲ್ಲ. ಚುಟುಪುಟ್ ದಾಳಿಯಷ್ಟೇ ನಡೆದಿದೆ ಎನ್ನುತ್ತಾ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರವನ್ನು ನಿರಂತರ ಟೀಕಿಸುತ್ತಿರುವ ಕಾಂಗ್ರೆಸ್ ನಾಯಕರನ್ನು ಪಾಕ್‌ನ ಹೊಸ ದಾಖಲೆಗಳ ಬಹಿರಂಗಗೊಂಡ ನಂತರ ನೆಟ್ಟಿಗರು ಜಾಲತಾಣಗಳಲ್ಲಿ ತರಾಟೆ ತೆಗೆದುಕೊಂಡಿದ್ದಾರೆ.

ನೆಟ್ಟಿಗರ ತರಾಟೆ

ಭಾರತ ಹೇಳಿದ್ದಕ್ಕಿಂತೂ ಹೆಚ್ಚಿನ ಕಡೆಗಳಲ್ಲಿ ಭಾರತದ ಸೇನಾಪಡೆಗಳು ದಾಳಿ ಮಾಡಿವೆ ಎಂದು ಸ್ವತಃ ಪಾಕಿಸ್ತಾನ ಪ್ರಧಾನಿಯೇ ಒಪ್ಪಿಕೊಂಡಿದ್ದಾರೆ. ಆದರೆ, ಆಪರೇಷನ್ ಸಿಂಧೂರ್ ಸೇನಾ ಕಾರ್ಯಾಚರಣೆಯನ್ನು ಅನುಮಾನಿಸುತ್ತಿರುವ, ದಾಖಲೆ ಕೇಳುತ್ತಿರುವವರ ಒಲವು ಯಾವ ದೇಶದ ಪರ ಇದೆ? ಎಂದು ಖಾರವಾಗಿ ಪ್ರಶ್ನಿಸಿದ್ದಾರೆ.

ಅಮೆರಿಕ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್

ಭಾರತ-ಅಮೆರಿಕ ಶೀಘ್ರ ವ್ಯಾಪಾರ ಒಪ್ಪಂದ ಸಹಿ

ವಾಷಿಂಗ್ಟನ್: ಭಾರತ-ಅಮೆರಿಕ ನಡುವೆ ಸದ್ಯದಲ್ಲೇ ವ್ಯಾಪಾರ ಒಪ್ಪಂದ ನಿರೀಕ್ಷಿಸಬಹು ದಾಗಿದೆ ಎಂದು ಅಮೆರಿಕ ವಾಣಿಜ್ಯ ಇಲಾಖೆ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಹೇಳಿದ್ದಾರೆ.

ಸೋಮವಾರ ವಾಷಿಂಗ್ಟನ್‌ನಲ್ಲಿ ನಡೆದ ಅಮೆರಿಕ-ಭಾರತ ಸ್ಟ್ರಾಟೆಜಿಕ್ ಪಾರ್ಟ್‌ನರ್‌ಷಿಪ್ ಫೋರಂ ಶೃಂಗಸಭೆಯ 8ನೇ ಆವೃತ್ತಿಯಲ್ಲಿ ಮಾತನಾಡಿದ ಲುಟ್ನಿಕ್, ಭಾರತ- ಅಮೆ ರಿಕ ಒಟ್ಟಾಗಿ ಕೆಲಸ ಮಾಡಬಹುದಾದ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿವೆ. ಈ ವಾರ ದೆಹಲಿಯಲ್ಲಿ ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ಮಾತುಕತೆ ನಡೆಯಲಿದೆ. ಬಳಿಕ ಉಭಯ ದೇಶಗಳು ಅಂತಿಮ ತೀರ್ಮಾನಕ್ಕೆ ಬರಲಿವೆ ಎಂದು ಲುಟ್ನಿಕ್ ವಿಶ್ವಾಸ ವ್ಯಕ್ತಪಡಿಸಿ ದ್ದಾರೆ. ಭಾರತವನ್ನು ಬಹಳ ಪ್ರೀತಿಸುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಭಯ ದೇಶಗ ಳಿಗೂ ಅನುಕೂಲವಾಗುವಂತಹ ವ್ಯಾಪಾರ ಒಪ್ಪಂದವನ್ನು ಜಾರಿಗೆ ತರಲಿದ್ದಾರೆ. ಎರಡೂ ದೇಶಗಳ ನಡುವೆ ಈ ಹಿಂದೆ ವ್ಯಾಪಾರ ಮಾತುಕತೆ 2-3 ವರ್ಷ ನಡೆಯುತ್ತಿದ್ದವು. ಪ್ರಸ್ತುತ ಕೆಲವೇ ತಿಂಗಳಲ್ಲಿ ಒಪ್ಪಂದವಾಗುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಲುಟ್ನಿಕ್ ಹೇಳಿದ್ದಾರೆ.

ಉಗ್ರರ ಮೂಲಸೌಕರ್ಯ ನಾಶಪಡಿಸಿದರಷ್ಟೇ ಮಾತು

ಬ್ರೆಸಿಲಿಯ: ಭಯೋತ್ಪಾದಕರ ನೆಲೆಗಳು ಪಾಕಿಸ್ತಾನದ ಎಲ್ಲೆಡೆಯೂ ಕಂಡುಬರುತ್ತವೆ. ಆ ಎಲ್ಲಾ ಉಗ್ರ ನೆಲೆಗಳ ಮೂಲಸೌಕರ್ಯಗಳನ್ನು ನಾಶಪಡಿಸಿ ಪರಿಣಾಮಕಾರಿ ಕ್ರಮ ಕೈಗೊಂಡರೆ ಮಾತ್ರವೇ ಪಾಕ್ ಜತೆಗೆ ಭಾರತ ಮಾತುಕತೆ ನಡೆಸುತ್ತದೆ ಎಂದು ಬ್ರೆಜಿಲ್ ಪ್ರವಾಸದಲ್ಲಿರುವ ಸರ್ವಪಕ್ಷ ನಿಯೋಗದ ಮುಂದಾಳು, ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ.

ಭಯೋತ್ಪಾದಕ ರಾಷ್ಟ್ರ ಪಾಕಿಸ್ತಾನ ವಿರುದ್ಧದ ಭಾರತದ ಸೇನಾ ಕಾರ್ಯಾಚರಣೆಯನ್ನು ತಪ್ಪಾಗಿ ಅರ್ಥ ಮಾಡಿಕೊಂಡಿರುವ ಲ್ಯಾಟಿನ್ ಅಮೆರಿಕನ್ ದೇಶಗಳಿಗೆ, ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟದ ಬಗೆಗೆ ನಮ್ಮ ನಿಯೋಗ ಯಶಸ್ವಿಯಾಗಿ ಮನವರಿಕೆ ಮಾಡಿ ಕೊಟ್ಟಿದೆ ಎಂದು ತರೂರ್ ಸೋಮವಾರ ಹೇಳಿದರು. ಪಾಕಿಸ್ತಾನ ಹೇಳಿಕೊಳ್ಳುವಂತೆ ಆ ದೇಶ ಮುಗ್ಧ ಆಗಿದ್ದರೆ ಅಮೆರಿಕ, ಭಾರತಕ್ಕೆ ಬೇಕಾಗಿರುವ 'ಮೋಸ್ಟ್ ವಾಟೆಂಡ್ ಉಗ್ರ'ರಿಗೆ ಏಕೆ ಸುರಕ್ಷಿತ ನೆಲೆ ಒದಗಿಸಿದೆ? ಉಗ್ರರು ಎಲ್ಲೆಂದರಲ್ಲಿ ತಿರುಗಾಡುತ್ತಾ, ಸಿಕ್ಕಲ್ಲೆಲ್ಲಾ ಉಗ್ರ ತರಬೇತಿ ಶಿಬಿರಗಳನ್ನು ನಡೆಸುತ್ತಾ ಇರಲು ಬೇಕಾಗುವಷ್ಟು ಸೌಕರ್ಯಗಳನ್ನೇಕೆ ಪಾಕ್ ಸರಕಾರ ಮತ್ತು ಸೇನೆ ಒದಗಿಸುತ್ತಿವೆ? ಎಂದು ಶಶಿ ತರೂರ್ ಪ್ರಶ್ನಿಸಿದ್ದಾರೆ.

ಪಾಕ್ ಜತೆ ಮಾತುಕತೆಗೆ ಭಾಷಾ ಸಮಸ್ಯೆ ಇಲ್ಲ. ಹಿಂದಿ, ಪಂಜಾಬಿ, ಇಂಗ್ಲಿಷ್ ಯಾವುದೇ ಭಾಷೆಯಲ್ಲಾದರೂ ಮಾತನಾಡಬಹುದು. ಆದರೆ, ಆ ದೇಶದ ಆಡಳಿತಗಾರರಲ್ಲಿ ಬದ್ಧತೆ, ಪ್ರಾಮಾಣಿಕತೆಯ ಸಮಸ್ಯೆ ಇದೆ ಎಂದರು. ನಿಯೋಗ ಈವರೆಗೆ ಗಯಾನಾ, ಪನಾಮ, ಕೊಲಂಬಿ ಯ ಮತ್ತು ಬ್ರೆಜಿಲ್‌ಗೆ ಭೇಟಿ ನೀಡಿ ಭಾರತದ ಸಂದೇ ಶವನ್ನು ಸ್ಪಷ್ಟವಾಗಿ ಮುಟ್ಟಿಸಿದೆ. ದೇಶಗಳ ನಾಯಕರಿಗೆ ಪಾಕ್ ಕಪಟವನ್ನು ಮನವರಿಕೆ ಮಾಡಿಕೊಟ್ಟಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಗೌರವ್ ಗೊಗೊಯ್ ಅಸ್ಸಾಂ ಪಿಸಿಸಿ ಅಧ್ಯಕ್ಷ

ಗುವಾಹಟಿ: ಕಾಂಗ್ರೆಸ್ ಪಕ್ಷದ ಅಸ್ಸಾಂ ಘಟಕ ಅಧ್ಯಕ್ಷರಾಗಿ ಲೋಕಸಭಾ ಸದಸ್ಯ ಗೌರವ್ ಗೊಗೊಯ್ ಮಂಗಳವಾರ ಅಧಿಕಾರ ವಹಿಸಿಕೊಂಡರು. ರಾಜ್ಯ ವಿಧಾನಸಭೆಗೆ 2026ರಲ್ಲಿ ಚುನಾವಣೆ ನಡೆಯಲಿದ್ದು, ಆಡಳಿತಾ ರೂಢ ಬಿಜೆಪಿ ವಿರುದ್ಧ ಕಾಂಗ್ರೆಸ್ ಪಕ್ಷ ವನ್ನು ಬಲಿಷ್ಠಗೊಳಿಸಬೇಕಾದ ಸವಾಲು ಅವರಿಗೆ ಎದುರಾಗಿದೆ.

ಅಸ್ಸಾಂನ ಪ್ರಮುಖ ಪ್ರತಿಪಕ್ಷದ ಅಧ್ಯಕ್ಷರಾಗಿ 3 ವರ್ಷ ಕಾಲ ಮುನ್ನಡೆಸಿದ್ದ ಭೂಪೇನ್ ಕುಮಾರ್ ಬೋರಾ ಅವರು ನೂತನ ಅಧ್ಯಕ್ಷ ಗೌರವ್ ಗೊಗೊಯ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಪಕ್ಷ ಸಮಾನತೆ-ಎಲ್ಲರನ್ನೂ ಒಳಗೊಳ್ಳುವ ಸಿದ್ಧಾಂತದಿಂದ ಪ್ರೇರಿತವಾಗಿ ಕಾರ್ಯನಿರ್ವಹಿಸಲಿದೆ ಎಂದು ಗೊಗೊಯ್ ಇದೇ ಸಂದರ್ಭ ಹೇಳಿದರು.

ಗೌರವ್ ಗೊಗೊಯ್ ಅವರ ಬ್ರಿಟನ್ ಮೂಲದ ಪತ್ನಿ ಪಾಕ್ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಜತೆ ನಂಟು ಹೊಂದಿದ್ದಾರೆ ಎಂದು ಆರೋಪಿಸಿರುವ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ವಾಗ್ದಾಳಿ ನಡೆಸುತ್ತಿರುವ ಮಧ್ಯೆಯೇ ಗೊಗೊಯ್‌ಗೆ ರಾಜ್ಯದಲ್ಲಿ ಪಕ್ಷ ಸಂಘಟಿಸಬೇಕಾದ ಹೊಣೆ ವಹಿಸಲಾಗಿದೆ.

ಸಂಸತ್ ಅಧಿವೇಶನ: ಪ್ರಧಾನಿಗೆ ಪ್ರತಿಪಕ್ಷ ಪತ್ರ

ದೆಹಲಿ: 'ಆಪರೇಷನ್ ಸಿಂಧೂರ್' ಸೇನಾ ಕಾರ್ಯಾಚರಣೆ ಕುರಿತು ಚರ್ಚಿಸಲು ಸಂಸತ್ತಿನ ಉಭಯ ಸದನಗಳ ವಿಶೇಷ ಅಧಿವೇಶನ ಕರೆಯುವಂತೆ ಒತ್ತಾಯಿಸಿ 'ಇಂಡಿ' ಒಕ್ಕೂಟ ಮತ್ತು ಇತರೆ 16 ಪ್ರತಿಪಕ್ಷಗಳ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಪತ್ರ ಬರೆದಿದ್ದಾರೆ.

ದೆಹಲಿಯಲ್ಲಿ ಆಪರೇಷನ್ ಸಿಂಧೂರ್ ಕುರಿತು ಸಭೆ ನಡೆಸಿದ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಶಿವಸೇನೆ(ಯುಬಿಟಿ), ರಾಷ್ಟ್ರೀಯ ಜನತಾ ದಳ ಸೇರಿದಂತೆ ವಿವಿಧ ಪಕ್ಷಗಳ ನಾಯಕರು ಆ ಬಳಿಕ ಪತ್ರ ಬರೆದಿದ್ದಾರೆ. ಕಾಂಗ್ರೆಸ್‌ನ ಜೈರಾಮ್ ರಮೇಶ್ ಮತ್ತು ದೀಪೇಂದ್ರ ಹೂಡಾ, ಟಿಎಂಸಿ ನಾಯಕ ಡೆರೆಕ್ ಒ'ಬ್ರೇನ್, ಸಮಾಜವಾದಿ ಪಕ್ಷದ ರಾಮ ಗೋಪಾಲ್ ಯಾದವ್, ಆರ್‌ಜೆಡಿ ಪಕ್ಷದ ಮನೋಜ್ ಝಾ ಮತ್ತು ಶಿವಸೇನೆ(ಯುಬಿಟಿ) ಸಂಜಯ್ ರಾವತ್ ಸಭೆಯಲ್ಲಿದ್ದರು. ಕರುಣಾನಿಧಿ ಜನ್ಮದಿನ ಹಿನ್ನೆಲೆ ಸಭೆಯಲ್ಲಿ ಭಾಗವಹಿಸಲಾಗದ ಡಿಎಂಕೆ ನಾಯಕರು, ಪ್ರಧಾನಿಗೆ ಬರೆದ ಪತ್ರಕ್ಕೆ ಸಹಿ ಮಾಡಿದ್ದಾರೆ. ನ್ಯಾಷನಲ್ ಕಾನ್ಫರೆನ್ಸ್, ಸಿಪಿಎಂ, ಸಿಪಿಐ, ಐಯುಎಂಎಲ್, ರೆವಲ್ಯೂಷನರಿ ಸೋಷಿಯಲಿಸ್ಟ್ ಪಾರ್ಟಿ, ಕೇರಳ ಕಾಂಗ್ರೆಸ್, ಎಂಡಿಎಂಕೆ, ಸಿಪಿಐ ಲಿಬರೇಶನ್ ಕೂಡ ಪತ್ರಕ್ಕೆ ಸಹಿ ಹಾಕಿವೆ ಎಂದು 'ಇಂಡಿ' ಒಕ್ಕೂಟದ ನಾಯಕರು ತಿಳಿಸಿದ್ದಾರೆ. ಶರದ್ ಪವಾರ್ ನೇತೃತ್ವದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ) ಮತ್ತು ಆಮ್ ಆದ್ಮಿ ಪಕ್ಷ(ಎಎಪಿ) ನಾಯಕರು ಸಭೆಗೆ ಗೈರಾಗಿದ್ದರು.

4,000 ಗಡಿ ದಾಟಿದ ಕೋವಿಡ್ ಪ್ರಕರಣ

ದೆಹಲಿ: ಭಾರತದಲ್ಲಿ ಕೋವಿಡ್-19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಆತಂಕಕ್ಕೆ ಕಾರಣವಾಗಿದೆ. ಮಂಗಳವಾರ ಬೆಳಗ್ಗೆ ಕೇಂದ್ರದ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ ದೇಶದಲ್ಲಿನ ಕೋವಿಡ್-19 ಸಕ್ರಿಯ ಪ್ರಕರಣಗಳ ಸಂಖ್ಯೆ 4,000ದ ಗಡಿ ದಾಟಿದೆ.



ಮೇ 22ರಂದು ದೇಶದಲ್ಲಿ 257 ಕರೋನಾ ಸಕ್ರಿಯ ಪ್ರಕರಣಗಳಿದ್ದವು. ಮೇ 31ರ ವೇಳೆಗೆ 3,395ಕ್ಕೆ, ಜೂ.3 ರಂದು 4,026 ಪ್ರಕರಣಗಳಿಗೆ ಏರಿಕೆಯಾಗಿದೆ. ಕೇರಳದಲ್ಲಿ 1,446 ಸಕ್ರಿಯ ಪ್ರಕರಣಗಳು ದಾಖಲಾಗಿದ್ದು, ಸೋಂಕಿತರ ಸಂಖ್ಯೆಯಲ್ಲಿ ರಾಜ್ಯ ಮೊದಲ ಸ್ಥಾನದಲ್ಲೇ ಮುಂದುವರಿದಿದೆ. ಮಹಾರಾಷ್ಟ್ರದಲ್ಲಿ 494, ಗುಜರಾತ್ 397, ದೆಹಲಿಯಲ್ಲಿ 393 ಪ್ರಕರಣಗಳಿವೆ.

5 **ಸಾವು:** ಮಂಗಳವಾರ ಮುಂಜಾನೆಗೂ ಮುಂಚಿನ 24 ಗಂಟೆಗಳಲ್ಲಿ ದೇಶದ ವಿವಿಧೆಡೆ ಐವರು ಸೋಂಕಿತರು ಸಾವಿಗೀಡಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಇಬ್ಬರು, ಕೇರಳ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ತಲಾ ಒಬ್ಬರು ಸೋಂಕಿಗೆ ಬಲಿಯಾಗಿದ್ದಾರೆ. ಇದರೊಂದಿಗೆ ಜನವರಿಯಿಂದ ಈವರೆಗೆ ದೇಶದಲ್ಲಿ ಒಟ್ಟು 37 ಜನರು ಕೋವಿಡ್ ಸೋಂಕಿನಿಂದ ಸಾವನ್ನಪ್ಪಿದಂತಾಗಿದೆ.

ಇಡಿ ವಿಶೇಷ ನಿರ್ದೇಶಕ ಸತ್ಯವ್ರತ ಸೇವೆ ಮೊಟಕು

ದೆಹಲಿ: ದೇಶದ ವಿವಿಧ ಬ್ಯಾಂಕ್‌ಗಳಿಗೆ ವಂಚಿಸಿ ದೇಶದಿಂದ ಪರಾರಿಯಾಗಿರುವ ವಿಜಯ್ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ ಅವರ ವಿರುದ್ಧದ ಪ್ರಕರಣಗಳಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣಗಳ ತನಿಖೆ ನಡೆಸಿ ಘೋಷಿತ ಅಪರಾಧಿಗಳನ್ನು ದೇಶಕ್ಕೆ ಎಳೆದುತರುವ ಪ್ರಯತ್ನ ಮಾಡುತ್ತಿರುವ ವಿಶೇಷ ನಿರ್ದೇಶಕ ಸತ್ಯವ್ರತ ಕುಮಾರ್ ಅವರ ಜಾರಿ ನಿರ್ದೇಶನಾಲಯ(ಇ.ಡಿ)ದಲ್ಲಿನ ಸೇವಾವಧಿ ದಿಢೀರ್ ಎಂಬಂತೆ ಕೊನೆಗೊಂಡಿದೆ. ಬದಲಾಗಿ, 2004ರ ಕೇಡರ್‌ನ ಐಆರ್‌ಎಸ್ ಅಧಿಕಾರಿ ಸತ್ಯವ್ರತ ಅವರನ್ನು ಮಾತೃ ಇಲಾಖೆ (ಸಿಬಿಐಸಿ) ಇರುವ ಕೋಲ್ಕತ್ತ ನಗರಕ್ಕೆ ವರ್ಗ ಮಾಡಲು ಆದೇಶಿಸಲಾಗಿದೆ ಎಂದು ತಿಳಿದುಬಂದಿದೆ. ಸತ್ಯವ್ರತ ಅವರ ವಿಶೇಷ ನಿರ್ದೇಶಕ ಅಧಿಕಾರ ಅವಧಿ ಜಾರಿ ನಿರ್ದೇಶನಾಲಯದಲ್ಲಿ 2026ರ ಅಕ್ಟೋಬರ್ 27ರವರೆಗೂ ಇದ್ದಿತು. ಆದರೆ, ಪಶ್ಚಿಮ ಬಂಗಾಳ ಚುನಾವಣೆ ಹಿನ್ನೆಲೆಯಲ್ಲಿ 17 ತಿಂಗಳು ಮುಂಚಿತವಾಗಿಯೇ ಕೋಲ್ಕತ್ತಕ್ಕೆ ಹೊಸ ಜವಾಬ್ದಾರಿಯೊಂದಿಗೆ ಕಳುಹಿಸಿಕೊಡಲಾಗುತ್ತಿದೆ ಎನ್ನಲಾಗಿದೆ.

ಮಹದೇವ್ ಗೇಮಿಂಗ್ ಆಪ್ ಮತ್ತು 'ಯೆಸ್' ಬ್ಯಾಂಕ್ ಸಂಸ್ಥಾಪಕ ರಾಣಾ ಕಪೂರ್ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುತ್ತಿರುವ ತಂಡದ ನೇತೃತ್ವವನ್ನು ವಹಿಸಿದ್ದ ಸತ್ಯವ್ರತ ಅವರ ಸೇವಾವಧಿ ಇ.ಡಿ.ಯಲ್ಲಿ ವಿಸ್ತರಣೆ ಮಾಡುವುದಕ್ಕೆ ನೇಮಕಕ್ಕೆ ಸಂಬಂಧಿಸಿದ ಸಂಪುಟ ಸಮಿತಿ ಸಮ್ಮತಿಸಿಲ್ಲ.

ಸಮಾಚಾರ ಸಣ್ಣದಲ್ಲ

ಅಪಘಾತ: ಇಬ್ಬರು ಯುವಕರು ಸಾವು

ಬೆಂಗಳೂರು: ದ್ವಿಚಕ್ರ ವಾಹನಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಇಬ್ಬರು ಯುವಕರು ಮೃತಪಟ್ಟಿದ್ದಾರೆ. ಮೈಸೂರು ರಸ್ತೆಯ ಸಿಟಿ ಮಾರ್ಕೆಟ್ ಮೇಲ್ಸೇತುವೆಯಲ್ಲಿ ಸೋಮವಾರ ತಡರಾತ್ರಿ ಅಪಘಾತ ಸಂಭವಿಸಿದ್ದು, ಆಕಾಶ್ ಹಾಗೂ ಅಫ್ಜಲ್ ಮೃತರು. ಕೆ.ಪಿ.ಅಗ್ರಹಾರ ನಿವಾಸಿಯಾಗಿದ್ದ ಆಕಾಶ್ ಗ್ರೈಂಡರ್ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದರು. ಮಂಗಳೂರಿನ ಅಫ್ಜಲ್, ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡು ವಿಜಯನಗರದಲ್ಲಿ ವಾಸವಾಗಿದ್ದರು. ಸ್ನೇಹಿತ ಮಣಿ ಜತೆ ಊಟಕ್ಕೆಂದು ಬಂದಿದ್ದ ಆಕಾಶ್, ದ್ವಿಚಕ್ರ ವಾಹನದಲ್ಲಿ ವಾಪಸ್ ತೆರಳುವಾಗ ಹಿಂಬದಿಯಿಂದ ಬಂದ ಅಫ್ಜಲ್‌ನ ಬೈಕ್ ಡಿಕ್ಕಿಯಾಗಿದೆ. ಪರಿಣಾಮ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಿಟಿ ಮಾರ್ಕೆಟ್ ಸಂಚಾರಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಕ ನೇಣಿಗೆ ಶರಣು

ಬೆಂಗಳೂರು: ಕೆಲಸ ಸಿಗದಿದ್ದಕ್ಕೆ ಮನನೊಂದು ಯುವಕ ನೇಣಿಗೆ ಶರಣಾದ ಘಟನೆ ತೋಟದಗುಡ್ಡದಹಳ್ಳಿಯಲ್ಲಿ ನಡೆದಿದೆ. ಬಿಹಾರ ಮೂಲದ ರಾಹುಲ್ ಕುಮಾರ್ ಯಾದವ್ (22) ಮೃತ ಯುವಕ. ಗಾರೆ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದ ರಾಹುಲ್ ಕೆಲಸ ಸಿಗದೆ ವಾಪಸ್ ಊರಿಗೆ ಹೋಗಲು ನಿರ್ಧಾರ ಮಾಡಿದ್ದ. ಊರಿಗೆ ವಾಪಾಸಾಗದಂತೆ ಪೋಷಕರು ನಿರಾಕರಿಸಿದ ಹಿನ್ನೆಲೆ ಮನನೊಂದ ಯುವಕ ಬಾಡಿಗೆ ಮನೆಯಲ್ಲಿ ನೇಣಿಗೆ ಶರಣಾಗಿದ್ದಾನೆ. ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಸರ್ಜಾಪುರ ರಸ್ತೆ ಭೂಸ್ವಾಧೀನ ಸಮಸ್ಯೆ ಬಗೆಹರಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸರ್ಜಾಪುರ ಮುಖ್ಯ ರಸ್ತೆಯ ಅಗಲೀಕರಣ ಕಾರ್ಯ ಪೂರ್ಣಗೊಂಡಿದ್ದು, ಸರ್ವೀಸ್ ರಸ್ತೆಯ ಅಭಿವೃದ್ಧಿಗೆ ಬಾಕಿಯಿರುವ ಭೂ ಸ್ವಾಧೀನ ಪ್ರಕ್ರಿಯೆಯ ಸಮಸ್ಯೆ ಬಗೆಹರಿಸುವಂತೆ ಅಧಿಕಾರಿಗಳಿಗೆ ಬಿಬಿಎಂಪಿಯ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ಮಹದೇವಪುರ ವಲಯ ವ್ಯಾಪ್ತಿಯ ಇಬ್ಬಲೂರು ಜಂಕ್ಷನ್ ಬಳಿಯಿಂದ ಪಾದಚಾರಿ ಮಾರ್ಗ ಸೇರಿದಂತೆ ಇನ್ನಿತರೆ ಸಮಸ್ಯೆಗಳ ಕುರಿತು ನಡಿಗೆಯ ಮೂಲಕ ಪರಿಶೀಲನೆ ನಡೆಸಿ ಮಾತನಾಡಿ, ಸರ್ಜಾಪುರ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಬೇಕಿರುವ ಸ್ವತ್ತಿನ ಮಾಲೀಕರ ಮನವೊಲಿಸಿ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಇಬ್ಬಲೂರು ಜಂಕ್ಷನ್‌ನಿಂದ ಕಾರ್ಮಲ್ ರಾಮ್ ಆರ್.ಜೆ ಟೆಕ್ ಪಾರ್ಕ್ ವರೆಗಿನ 4.7 ಕಿ.ಮೀ ರಸ್ತೆಯನ್ನು 45 ಮೀ. ಅಗಲೀಕರಣ ಮಾಡುವ ಸಂಬಂಧ ಈಗಾಗಲೇ 2022 ರಲ್ಲಿಯೇ ಮುಖ್ಯ ರಸ್ತೆಯನ್ನು ಅಗಲೀಕರಣ ಮಾಡಿ ಡಾಂಬರೀಕರಣ ಮಾಡಲಾಗಿದೆ ಆದರೆ, ಸರ್ವೀಸ್ ರಸ್ತೆಯಲ್ಲಿ ಬರುವ ಸ್ವತ್ತುಗಳಿಗೆ ಟಿ.ಡಿ.ಆರ್ ಅಡಿಯಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾರ್ಯ ಕುಂಠಿತವಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

2 ಕಿ.ಮೀ ನಡಿಗೆ

ಸರ್ಜಾಪುರ ರಸ್ತೆಯ ಇಬ್ಬಲೂರು ಜಂಕ್ಷನ್‌ನಿಂದ ಕಸವನಹಳ್ಳಿ ರಸ್ತೆ ಜಂಕ್ಷನ್ ವರೆಗೆ 2 ಕಿ.ಮೀ. ರಸ್ತೆಯಲ್ಲಿ ನಡಿಗೆ ಮೂಲಕ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿ, ಪಾದಚಾರಿಗಳ ಮಾರ್ಗಗಳ ಸಮರ್ಪಕ ನಿರ್ವಹಣೆ, ಸೈಡ್ ಡ್ರೈನ್ ಗಳ ದುರಸ್ತಿ ಹಾಗೂ ಹೂಳೆತ್ತುವುದು, ರಸ್ತೆ ಬದಿ ತ್ಯಾಜ್ಯ ಬಿಸಾಡದಂತೆ ಕ್ರಮವಹಿಸುವುದು, ಪಾದಚಾರಿಗಳು ರಸ್ತೆ ದಾಟುವ ಸಲುವಾಗಿ ಪಾದಚಾರಿ ಮೇಲ್ಸೇತುವೆ ನಿರ್ಮಿಸುವುದು, ಪಾದಚಾರಿ ಮಾರ್ಗಗಳು ಇಲ್ಲದಿರುವ ಕಡೆ ಹೊಸದಾಗಿ ಪಾದಚಾರಿ ಮಾರ್ಗಗಳನ್ನು ನಿರ್ಮಾಣ ಮಾಡುವುದು ಸೇರಿದಂತೆ ಇನ್ನಿತರೆ ವಿಷಯಗಳ ಬಗ್ಗೆ ಹೆಚ್ಚು ಗಮನ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅದಕ್ಕೆ ಮುಖ್ಯ ಆಯುಕ್ತರು ಪ್ರತಿಕ್ರಿಯಿಸಿ, ಸರ್ಜಾಪುರ ಮುಖ್ಯ ರಸ್ತೆಯಲ್ಲಿ ಸರ್ವೀಸ್ ರಸ್ತೆಯಲ್ಲಿ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಗೆ ಒಪ್ಪಿರುವ ಮಾಲೀಕರಿಂದ ಪರಿತ್ಯಾಜನ ಪತ್ರದ ಮೂಲಕ ಭೂಸ್ವಾಧೀನಗೊಂಡಿರುವ ಜಾಗವನ್ನು ಪಾಲಿಕೆಗೆ ಹಸ್ತಾಂತರ ಮಾಡಿಕೊಳ್ಳಬೇಕು. ಜತೆಗೆ ಪಾದಚಾರಿ ಮಾರ್ಗಗಳನ್ನು ನಿರ್ಮಿಸಲು ಯೋಜನೆ ರೂಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಂಕ್ಷನ್‌ಗಳನ್ನು ಅಭಿವೃದ್ಧಿಗೊಳಿಸಿ: ಇಬ್ಲೂರು ಜಂಕ್ಷನ್, ಹರಳೂರು ರಸ್ತೆ ಜಂಕ್ಷನ್ ಹಾಗೂ ಕಸವನಹಳ್ಳಿ ರಸ್ತೆ ಜಂಕ್ಷನ್ ಗಳ ಸುಧಾರಣೆ ಮಾಡಬೇಕಾಗಿದ್ದು, ಅದಕ್ಕೆ ಸರಿಯಾದ ಯೋಜನೆ ರೂಪಿಸಿ ಪಾದಚಾರಿ ಮಾರ್ಗಗಳ ನಿರ್ಮಾಣ, ಪಾದಚಾರಿ ಕ್ರಾಸಿಂಗ್‌ಗಳ ಅಳವಡಿಕೆ ಸೇರಿದಂತೆ ಸಮಗ್ರ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು. ಮಹದೇವಪುರ ವಲಯ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳಲ್ಲಿ ಸಮರ್ಪಕವಾಗಿ ಹೂಳೆತ್ತಬೇಕು. ಇನ್ನು ರಾಜಕಾಲುವೆಗಳು ಒತ್ತುವರಿಯಾಗಿರುವುದನ್ನು ಗಮನಿಸುವ ಸಲುವಾಗಿ ಡ್ರೋನ್ ಮೂಲಕ ಸಮೀಕ್ಷೆ ಮಾಡಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಮುಖ್ಯ ಅಭಿಯಂತರ ರಂಗನಾಥ್, ಕಾರ್ಯಪಾಲಕ ಅಭಿಯಂತರರಾದ ಉದಯ್ ಚೌಗುಲೆ, ರಾಘವೇಂದ್ರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಅಧಿಕಾರಿಗಳು ಇದ್ದರು.

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್

TEJAS NETWORKS

ಕಾರ್ಪೊರೇಟ್ ಐಡೆಂಟಿಟಿ ನಂಬರ್: L72900KA2000PLC026980
ನೋಂದಾಯಿತ ಕಛೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17 & 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು–560 100, ಕರ್ನಾಟಕ, ದೂರವಾಣಿ: +91–80–4179 4600 ಫ್ಯಾಕ್ಸ್: +91–80–2852 0201
ವೆಬ್‌ಸೈಟ್: www.tejasnetworks.com | ಇಮೇಲ್: corporate@tejasnetworks.com

25ನೇ ವಾರ್ಷಿಕ ಸದಸ್ಯರ ಸಭೆ, ವಿ–ಮತದಾನದ ಮಾಹಿತಿ ಮತ್ತು ಸದಸ್ಯರ ನೋಂದಣಿ ಪುಸ್ತಕ ಮುಚ್ಚುವಿಕೆ ಮತ್ತು ದಾಖಲೆ ದಿನಾಂಕ ಸೂಚನೆ

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್‌ನ ("ಕಂಪೆನಿ") ಷೇರುದಾರರ 25ನೇ ವಾರ್ಷಿಕ ಸದಸ್ಯರ ಸಭೆಯು (ಎಜಿಎಂ) ಶುಕ್ರವಾರ, ಜೂನ್ 27, 2025 ರಂದು ಮಧ್ಯಾಹ್ನ 3.00 ಗಂಟೆಗೆ (ಭಾರತೀಯ ಕಾಲಮಾನ) ವೀಡಿಯೊ–ಕಾನ್ಫರೆನ್ಸ್ (ವಿಸಿ) / ಅದರ್ ಆಡಿಯೋ ವಿಷುಯಲ್ ಮೀನ್ಸ್ (ಒಎವಿಎಂ) ಮೂಲಕ ಎಜಿಎಂನ ಸೂಚನೆಯಲ್ಲಿ ನಿಗದಿಪಡಿಸಲಾದ ವ್ಯವಹಾರಗಳನ್ನು ನಡೆಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ") ಮತ್ತು ಸೆಕ್ಯುರಿಟೀಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಷೇರುದಾರರಿಗೆ ವಾರ್ಷಿಕ ವರದಿ ಮತ್ತು ಸಭೆಯ ಸೂಚನೆಯ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯತೆಯ ಬಗ್ಗೆ ವಿನಾಯಿತಿಯನ್ನು ತಮ್ಮ ಸುತ್ತೋಲೆಗಳ ಮೂಲಕ ನೀಡಿದೆ. ಆದ್ದರಿಂದ, ಕಂಪೆನಿಯೊಂದಿಗೆ / ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ) / ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) (ಡಿಪಿ) ನಲ್ಲಿ ನೋಂದಾಯಿಸಿದ ಷೇರುದಾರರಿಗೆ ಮಾತ್ರ ಎಲೆಕ್ಟ್ರಾನಿಕ್ ಮೋಡ್ ಮೂಲಕ ಕಂಪೆನಿಯ ಆರ್ಥಿಕ ವರ್ಷ 2024–2025ರ ವಾರ್ಷಿಕ ವರದಿಯೊಂದಿಗೆ 25ನೇ ಎಜಿಎಂನ ಸೂಚನೆಯ ಲಿಂಕ್ ಅನ್ನು ಬುಧವಾರ, ಜೂನ್ 03, 2025ರಂದು ಕಳುಹಿಸಿದೆ. ಕಂಪೆನಿ / ಆರ್‌ಟಿಎ / ಡೆಪಾಸಿಟರಿಗಳಲ್ಲಿ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸದ ಷೇರುದಾರರಿಗೆ, 2024–25ರ ವಾರ್ಷಿಕ ವರದಿಯ ವೆಬ್‌ಲಿಂಕ್‌ನೊಂದಿಗೆ ಪ್ರತ್ಯೇಕ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗುತ್ತಿದೆ.

ಆರ್ಥಿಕ ವರ್ಷ 2024–2025ರ ವಾರ್ಷಿಕ ವರದಿಯೊಂದಿಗೆ 25ನೇ ಎಜಿಎಂನ ಸೂಚನೆಯನ್ನು ಕಂಪೆನಿಯ ವೆಬ್‌ಸೈಟ್ https://www.tejasnetworks.com/wp-content/uploads/2025/06/tejas-networks-annual-report-2024-2025.pdf ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಅಂದರೆ, ಬಿಎಸ್‌ಇ ಲಿಮಿಟೆಡ್‌ನ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ನಲ್ಲಿ ಪ್ರವೇಶಿಸುವ ಮೂಲಕ ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ವೆಬ್‌ಸೈಟ್ https://www.evoting.nsdl.com ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಭೆಯ ಸೂಚನೆಯಲ್ಲಿ ಸೂಚಿಸಿದಂತೆ ಷೇರುದಾರರು ವಿಸಿ/ಒಎವಿಎಂ ಸೌಲಭ್ಯದ ಮೂಲಕ ಮಾತ್ರ ಎಜಿಎಂನಲ್ಲಿ ಭಾಗವಹಿಸಬಹುದು ಕಂಪೆನಿಯ 25ನೇ ಎಜಿಎಂನಲ್ಲಿ ವೈಯಕ್ತಿಕವಾಗಿ ಹಾಜರಾಗಲು ಮತ್ತು ಭಾಗವಹಿಸಲು ಯಾವುದೇ ಅವಕಾಶವಿರುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಕಂಪೆನಿಗಳ ಕಾಯ್ದೆ, 2013 ಸೆಕ್ಷನ್ 108ರ ಪ್ರಕಾರ ಜೊತೆಗೆ ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮ 20, ನಿಯಮಗಳು, 2014 ಮತ್ತು ಸೆಬಿಯ ನಿಯಮ 44 (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳು 2015 ಅನ್ನು ಓದಿಕೊಂಡಂತೆ ಮತ್ತು ಕಾನೂನಿನಂತೆ ಅನ್ವಯವಾಗುವ ಇತರೆ ನಿಯಮಗಳಂತೆ ಕಂಪೆನಿಯು ಷೇರುದಾರರಿಗೆ ತಮ್ಮ ಮತದಾನದ ಹಕ್ಕನ್ನು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ (ಎಜಿಎಂ ಮೊದಲು ರಿಮೋಟ್ ಇ–ವೋಟಿಂಗ್ ಅಥವಾ ಎಜಿಎಂ ಸಮಯದಲ್ಲಿ ಇ–ವೋಟಿಂಗ್) ಎಜಿಎಂ ನಲ್ಲಿ ವ್ಯವಹರಿಸುವ ಕುರಿತಾದ ಸೌಲಭ್ಯವನ್ನು ಒದಗಿಸಲು ಉತ್ಸುಕವಾಗಿದೆ ಮತ್ತು ಈ ಉದ್ದೇಶಕ್ಕಾಗಿ, ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮತದಾನ ಮಾಡಲು ಅನುಕೂಲವಾಗುವನ್ನು ಒದಗಿಸಲು ಕಂಪೆನಿಯು ಎನ್‌ಎಸ್‌ಡಿಎಲ್ ಅವರ ಸೇವೆಯನ್ನು ಪಡೆಯುತ್ತದೆ.

ಕಂಪೆನಿಯು ಎನ್‌ಎಸ್‌ಡಿಎಲ್ ನ ಇ–ವೋಟಿಂಗ್ ವ್ಯವಸ್ಥೆಯ ಮೂಲಕ https://www.evoting.nsdl.com ವಿಸಿ/ಒಎವಿಎಂ ಮೂಲಕ ಎಜಿಎಂ ಗೆ ಹಾಜರಾಗುವ ಸೌಲಭ್ಯವನ್ನು ಒದಗಿಸುತ್ತಿದೆ. ಷೇರುದಾರರು ವಿಸಿ/ಒಎವಿಎಂ ಮೂಲಕ ಎಜಿಎಂ ನಲ್ಲಿ ಭಾಗವಹಿಸಬಹುದು ಮತ್ತು ಡಿಮೆಟೀರಿಯಲೈಸ್ಡ್ ಮೋಡ್, ಫಿಸಿಕಲ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಹಾಗೂ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಷೇರುದಾರರಿಗೆ ಸದೂರ ಮತ ಚಲಾಯಿಸುವ (ರಿಮೋಟ್ ವೋಟಿಂಗ್) ವಿಧಾನವನ್ನು ಷೇರುದಾರರಿಗೆ ನೋಟಿಸ್‌ನಲ್ಲಿ ಒದಗಿಸಲಾಗಿದೆ. ಭೌತಿಕ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವವರು ಷೇರುದಾರರು ಕಟ್–ಆಫ್ ದಿನಾಂಕದಂದು (ಅಂದರೆ) ಜೂನ್ 20, 2025 ರಂದು ತಮ್ಮ ಮತಗಳನ್ನು ವಿದ್ಯುನ್ಮಾನವಾಗಿ ಎನ್‌ಎಸ್‌ಡಿಎಲ್ ನ ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆಯ ಮೂಲಕ ('ರಿಮೋಟ್ ಇ–ಮತದಾನ') ಎಜಿಎಂ ನ ಸೂಚನೆಯಲ್ಲಿ ನಿಗದಿಪಡಿಸಿದಂತೆ ವ್ಯವಹರಿಸಿ ಚಲಾಯಿಸಬಹುದು.

ಲಾಭಾಂಶ ಪಾವತಿ:

ಶುಕ್ರವಾರ, ಏಪ್ರಿಲ್ 25, 2025 ರಂದು ನಡೆದ ಕಂಪೆನಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಾರ್ಚ್ 31, 2025ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಸಂಪೂರ್ಣವಾಗಿ ಪಾವತಿಸಲಾದ ₹10 ಮುಖಬೆಲೆಯ ಪ್ರತಿ ಈಕ್ವಿಟಿ ಷೇರಿಗೆ ₹2.50 ರಂತೆ ಲಾಭಾಂಶವನ್ನು ಪಾವತಿಸಲು ಅನುಮೋದನೆ ನೀಡಿದೆ ಮತ್ತು ಶಿಫಾರಸು ಮಾಡಿದೆ ಎಂಬುದನ್ನು ಷೇರುದಾರರು ಗಮನಿಸಬಹುದು, ಇದು ಕಂಪೆನಿಯ ಮುಂದಿನ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ. ಜೂನ್ 27, 2025 ರಂದು ನಡೆಯಲಿರುವ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರು ಅನುಮೋದಿಸಿದರೆ, ಲಾಭಾಂಶವನ್ನು ದಾಖಲೆ ದಿನಾಂಕ ಅಂದರೆ ಜೂನ್ 19, 2025 ರಂದು ಸದಸ್ಯರ ನೋಂದಣಿ ಅಥವಾ ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಹೆಸರು ಇರುವ ಷೇರುದಾರರಿಗೆ ಪಾವತಿಸಲಾಗುತ್ತದೆ.

ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ನವೀಕರಿಸಿದ ಷೇರುದಾರರಿಗೆ ವಿವಿಧ ಆನ್‌ಲೈನ್ ವರ್ಗಾವಣೆ ವಿಧಾನಗಳ ಮೂಲಕ ಎಲೆಕ್ಟ್ರಾನಿಕ್ ರೂಪದಲ್ಲಿ ಲಾಭಾಂಶವನ್ನು ಪಾವತಿಸಲಾಗುತ್ತದೆ. ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ನವೀಕರಿಸದ ಷೇರುದಾರರಿಗೆ, ಲಾಭಾಂಶ ವಾರಂಟ್‌ಗಳು/ಡಿಮಾಂಡ್ ಡ್ರಾಫ್ಟ್‌ಗಳು/ಲಾಭಾಂಶ ಇನ್‌ಸ್ಟ್ರುಮೆಂಟ್‌ಗಳ ಸೂಚನೆಯನ್ನು ಸರಿಯಾದ ಸಮಯದಲ್ಲಿ ಅವರ ನೋಂದಾಯಿತ ವಿಳಾಸಕ್ಕೆ ಕಳುಹಿಸಲಾಗುತ್ತದೆ.

ಷೇರುದಾರರಿಗೆ ತಿಳಿದಿರುವಂತೆ, **ಆದಾಯ ತೆರಿಗೆ ಕಾಯ್ದೆ, 1961** ("ಐಟಿ ಕಾಯ್ದೆ") ಪ್ರಕಾರ, **ಹಣಕಾಸು ಕಾಯ್ದೆ, 2020**ರ ತಿದ್ದುಪಡಿ ಮಾಡಿದಂತೆ **ಏಪ್ರಿಲ್ 1, 2020**ರ ನಂತರ ಕಂಪೆನಿಯು ಪಾವತಿಸಿದ ಅಥವಾ ವಿತರಿಸಿದ ಲಾಭಾಂಶವು ಷೇರುದಾರರ ಕೈಯಲ್ಲಿ ತೆರಿಗೆಗೆ ಒಳಪಡುತ್ತದೆ ಮತ್ತು ಕಂಪೆನಿಯು ಲಾಭಾಂಶದಿಂದ ನಿಗದಿತ ದರಗಳಲ್ಲಿ ಮೂಲದಲ್ಲಿ ತೆರಿಗೆಯನ್ನು ("ಟಿಡಿಎಸ್") ಕಡಿತಗೊಳಿಸಬೇಕಾಗುತ್ತದೆ. ಟಿಡಿಎಸ್ ದರವು ಷೇರುದಾರರ ವಸತಿ ಸ್ಥಿತಿ ಮತ್ತು ಅವರು ಸಲ್ಲಿಸಿದ ಮತ್ತು ಕಂಪೆನಿಯು ಅಂಗೀಕರಿಸಿದ ದಾಖಲೆಗಳನ್ನು ಅವಲಂಬಿಸಿ ಬದಲಾಗುತ್ತದೆ.

ಈ ನಿಟ್ಟಿನಲ್ಲಿ, **ಮೇ 12, 2025** ರಂದು ಷೇರುದಾರರಿಗೆ ಪ್ರತ್ಯೇಕ ಇಮೇಲ್ ಸಂವಹನವನ್ನು ಕಳುಹಿಸಲಾಗಿದ್ದು, ಅನ್ವಯವಾಗುವ ತೆರಿಗೆ ದರವನ್ನು ಪಡೆಯಲು ಅವರು ಅಳವಡಿಸಿಕೊಳ್ಳಬೇಕಾದ ಸಂಬಂಧಿತ ಕಾರ್ಯವಿಧಾನವನ್ನು / ಸಲ್ಲಿಸಬೇಕಾದ ದಾಖಲೆಗಳನ್ನು ಅವರಿಗೆ ತಿಳಿಸಲಾಯಿತು. ಅನ್ವಯವಾಗುವ ತೆರಿಗೆ ದರಗಳನ್ನು ಪಡೆಯಲು ಅಗತ್ಯವಿರುವ ವಿವರವಾದ ತೆರಿಗೆ ದರಗಳು, ವಿನಾಯಿತಿ ನಮೂನೆಗಳು ಮತ್ತು ಇತರ ದಾಖಲೆಗಳೊಂದಿಗೆ ಹೇಳಲಾದ ಸಂವಹನವು ಕಂಪೆನಿಯ ವೆಬ್‌ಸೈಟ್ https://www.tejasnetworks.com/disclosures/ ನಲ್ಲಿ ಲಭ್ಯವಿದೆ.

ಷೇರುದಾರರು ಆದಾಯ ತೆರಿಗೆ ಕಾಯ್ದೆಯ ಅನ್ವಯವಾಗುವ ನಿಬಂಧನೆಗಳಿಗೆ ಅನುಗುಣವಾಗಿ ಈ ದಾಖಲೆಗಳನ್ನು ಸಲ್ಲಿಸಲು ವಿನಂತಿಸಲಾಗಿದೆ.

ಇಮೇಲ್ ನೋಂದಣಿ ಮತ್ತು ಬ್ಯಾಂಕ್ ಖಾತೆಯ ನವೀಕರಣ:

2024–25ರ ಹಣಕಾಸು ವರ್ಷದ ಕಂಪೆನಿಯ ವಾರ್ಷಿಕ ವರದಿ ಮತ್ತು ಲಾಭಾಂಶವನ್ನು ಸ್ವೀಕರಿಸಲು ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಲು ಮತ್ತು/ಅಥವಾ ಬ್ಯಾಂಕ್ ಖಾತೆಯ ಆದೇಶವನ್ನು ನವೀಕರಿಸಲು ಬಯಸುವ ಷೇರುದಾರರು ಈ ಕೆಳಗಿನ ಸೂಚನೆಗಳನ್ನು ಅನುಸರಿಸಲು ವಿನಂತಿಸಲಾಗಿದೆ:

ಎ. ಎಲೆಕ್ಟ್ರಾನಿಕ್ ವಿಧಾನದಲ್ಲಿ ಹೊಂದಿರುವ ಷೇರುಗಳಿಗೆ:

ನಿಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ ಅವರು ಸೂಚಿಸಿದ ಪ್ರಕ್ರಿಯೆಯ ಪ್ರಕಾರ ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ವಿವರಗಳನ್ನು ನೋಂದಾಯಿಸಿ/ನವೀಕರಿಸಿ; ಮತ್ತು

ಬಿ. ಭೌತಿಕ ವಿಧಾನದಲ್ಲಿ ಹೊಂದಿರುವ ಷೇರುಗಳಿಗೆ:

ಮೇ 7, 2024 ರಂದು ಸೆಬಿ ಯಿಂದ ಹೊರಡಿಸಲಾದ ಮಾಸ್ಟರ್ ಸುತ್ತೋಲೆ ಸಂಖ್ಯೆ SEBI/HO/MIRSD/POD-1/P/CIR/2024/37ರ ನಿಬಂಧನೆಗಳ ಪ್ರಕಾರ, ಜೂನ್ 10, 2024 ರಂದು ಹೊರಡಿಸಲಾದ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/POD-1/P/CIR/2024/81ರ ನಿಬಂಧನೆಗಳ ಪ್ರಕಾರ, ಭೌತಿಕ ವಿಧಾನದಲ್ಲಿ ಷೇರುಗಳನ್ನು ಹೊಂದಿರುವ ಎಲ್ಲಾ ಷೇರುದಾರರು ತಮ್ಮ ಅನುಗುಣವಾದ ಫೋಲಿಯೊ ಸಂಖ್ಯೆಗಳಿಗೆ ಪ್ಯಾನ್, ಸಂಪರ್ಕ ವಿವರಗಳು (ಪಿನ್ ಮತ್ತು ಮೊಬೈಲ್ ಸಂಖ್ಯೆಯೊಂದಿಗೆ ಅಂಚೆ ವಿಳಾಸ), ಬ್ಯಾಂಕ್ ಖಾತೆ ವಿವರಗಳು ಮತ್ತು ಮಾದರಿ ಸಹಿಯನ್ನು ಒದಗಿಸುವುದು ಕಡ್ಡಾಯವಾಗಿದೆ ಎಂಬುದನ್ನು ಷೇರುದಾರರು ಗಮನಿಸಲು ವಿನಂತಿಸಲಾಗಿದೆ.

ಷೇರುದಾರರು ನಿಗದಿತ ನಮೂನೆ ಐಎಸ್‌ಆರ್–1 ಮತ್ತು ಇತರ ಸಂಬಂಧಿತ ನಮೂನೆಗಳಲ್ಲಿ ಕಂಪೆನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("ಆರ್‌ಟಿಎ") ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಹಿಂದೆ ಲಿಂಕ್ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) ನಲ್ಲಿ ನೋಂದಾಯಿಸಿಕೊಳ್ಳಬಹುದು/ನವೀಕರಿಸಬಹುದು. ಇದಲ್ಲದೆ, ಷೇರುದಾರರು ಕಂಪೆನಿಯ ವೆಬ್‌ಸೈಟ್ https://www.tejasnetworks.com/investor-relations/ ನಲ್ಲಿ ಸಂಬಂಧಿತ ನಮೂನೆಗಳನ್ನು ಬಳಸಿಕೊಳ್ಳಬಹುದು.

ಇದಲ್ಲದೆ, ಸದರಿ ವಿವರಗಳನ್ನು ನೋಂದಾಯಿಸದ ಸಂಬಂಧಿತ ಫೋಲಿಯೊಗಳು ಏಪ್ರಿಲ್ 1, 2024ರಿಂದ ಜಾರಿಗೆ ಬರುವಂತೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮಾತ್ರ ಲಾಭಾಂಶ ಸೇರಿದಂತೆ ಯಾವುದೇ ಪಾವತಿಗೆ ಅರ್ಹರಾಗಿರುತ್ತಾರೆ. ಕಂಪೆನಿಯಲ್ಲಿ ವಿವರಗಳನ್ನು ನೋಂದಾಯಿಸದ ಷೇರುದಾರರಿಗೆ ಅವರ ಪಾವತಿ ಬಾಕಿ ಇದೆ ಮತ್ತು ತಡೆಹಿಡಿಯಲಾಗಿದೆ ಎಂದು ಸೂಚನೆಯನ್ನು ಕಳುಹಿಸುತ್ತದೆ. ಮುಂದುವರೆದು, ಮೇಲೆ ತಿಳಿಸಿದ ಅಗತ್ಯ ವಿವರಗಳನ್ನು ನೋಂದಾಯಿಸಿದ ನಂತರ ಮಾತ್ರ ಅದನ್ನು ಎಲೆಕ್ಟ್ರಾನಿಕ್ ವಿಧಾನದಲ್ಲಿ ಬಿಡುಗಡೆ ಮಾಡಲಾಗುತ್ತದೆ.

ಪರ್ಯಾಯವಾಗಿ, ನೀವು https://web.in.mpms.mufg.com/EmailReg/Email_Register.html ಲಿಂಕ್‌ಗೆ ಭೇಟಿ ನೀಡಿ, ತಾತ್ಕಾಲಿಕವಾಗಿ ನಿಮ್ಮ ಇಮೇಲ್ ವಿಳಾಸವನ್ನು ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್‌ನೊಂದಿಗೆ ಜೂನ್ 19, 2025 ರಂದು ಸಂಜೆ 5:00 ಗಂಟೆಗೆ ಭಾರತೀಯ ಕಾಲಮಾನ ಅಥವಾ ಅದಕ್ಕಿಂತ ಮೊದಲು ನೋಂದಾಯಿಸಿಕೊಳ್ಳುವ ಮೂಲಕ 2024–25ರ ಹಣಕಾಸು ವರ್ಷದ ವಾರ್ಷಿಕ ವರದಿಯ ಸ್ವೀಕೃತಿಯನ್ನು ಖಚಿತಪಡಿಸಿಕೊಳ್ಳಬಹುದು.

ಮೇಲಿನ ಮಾಹಿತಿಯನ್ನು ಕಂಪೆನಿಯ ಎಲ್ಲಾ ಷೇರುದಾರರ ಮಾಹಿತಿ ಪ್ರಯೋಜನಕ್ಕಾಗಿ ನೀಡಲಾಗುತ್ತಿದೆ ಮತ್ತು ಅನ್ವಯವಾಗುವ ಎಂಸಿಎ ಮತ್ತು ಸೆಬಿ ಸುತ್ತೋಲೆಗಳಿಗೆ ಅನುಗುಣವಾಗಿದೆ.

ಷೇರುದಾರರುಗಳಿಗೆ ಸೂಚಿಸುವುದೇನೆಂದರೆ:

i. ವಾರ್ಷಿಕ ಸದಸ್ಯರ ಸಭೆಯ ಸೂಚನೆಯಲ್ಲಿ ತಿಳಿಸಿರುವಂತೆ ಸದೂರ ವಿ–ಮತದಾನ ಅಥವಾ ಎಜಿಎಂನಲ್ಲಿ ವಿ–ಮತದಾನ ಮೂಲಕ ಮತಚಲಾಯಿಸಿ ವ್ಯವಹರಿಸಬಹುದಾಗಿರುತ್ತದೆ.

ii. ಸದೂರ ವಿ–ಮತದಾನವು (ರಿಮೋಟ್ ಇ–ವೋಟಿಂಗ್) ಜೂನ್ 23, 2025 ರಂದು ಬೆಳಿಗ್ಗೆ 9:00 ಗಂಟೆ (ಭಾರತೀಯ ಕಾಲಮಾನ)ಗೆ ಪ್ರಾರಂಭವಾಗುವುದು ಮತ್ತು ಜೂನ್ 26, 2025 ರಂದು ಸಂಜೆ 5:00 ಗಂಟೆ (ಭಾರತೀಯ ಕಾಲಮಾನ)ಗೆ ಮುಕ್ತಾಯಗೊಳ್ಳುವುದು. ಸದೂರ ವಿ–ಮತದಾನ ವ್ಯವಸ್ಥೆಯನ್ನು ಜೂನ್ 26, 2025 ರಂದು ಸಂಜೆ 5:00 ಗಂಟೆಗೆ (ಭಾರತೀಯ ಕಾಲಮಾನ) ಎನ್‌ಎಸ್‌ಡಿಎಲ್ ಅವರಿಂದ ನಿಷ್ಕ್ರಿಯಗೊಳಿಸಲಾಗುವುದು.

iii. ವಾರ್ಷಿಕ ಸದಸ್ಯರ ಸಭೆಯ ಸೂಚನಾ ಪತ್ರ ರವಾನೆಯಾದ ನಂತರ ಕಂಪೆನಿಯ ಷೇರುಗಳನ್ನು ಪಡೆದು, ಕಂಪೆನಿಯ ಷೇರುದಾರರಾದ ಯಾವುದೇ ವ್ಯಕ್ತಿ ನಿರ್ಣಾಯಕ ದಿನಾಂಕವಾದ ಅಂದರೆ ಜೂನ್ 20, 2025 ರಂದು ಷೇರುಗಳನ್ನು ಹೊಂದಿದ್ದಲ್ಲಿ, ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು evoting@nsdl.co.in ಇಲ್ಲಿಗೆ ಮನವಿ ಸಲ್ಲಿಸಿ ಪಡೆದುಕೊಳ್ಳಬಹುದು. ಅದಾಗ್ಯೂ ಯಾವುದೇ ವ್ಯಕ್ತಿ ಈಗಾಗಲೇ ಎನ್‌ಎಸ್‌ಡಿಎಲ್‌ನಲ್ಲಿ ವಿ–ಮತದಾನಕ್ಕೆ ನೋಂದಾಯಿಸಿದ್ದಲ್ಲಿ, ತಮ್ಮ ಹಾಲಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಪಯೋಗಿಸಿ ಮತ ಚಲಾಯಿಸಬಹುದಾಗಿರುತ್ತದೆ.

iv. ಷೇರುದಾರರ ಗಮನಕ್ಕೆ: (1) ಒಮ್ಮೆ ಠರಾವಿನ ಮೇಲೆ ಷೇರುದಾರರು ಸದೂರ ವಿ–ಮತದಾನದ ಮೂಲಕ ಮತ ಚಲಾಯಿಸಿದ ತರುವಾಯ ಅದನ್ನು ಬದಲಿಸುವ ಅವಕಾಶವಿರುವುದಿಲ್ಲ. (2) ಎಜಿಎಂನಲ್ಲಿ ಮತ ಚಲಾಯಿಸುವ ವ್ಯವಸ್ಥೆಯನ್ನು ಸಹ ಮಾಡಲಾಗಿದೆ ಹಾಗೂ ಯಾವ ಷೇರುದಾರರು ಸದೂರ ವಿ–ಮತದಾನದ ಮೂಲಕ ಠರಾವಿನ ಮೇಲೆ ಮತ ಚಲಾಯಿಸಿರುವುದಿಲ್ಲವೋ ಅಂತಹ ಷೇರುದಾರರು ವಿಸಿ ವ್ಯವಸ್ಥೆಯ ಮೂಲಕ ಎಜಿಎಂನಲ್ಲಿ ಭಾಗವಹಿಸಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. (3) ಎಜಿಎಂನ ಮೊದಲು ಸದೂರ ವಿ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಿದ ಷೇರುದಾರರು ಸಹ ಎಜಿಎಂನಲ್ಲಿ ಭಾಗವಹಿಸಬಹುದು. ಆದರೆ, ಪುನಃ ತಮ್ಮ ಮತಗಳನ್ನು ಚಲಾಯಿಸಲು ಅರ್ಹರಿರುವುದಿಲ್ಲ. (4) ನಿರ್ಣಾಯಕ ದಿನಾಂಕದಂತೆ ಸದಸ್ಯರ ನೋಂದಣಿ ದಸ್ತಾವೇಜಿನಲ್ಲಿ ಹೆಸರು ದಾಖಲಿಸಿರುವ ಷೇರುದಾರರು ಅಥವಾ ಡೆಪಾಸಿಟರೀಸ್‌ರಿಂದ ನಿರ್ವಹಿಸಲ್ಪಟ್ಟ ಫಲಾನುಭವಿ ಮಾಲೀಕರ ಪುಸ್ತಕದಲ್ಲಿ ಹೆಸರು ದಾಖಲಿಸಿರುವವರು ಸದೂರ ವಿ–ಮತದಾನ ಅಥವಾ ಎಜಿಎಂನಲ್ಲಿ ವಿ–ಮತದಾನದ ಸೌಲಭ್ಯವನ್ನು ಪಡೆದುಕೊಳ್ಳುವರು.

v. ಡಿಮೆಟೀರಿಯಲೈಸ್ಡ್ ಮೋಡ್, ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ ಮತ್ತು ಅವರ ಇಮೇಲ್ ವಿಳಾಸಗಳನ್ನು ನೋಂದಾಯಿಕೊಳ್ಳದ ಷೇರುದಾರರಿಗೆ ದೂರದಿಂದಲೇ ಮತದಾನ ಮಾಡುವ ವಿಧಾನವನ್ನು ಷೇರುದಾರರಿಗೆ ಕಳುಹಿಸಲಾದ ಎಜಿಎಂ ನೋಟಿಸ್‌ನಲ್ಲಿ ಒದಗಿಸಲಾಗಿದೆ.

vi. ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಳ್ಳದ ಷೇರುದಾರರು ತಮ್ಮ ಇಮೇಲ್ ವಿಳಾಸಗಳನ್ನು ಸಂಬಂಧಪಟ್ಟ ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) ಅವರೊಂದಿಗೆ ನೋಂದಾಯಿಸಿಕೊಳ್ಳಲು ಕೋರಲಾಗಿದೆ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಕಂಪೆನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್, ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ rnt.helpdesk@in.mpms.mufg.com ನೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ಪರಿಗಣಿಸಿ ನವೀಕರಿಸಲು ಕೋರಿದ್ದು, ಈ ಮೂಲಕ 25ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ, ಸದೂರ ವಿ–ಮತದಾನದ ಸೂಚನೆಗಳು ಮತ್ತು ವಿಸಿ ಮೂಲಕ ಎಜಿಎಂನಲ್ಲಿ ಭಾಗವಹಿಸುವ ಸೂಚನೆಗಳೊಂದಿಗೆ 2024–25ರ ವಾರ್ಷಿಕ ವರದಿಯ ಪ್ರತಿಯನ್ನು ಪಡೆದುಕೊಳ್ಳಬಹುದು.

vii. ಒಂದೊಮ್ಮೆ ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು ಷೇರುದಾರರ ಫ್ರೀಕ್ವೆಂಟ್ಲಿ ಆಸ್ಕ್‌ಡ್ ಕ್ವಶ್ಚನ್ಸ್ (FAQs) ವಿಭಾಗವನ್ನು ಮತ್ತು ಷೇರುದಾರರ ವಿ–ಮತದಾನ ಬಳಕೆದಾರರ ಕೈಪಿಡಿಯ ಡೌನ್‌ಲೋಡ್ ವಿಭಾಗದಲ್ಲಿ www.evoting.nsdl.com ಪಡೆದುಕೊಳ್ಳಬಹುದು ಅಥವಾ ಟೋಲ್ ಫ್ರೀ ನಂ.: 1800 1020 990 ಮತ್ತು 1800 22 44 30 ಅಥವಾ evoting@nsdl.co.in ಗೆ ಮನವಿಯನ್ನು ಕಳುಹಿಸುವುದು ಅಥವಾ ಶ್ರೀ ಅಶೋಕ್ ಶೇರುಗಾರ್, ಎವಿಪಿ – ಟೆಕ್ನಾಲಜಿ ಗ್ರೂಪ್, ಎಂಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈ. ಲಿ., ಸಿ 101, 247 ಪಾರ್ಕ್, ಎಲ್.ಬಿ.ಎಸ್. ಮಾರ್ಗ್, ವಿಕ್ರೋಲಿ (ಪಶ್ಚಿಮ), ಮುಂಬೈ – 400 083, ದೂ. ನಂ.: +91 22 49186000 ಮತ್ತು ಇ–ಮೇಲ್ ಐಡಿ: ashok.sherugar@in.mpms.mufg.com ಮೂಲಕ ಇವರನ್ನೂ ಸಹ ಸಂಪರ್ಕಿಸಿ ಎಲೆಕ್ಟ್ರಾನಿಕ್ ವಿಧಾನದ ಮತದಾನಕ್ಕೆ ಸಂಬಂಧಿಸಿದ ಕುಂದುಕೊರತೆಗಳ ಕುರಿತಾಗಿ ತಿಳಿಯಬಹುದು.

viii. ವಾರ್ಷಿಕ ಸದಸ್ಯರ ಸಭೆಯ ಉದ್ದೇಶದಿಂದ ಕಂಪೆನಿಯ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕಗಳು ಜೂನ್ 20, 2025 ರಿಂದ ಜೂನ್ 27, 2025ರ ವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಲ್ಪಟ್ಟಿರುತ್ತವೆ.

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಅನಂತ ಮೂರ್ತಿ ಎನ್.
ಕಂಪೆನಿ ಕಾರ್ಯದರ್ಶಿ ಮತ್ತು ಕಂಪ್ಲೈಯನ್ಸ್ ಅಧಿಕಾರಿ
ICSI ಸದಸ್ಯತ್ವ ಸಂಖ್ಯೆ: ACS 17134

ಸ್ಥಳ : ಬೆಂಗಳೂರು
ದಿನಾಂಕ : ಜೂನ್ 3, 2025

ಸಿಸಿಬಿ ದಾಳಿ: 61.82 ಲಕ್ಷ ರು. ಮೌಲ್ಯದ ತಂಬಾಕು ವಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗೋಡೌನ್‌ವೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿ ಇಬ್ಬರನ್ನು ಬಂಧಿಸಿ 61.82 ಲಕ್ಷ ರು. ಮೌಲ್ಯದ ತಂಬಾಕು, ನಿಕೋಟಿನ್ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ. ತಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕನಕಪುರ ಮುಖ್ಯ ರಸ್ತೆಯಲ್ಲಿರುವ ಗೋಡೌನ್ ಒಂದರಲ್ಲಿ ನಿಷೇಧಿತ ತಂಬಾಕು, ನಿಕೋಟಿನ್ ಒಳಗೊಂಡ ಪದಾರ್ಥಗಳನ್ನು ಅಕ್ರಮವಾಗಿ ಸಂಗ್ರಹ ಮಾಡಿಕೊಂಡು ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಪೊಲೀಸರಿಗೆ ಲಭಿಸಿದೆ. ಈ ಮಾಹಿತಿ ಆಧರಿಸಿದ ಪೊಲೀಸರು ಗೋಡೌನ್ ಮೇಲೆ ದಾಳಿ ಮಾಡಿ ಇಬ್ಬರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಅವರ ಬಳಿ ಯಾವುದೇ ಪರವಾನಿಗಿ ಇಲ್ಲ ಎಂಬುವುದು ಗೊತ್ತಾಗಿದೆ. ಗೋಡೌನ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 61.82 ಲಕ್ಷ ರು. ಮೌಲ್ಯದ ಗಣೇಶ್ 701 ಟೊಬ್ಯಾಕೋ ಪ್ಯಾಕೇಟ್, ಕೂಲ್ ಲಿಪ್ ಟೊಬ್ಯಾಕೋ ಇರುವ 160 ಚೀಲ, ಎಸ್‌ಜಿಟಿ–1 ಟೊಬ್ಯಾಕೋ ಇರುವ 60 ಬಾಕ್ಸ್‌ಗಳು, ಸ್ವಾಗಟ ಪಾನ್ ಮಾಸಾಲಾ 60 ಬಾಕ್ಸ್ ಹಾಗೂ ಂದು ಗೂಡ್ಸ್ ವಾಹನವನ್ನು ಸಿಸಿಬಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಇ ಸಿಗರೇಟ್, ವಿದೇಶಿ ಸಿಗರೇಟ್ ವಶ: ಕಾನೂನು ಬಾಹಿರವಾಗಿ ನಿಷೇಧಿತ ಇ–ಸಿಗರೇಟ್ ಮಾರಾಟ ಮಾಡುತ್ತಿದ್ದ ಆರೋಪಿಯೊಬ್ಬನನ್ನು ಸಿಸಿಬಿ ಪೊಲೀಸರು ಬಂಧಿಸಿ 70 ಸಾವಿರ ಬೆಲೆಯ ಇ–ಸಿಗರೇಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

21.19 ಲಕ್ಷ ರು. ದಂಡ ವಸೂಲಿ

ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ನಗರ ಪೊಲೀಸರು ನಗರದಾದ್ಯಂತ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ವಿಶೇಷ ಅಭಿಯಾನದಲ್ಲಿ ಒಟ್ಟಾರೆ 11,507 ಪ್ರಕರಣ ದಾಖಲಿಸಿ 21.19 ಲಕ್ಷ ರು. ದಂಡ ವಸೂಲಿ ಮಾಡಿದ್ದಾರೆ. ನಾಗರಿಕರಿಗೆ ಆರೋಗ್ಯಕರ ಸುರಕ್ಷಿತ ಜೀವನ ಮತ್ತು ಸದೃಢ ಸಮಾಜಕ್ಕಾಗಿ ತಂಬಾಕು ತ್ಯಜಿಸುವ ಕುರಿತು ಜಾಗೃತಿ ಅಭಿಯಾನಗಳನ್ನು ಕೆಗೊಳ್ಳುವ ಮೂಲಕ ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಯಿತು. ನಗರದಾದ್ಯಂತ ಬಾರ್ ಅಂಡ್ ರೆಸ್ಟೋರೆಂಟ್, ಲಾಡ್ಜ್‌ಗಳು, ಪಿಜಿಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮೇ 31 ರಿಂದ ನಿನ್ನೆಯವರೆಗೂ ವಿಶೇಷ ಕಾರ್ಯಾಚರಣೆ ಕೆಗೊಂಡಿದ್ದ ಪೊಲೀಸರು, ಕೋಟ್ಪಾ ಕಾಯಿದೆಯಡಿ 11,324 ಪ್ರಕರಣಗಳನ್ನು ದಾಖಲಿಸಿ 20.91 ಲಕ್ಷ ರು. ದಂಡ ವಸೂಲಿ ಮಾಡಿದ್ದಾರೆ. 909 ಪ್ರಕರಣಗಳಲ್ಲಿ ತನಿಖೆಯು ಪ್ರಗತಿಯಲ್ಲಿರುತ್ತದೆ. 135 ಪ್ರಕರಣಗಳಲ್ಲಿ 22,800 ರು. ದಂಡ, 48 ಪ್ರಕರಣಗಳಲ್ಲಿ 5000 ದಂಡ ವಸೂಲಿ ಮಾಡಲಾಗಿದೆ. ಒಟ್ಟು 863 ಅಧಿಕಾರಿಗಳು 254 ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಂಡಿದ್ದು, ಒಟ್ಟು 17,033 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಟೂಡೆಂಟ್ ಪೊಲೀಸ್ ಮಾರ್ಷಲ್‌ಗಳು ನೀಡುವ ಮಾಹಿತಿ ಗಂಭೀರವಾಗಿ ಪರಿಗಣಿಸಿ ನಿರಂತರ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತದೆ.

KAVVERI DEFENCE & WIRELESS TECHNOLOGIES LIMITED
(Formerly Kavveri Telecom Products Limited)

KAVVERI

Reg. Off.: No.31-36, 1st Main, 2nd Stage, Arakere Mico Layout
Bannerghatta Road, Bangalore Ka 560076,
Tel.: +9180 41215999, Website: www.kavveritelecoms.com
eMail Id: companysecretary@kavveritelecoms.com, CIN: L85110KA1996PLC019627,

AUDITED FINANCIAL RESULTS FOR THE QUARTER AND YEAR ENDED MARCH 31, 2025

The Board of Directors of the Company, at the Meeting held on May 30, 2025 approved the audited financial results of the Company for the quarter and year ended March 31, 2025. The results, along with the Auditor's Report can be accessed by scanning the QR code. The results are made available in https://kavveridefence.com.

Note: The above intimation is in accordance with Regulation 33 read with Regulation 47(1) of the SEBI (Listing Obligations & Disclosure Requirements) Regulations, 2015

On behalf of Board of Directors
For **Kavveri Defence & Wireless Technologies Limited**
(Formerly Kavveri Telecom Products Limited)

Place: Bangalore
Date: 02.06.2025

Sd/- Chennareddy Shivakumarreddy,
Managing Director, DIN: 01189348

Tracxn

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್
CIN: L72200KA2012PLC065294
ನೋಂ. ಕಚೇರಿ: ನಂ. ಎಲ್–248, 2ನೇ ಮಹಡಿ, 17ನೇ ಕ್ರಾಸ್, ಸೆಕ್ಟರ್ 6, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ–560102. ದೂ: +91 90360 90116.
ಇ–ಮೇಲ್: investor.relations@tracxn.com, ವೆಬ್‌ಸೈಟ್ : www.tracxn.com

ಅಂಚೆ ಮತಪತ್ರ ಸೂಚನೆ ಮತ್ತು ಇ–ಮತದಾನದ ಬಗ್ಗೆ ಮಾಹಿತಿ

ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಸೆಕ್ಷನ್ 108 ಮತ್ತು 110ರ ನಿಬಂಧನೆಗಳಿಗೆ ಅನುಸಾರವಾಗಿ ಕಂಪನಿಗಳ ಕಾಯಿದೆ, 2013 ("ಕಾಯಿದೆ") ನಿಯಮ 20 ಮತ್ತು 22ನ್ನು ಓದಿಕೊಂಡಂತೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ತದನಂತರ ಕಾಲಾನುಕಾಲಕ್ಕೆ ತಿದ್ದುಪಡಿಯಾದಂತೆ, ನಿಯಂತ್ರಣ 44 ರ ಸೆಬಿ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಆಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಂತ್ರಗಳು, 2015 ("ಲಿಸ್ಟಿಂಗ್ ನಿಯಂತ್ರಣಗಳು"), (ಯಾವುದಾದರೂ ಶಾಸನಬದ್ಧ ಬದಲಾವಣೆ/ಗಳು ಅಥವಾ ಕಾಯಿದೆ ಮರುಸ್ಥಾಪನೆ(ಗಳು) ಅಥವಾ ನಿಯಮಗಳು ಅಥವಾ ಲಿಸ್ಟಿಂಗ್ ನಿಯಂತ್ರಣಗಳು, ಆಯಾ ಸಂದರ್ಭಕ್ಕನ್ನುಸಾರವಾಗಿ ಯಾವುದಾದರೂ ಜಾರಿಗೊಂಡಿದ್ದಲ್ಲಿ) ಕಾಲಾನುಕಾಲಕ್ಕೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ ಸುತ್ತೋಲೆಗಳು") ದಿಂದ ಯಾವುದಾದರೂ ಸುತ್ತೋಲೆಗಳು ನೀಡಲ್ಪಟ್ಟಿರುವಂತೆ, ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ ("ಎಸ್‌ಎಸ್–2") ಸಾಮಾನ್ಯ ಸಭೆಗಳಿಗೆ ನೀಡಿದ ಸೆಕ್ರೆಟರಿಯಲ್ ಗುಣಮಟ್ಟ ಮತ್ತು ಇತರೆ ಅನ್ವಯವಾಗುವ ಯಾವುದೇ ಕಾನೂನು ಮತ್ತು ನಿಯಂತ್ರಣಗಳಂತೆ ಕಂಪನಿಯು ಸೆಕ್ಷನ್ 102ರ ಕಾಯಿದೆಯಂತೆ ಸಾಮಾನ್ಯ ಸಭೆಗಳ ಮೇಲಿನ ಅಂಚೆಮತಪತ್ರದ ಸೂಚನೆಯ ಜೊತೆಗೆ ವಿವರವಾದ ಹೇಳಿಕೆಗಳೊಂದಿಗೆ, ತಮ್ಮ ಇ–ಮೇಲ್ ವಿಳಾಸವನ್ನು ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್)/ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ ರ ಬಳಿ ಶುಕ್ರವಾರ, ಮೇ 30, 2025ರ ("ಕಟ್ ಆಫ್ ದಿನಾಂಕ") ಮೊದಲು ನೋಂದಾಯಿಸಿಕೊಂಡ ಸದಸ್ಯರಿಗೆ ಕಳುಹಿಸಿಕೊಡುವ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿದೆ. ವಿದ್ಯುನ್ಮಾನ ಮಾದರಿಯಲ್ಲಿ ಅಂಚೆಮತ್ರಪತ್ರದ ಸೂಚನೆಯನ್ನು ಕಳುಹಿಸಿಕೊಡುವುದನ್ನು ಕಂಪನಿಯು ಮಂಗಳವಾರ, ಜೂನ್ 03, 2025 ರಂದು ಮುಕ್ತಾಯಗೊಳಿಸಿದೆ.

ಅಂಚೆ ಮತ ಪತ್ರ ಸೂಚನೆಯು ಕಂಪನಿಯ ವೆಬ್‌ಸೈಟ್ www.tracxn.com ಮತ್ತು ಬಿಎಸ್‌ಇ ಲಿಮಿಟೆಡ್ ನ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್‌ನ www.nseindia.com ಹಾಗೂ ಇ–ಮತದಾನದ ಏಜೆನ್ಸಿಯ ವೆಬ್‌ಸೈಟ್ https://www.evoting.nsdl.com/ ನಲ್ಲಿ ಲಭ್ಯವಿದೆ. ಅಂಚೆಮತಪತ್ರ ಸೂಚನೆಯು ಲಭ್ಯವಾಗದೆ ಇದ್ದಂತಹ ಸದಸ್ಯರು ಈ ಮೇಲಿನ ವೆಬ್‌ಸೈಟ್‌ಗಳಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ವಿದ್ಯುನ್ಮಾನ ವಿಧಾನದ ಮೂಲಕ ಅಂಚೆಮತಪತ್ರ ಸೂಚನೆಯಲ್ಲಿ ತಿಳಿಸಿದಂತೆ ವ್ಯವಹಾರಗಳನ್ನು ವಿದ್ಯುನ್ಮಾನದ ಮೂಲಕ ನಡೆಸಬೇಕು. ಎಂಸಿಎ ಸುತ್ತೋಲೆಗಳಂತೆ ಅಂಚೆಮತಪತ್ರ ಸೂಚನೆಯು ಕೇವಲ ವಿದ್ಯುನ್ಮಾನವಾಗಿ ಮಾತ್ರ ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರೊಂದಿಗೆ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸಿದ ಸದಸ್ಯರಿಗೆ ಮಾತ್ರ ಕಳುಹಿಸಿಕೊಡಲಾಗುತ್ತದೆ. ಸದಸ್ಯರು ತಮ್ಮ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯವನ್ನು ಇ–ಮತದಾನ ವಿಧಾನದ ಮೂಲಕ ಮಾತ್ರ ಸಂವಹನ ನಡೆಸಬೇಕು.

ಕಂಪನಿಯು ತನ್ನೆಲ್ಲಾ ಸದಸ್ಯರು ತಮ್ಮ ಮತದಾನವನ್ನು ವಿದ್ಯುನ್ಮಾನವಾಗಿ ಚಲಾಯಿಸಲು ಇ–ಮತದಾನ ಸೌಲಭ್ಯ ಒದಗಿಸಲು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್" ("ಎನ್‌ಎಸ್‌ಡಿಎಲ್") ನ್ನು ಬಳಸಿಕೊಳ್ಳಲಿದೆ. ಇ–ಮತದಾನದ ಅವಧಿಯ ವಿವರವನ್ನು ಈ ಕೆಳಗೆ ನೀಡಲಾಗಿದೆ.

ವಿಶೇಷ ನಡಾವಳಿ: 1. ಕಂಪನಿಯ ಈಕ್ವಿಟಿಷೇರುಗಳನ್ನು ಮರುಪಡೆದುಕೊಳ್ಳಲು (ಬೈಬ್ಯಾಕ್) ಅನುಮೋದನೆ	
ಮತದಾನಕ್ಕೆ ಅರ್ಹರಾಗಲು ಕಟ್ ಆಫ್ ದಿನಾಂಕ	ಶುಕ್ರವಾರ, ಮೇ 30, 2025
ಇ–ಮತದಾನದ ಅವಧಿಯ ಆರಂಭ	09.00 ಎ.ಎಂ.(ಐಎಸ್‌ಟಿ) ಬುಧವಾರ, ಜೂನ್ 04, 2025
ಇ–ಮತದಾನದ ಮುಕ್ತಾಯ	05.00 ಪಿ.ಎಂ (ಐಎಸ್‌ಟಿ) ಗುರುವಾರ, ಜುಲೈ 03, 2025

ಸದಸ್ಯರು ಗಮನಿಸಬೇಕಾದುದೇನೆಂದರೆ, ಗುರುವಾರ, ಜುಲೈ 03, 2025ರಂದು ಸಂಜೆ 05:00 ಗಂಟೆಯ ನಂತರ ಇ–ಮತದಾನ ಸೌಲಭ್ಯ ಲಭ್ಯವಿರುವುದಿಲ್ಲ ಮತ್ತು ಮತದಾನವನ್ನು ಕೂಡಲೇ ಎನ್‌ಎಸ್‌ಡಿಎಲ್ ನಿಷ್ಕ್ರಿಯಗೊಳಿಸುವುದು ಹಾಗೂ ಹೇಳಲಾದ ದಿನಾಂಕ ಮತ್ತು ಸಮಯದ ನಂತರ ಸದಸ್ಯರಿಗೆ ಮತದಾನಕ್ಕೆ ಅವಕಾಶವಿರುವುದಿಲ್ಲ.

ಕಟ್–ಆಫ್ ದಿನಾಂಕದವರೆಗೆ ಯಾವ ಸದಸ್ಯರ ಹೆಸರು ಕಂಪನಿಯ ಸದಸ್ಯರ ರಿಜಿಸ್ಟರ್ ಅಥವಾ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರವರಿಂದ ನಿರ್ವಹಿಸಲ್ಪಡುವ ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಇರುತ್ತದೆಯೋ ಅಂಥಹ ಸದಸ್ಯತರು ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತ ಚಲಾಯಿಸಬಹುದು. ಕಟ್ ಆಫ್ ದಿನಾಂಕದವರೆಗೆ ಸದಸ್ಯರ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿ ಸದಸ್ಯರು ಹೊಂದಿರುವ ಷೇರುಗಳಿಗೆ ಸಮನಾಗಿ ಅವರಿಗೆ ಮತದಾನದ ಹಕ್ಕು ಇರುತ್ತದೆ. ಇಂದು ಬಾರಿ ನಡಾವಳಿಗಳ ಮೇಲೆ ಸದಸ್ಯರು ತಮ್ಮ ಮತವನ್ನು ಚಲಾಯಿಸಿದ ನಂತರ ಆತ/ಅವಳು ಅದನ್ನು ಬದಲಾಯಿಸಲು ಅವಕಾಶ ನೀಡಲಾಗುವುದಿಲ್ಲ.

ಒಂದು ವೇಳೆ ಸದಸ್ಯರು ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದು, ತಮ್ಮ ಇ–ಮೇಲ್ ವಿಳಾಸವನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) ಬಳಿ ನೋಂದಾಯಿಸಿಲ್ಲವಾದರೆ, ತಮ್ಮ ಡಿಮ್ಯಾಟ್ ಖಾತೆಯನ್ನು ನಿರ್ವಹಿಸುವ ಡೆಪಾಸಿಟರಿ ಪಾರ್ಟಿಸಿಪೆಂಟ್(ಟ್ಸ್) ಬಳಿ ನೋಂದಾಯಿಸಲು/ಅಪ್‌ಡೇಟ್ ಮಾಡಿಕೊಳ್ಳಲು ಕೋರಲಾಗಿದೆ.

ಮರುಪಡೆದುಕೊಳ್ಳುವಿಕೆ ಸಮಿತಿಯು (ಬೈಬ್ಯಾಕ್ ಕಮಿಟಿ) ಸಿಎಸ್ ಮನೀಶ್ ಎಲ್ ಘಿಯಾ (ಸದಸ್ಯತ್ವ ಸಂ. ಎಫ್‌ಸಿಎಸ್: 6252) ಪಾಲುದಾರ, ಮೆ॥ ಮನೀಶ್ ಘಿಯಾ & ಅಸೋಸಿಯೇಟ್ಸ್, ಕಾರ್ಯನಿರತ ಕಂಪನಿ ಕಾರ್ಯದರ್ಶಿಗಳು, ಇವರನ್ನು ಅಂಚೆಮತದಾನ ಸೇರಿದಂತೆ ಇ–ಮತದಾನ ಪ್ರಕ್ರಿಯೆ ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿಶೀಲಕರನ್ನಾಗಿ ನೇಮಿಸಿದೆ.

ಒಟಿದು ವೇಳೆ ನಡಾವಳಿಗಳು ಅನುಮೋದನೆಗೊಂಡರೆ, ಇ–ಮತದಾನದ ಕೊನೆಯ ದಿನಾಂಕ ಅಂದರೆ ಗುರುವಾರ ಜುಲೈ 03, 2025ರಂದು ತೇರ್ಗಡೆಯಾಗಬೇಕಾಗುತ್ತಿದೆ. ಅಂಚೆಮತಪತ್ರದ ಫಲಿತಾಂಶಗಳನ್ನು ಅಧ್ಯಕ್ಷರು ಅಥವಾ ಅಧ್ಯಕ್ಷರಿಂದ ಅಧಿಕೃತಗೊಂಡ ಇತರೆ ವ್ಯಕ್ತಿಯಿಂದ ಇ–ಮತದಾನ ಅಂತ್ಯಗೊಂಡ ಎರಡು ಕೆಲಸದ ದಿನಗಳಲ್ಲಿ ಘೋಷಿಸಲ್ಪಡುತ್ತದೆ. ಹೇಳಲಾದ ಫಲಿತಾಂಶಗಳ ಜೊತೆಗೆ ಪರಿಶೀಲಕರ ವರದಿಯೊಂದಿಗೆ ಕಂಪನಿಯ ವೆಬ್‌ಸೈಟ್ www.tracxn.com ಮತ್ತು ಬಿಇಎಸ್‌ಇ ಲಿಮಿಟೆಡ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ಮತ್ತು ಇ–ವೋಟಿಂಗ್ ಏಜೆನ್ಸಿಯ ವೆಬ್‌ಸೈಟ್ www.evoting.nsdl.com ನಲ್ಲಿ ನೀಡಲಾಗುತ್ತದೆ.

ಇ–ಮತದಾನದ ಬಗ್ಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ಸದಸ್ಯರು ಫ್ರೀಕ್ವೆಂಟ್ಲಿ ಆಸ್ಕ್ಡ್ ಕ್ವೆಶ್ಚನ್ಸ್ (ಎಫ್‌ಎಕ್ಯು) ಮತ್ತು www.evoting.nsdl.com ನ "ಹೆಲ್ಪ್" ವಿಭಾಗದಲ್ಲಿ ಲಭ್ಯವಿರುವ ಇ–ವೋಟಿಂಗ್ ಕೈಪಿಡಿಯನ್ನು ಆಧಾರ ಮಾಡಿಕೊಳ್ಳಬಹುದು ಅಥವಾ evoting@nsdl.com ಇ–ಮೇಲ್ ಮಾಡಿ ಅಥವಾ ಈ ಸಂಖ್ಯೆ 022 – 4886 7000 ಗೆ ಕರೆಮಾಡಿ.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ,
ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
ಸಹಿ/–
ಮೇಘ ತಿಬ್ರೇವಾಲ್
ಕಂಪನಿ ಸೆಕ್ರೆಟರಿ ಮತ್ತು
ಕಾಂಪ್ಲಯನ್ಸ್ ಅಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: ಜೂನ್ 03, 2025

ಕೆನರಾ ಬ್ಯಾಂಕ್ ಆರ್ಥಿಕತೆ ಸದೃಢ

ಬೆಂಗಳೂರು: ಕರ್ನಾಟಕ ರಾಜ್ಯದ ವಿಜಯಪುರ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಘಟನೆಯ ಬಗ್ಗೆ ನಮ್ಮ ಮೌಲ್ಯಯುತ ಗ್ರಾಹಕರು ಭಯ ಭೀತರಾಗಬಾರದು ಎಂದು ಕೆನರಾ ಬ್ಯಾಂಕ್ ತಿಳಿಸಿದೆ.ನಮ್ಮ ವಶದಲ್ಲಿರುವ ಚಿನ್ನವನ್ನು ಸಮಗ್ರ ಪಾಲಿಸಿಯಲ್ಲಿ ಸಂಪೂರ್ಣವಾಗಿ ವಿಮೆ ಮಾಡಲಾಗಿದೆ. ಕೆನರಾ ಬ್ಯಾಂಕ್ ಆರ್ಥಿಕವಾಗಿ ಸದೃಢವಾಗಿದೆ ಮತ್ತು ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸಲು ಸಂಪೂರ್ಣವಾಗಿ ಬದ್ಧವಾಗಿದೆ. ಪೊಲೀಸ್ ತನಿಖೆಗಳು ತ್ವರಿತವಾಗಿ ಪ್ರಗತಿಯಲ್ಲಿವೆ ಮತ್ತು ಅಪರಾಧಿಗಳನ್ನು ಶೀಘ್ರದಲ್ಲೇ ಬಂಧಿಸಲಾಗುವುದು ಎಂದು ನಮಗೆ ವಿಶ್ವಾಸವಿದೆ. ನಿಮ್ಮ ನಂಬಿಕೆ ನಮ್ಮ ಮೊದಲ ಆದ್ಯತೆ ಆಗಿದೆ. ಬ್ಯಾಂಕ್ ಗ್ರಾಹಕರ ಸ್ವತ್ತುಗಳ ರಕ್ಷಕನಾಗಿದೆ ಮತ್ತು ಎಲ್ಲಾ ಬಾಧಿತ ಗ್ರಾಹಕರ ಹಿತಾಸಕ್ತಿಯನ್ನು ಸೂಕ್ತವಾಗಿ ರಕ್ಷಿಸಲಾಗುತ್ತದೆ. ಗ್ರಾಹಕರ ವಿರುದ್ಧ ಏನೂ ನಡೆಯುವುದಿಲ್ಲ ಎಂದು ಭರವಸೆ ನೀಡಲಾಗಿದೆ ಎಂದು ಕೆನರಾ ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

PUBLIC NOTICE

NOTICE IS HEREBY GIVEN THAT, Ms. Ritu Subash Cipy, D/o. Mr. Subash Cipy, Residing at Plot no.11, Green park society, Opposite Anandban Club, Aundh, Pune-411007, Maharashtra is the absolute owner of the property described in the Schedule hereunder.

It is brought to the notice of the general public that, our client has negotiated and decided to purchase the Schedule Property from the above said owner/attorney. All persons having any claim against or to the Schedule Property or any part thereof by way of inheritance, mortgage, sale, conveyance, MOU, Agreement to Sell, G.P.A, transfer, lease deed, tenancy, license, lien, charge, trust, maintenance, easement, gift, exchange, possession, adverse possession or otherwise howsoever are hereby required to submit the same in writing along with documentary proof to the undersigned at their office **within 15 days from the date of publication hereof**, failing which our client shall proceed without any reference to such claim and the same, if any, will be considered as waived.

SCHEDULE PROPERTY

All the piece and parcel Immovable Property bearing site No. 91, BBMP PID No.74-153-91, having New PID No.3359342500, situated at New Thippasandra at HAL 3rd stage in Jeevan Bheema Nagar, Bangalore, measuring East to west 25 feet and North to South 50 feet, admeasuring 1250 Sq.ft. together with the Residential Building constructed thereon with Ground, First and Second and Terrace Floors, with 193.16 Sq. Mtrs. of Super Built up area, and bounded on:**East By** : No. 698/2 (No.90) Property owned by Mr. Chandrashekar Y Patil, **West By:** No. 91/1, Property owned by Mrs. Shakirunissa, **North By:** Remaining portion of the larger extent in the land Originally bearing Sy No. 35/1, **South By:** Road.

Sri. CHENNAKESHAVA B.S. ADVOCATE
H & C Law Chambers,
64/1, 5th Floor,No.39/2, A.S.V.N.V. BHAVAN, K.G.Road, Bangalore - 560009.

ಸಮಾಚಾರ ಸಣ್ಣದಲ್ಲ

ಜೋಳ ಖರೀದಿಗೆ ರೈತರ ಮನವಿ

ಬೆಂಗಳೂರು: ಬೆಂಗಳೂರು ವಸಂತನಗರದಲ್ಲಿರುವ ಆಹಾರ ಭವನದಲ್ಲಿ ರಾಯಚೂರು ಜಿಲ್ಲೆಯ ರೈತ ಮುಖಂಡರ ನಿಯೋಗದೊಂದಿಗೆ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು ಸಭೆಯನ್ನು ನಡೆಸಿದರು. ಶಾಸಕ ಬಸವಣಗೌಡ ಬಾದರ್ಲಿ ಅವರ ನೇತೃತ್ವದಲ್ಲಿ ರೈತರ ನಿಯೋಗವು ಇಂದು ಸಚಿವರನ್ನು ಭೇಟಿ ಮಾಡಿ ಚರ್ಚಿಸಿದರು. ಮುಂಗಾರು ಮತ್ತು ಹಿಂಗಾರಿನಲ್ಲಿ ರೈತರು ಹೆಚ್ಚಾಗಿ ಜೋಳ ಬೆಳೆಯುವ ಕಾರಣದಿಂದ ಸರಕಾರ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿಸಿದರೆ ರೈತರಿಗೆ ಅನುಕೂಲಕರ ವಾಗುತ್ತದೆ ಎಂದು ಮನವಿ ಮಾಡಿದರು. ಸರಕಾರ ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ಖರೀದಿ ಪ್ರಕ್ರಿಯೆಗೆ ಈಗಾಗಲೇ ಕೇಂದ್ರ ಸರಕಾರದ ಗರಿಷ್ಠ ಮಿತಿಯನ್ನೂ ಮೀರಿದ್ದು ಇನ್ನೂ ಎಂಎಸ್‌ಪಿ ಯೋಜನೆಯಲ್ಲಿ ಸರಕಾರಕ್ಕೆ ನೀಡಲು ನೋಂದಣಿ ಮಾಡಿದ ರೈತರ ಹೆಚ್ಚುವರಿ ಜೋಳವನ್ನು ಖರೀದಿಸಲು ಮುಂದಿನ ಸಚಿವ ಸಂಪುಟದ ಉಪ ಸಮಿತಿ ಸಭೆಯಲ್ಲಿ ಈ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು. ಈ ವೇಳೆ ಆಹಾರ ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್, ಆಯುಕ್ತ ವಾಸಿರೆಡ್ಡಿ ವಿಜಯ ಜೋತ್ಸ್ನಾ, ಆಹಾರ ನಿಗಮ ನಿರ್ದೇಶಕ ಚಂದ್ರಕಾಂತ್ ಹಾಗೂ ರೈತ ಮುಖಂಡರಾದ ಹನುಮನಗೌಡ, ರಾಜೇಶ್ ಪಾಟೇಲ್, ಮಲ್ಲೇಶ್ ಗೌಡ, ಉಪಸ್ಥಿತರಿದ್ದರು.

ಡಿಪ್ಲೊಮಾ ಪ್ರವೇಶ ದಿನಾಂಕ ವಿಸ್ತರಣೆ

ಬೆಂಗಳೂರು: ಬೆಂಗಳೂರಿನ ಕೆ.ಆರ್. ವೃತ್ತದಲ್ಲಿರುವ ಸರಕಾರಿ ಜವಳಿ ತಾಂತ್ರಿಕ ಸಂಸ್ಥೆಯಲ್ಲಿ 2025–26ನೇ ಸಾಲಿನ ಮೊದಲ ಸೆಮಿಸ್ಟರ್ ಡಿಪ್ಲೊಮಾ ಟೆಕ್ಸ್‌ಟೈಲ್ ಟೆಕ್ನಾಲಜಿ ಕೋರ್ಸಿಗೆ ಪ್ರವೇಶ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಪ್ರವೇಶದ ದಿನಾಂಕವನ್ನು ಜೂನ್ 30ರವರೆಗೂ ವಿಸ್ತರಿಸಲಾಗಿದೆ. ಕೋರ್ಸಿಗೆ ಸೇರ ಬಯಸುವವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಈ ಡಿಪ್ಲೊಮೊ ಕೋರ್ಸ್ 3 ವರ್ಷದ ಆಗಿರುತ್ತದೆ. ಪ್ರವೇಶಕ್ಕೆ ಅಗತ್ಯ ದಾಖಲೆಗಳಾದ ಶಾಲೆಯ ಮುಖ್ಯಸ್ಥರು ದೃಡೀಕರಿಸಿದ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕಪಟ್ಟಿ, ಮೂಲ ವರ್ಗಾವಣೆ ಪ್ರಮಾಣ ಪತ್ರ, ವ್ಯಾಸಂಗ ಪ್ರಮಾಣ ಪತ್ರ (5 ವರ್ಷಗಳ ಬಿ.ಇ.ಓ ರವರಿಂದ ದೃಡೀಕರಿಸಿರಬೇಕು), ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 06 ಭಾವ ಚಿತ್ರಗಳು, ಜಾತಿ ಪ್ರಮಾಣ ಪತ್ರ, ಹಾಗೂ ಆದಾಯ ಪ್ರಮಾಣ ಪತ್ರ, ಕನ್ನಡ/ಗ್ರಾಮೀಣ/ಹೈದ್ರಾಬಾದ್–ಕರ್ನಾಟಕ ಪ್ರಮಾಣ ಪತ್ರ, ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 9481101049 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಅಭಿನಂದನಾ ಸಮಾರಂಭ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2021, 2022, 2023 ಹಾಗೂ 2024ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿ ಪ್ರದಾನ ಹಾಗೂ ಬೂಕರ್ ಪ್ರಶಸ್ತಿ ವಿಜೇತ ಬಾನು ಮುಸ್ತಾಕ್ ಹಾಗೂ ದೀಪಾ ಭಾಸ್ತಿ ಅವರಿಗೆ ಅಭಿನಂದನಾ ಸಮಾರಂಭವನ್ನು ಜೂನ್ 4 ರಂದು ಸಂಜೆ 5.00 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರಂಭದ ಉದ್ಘಾಟನೆ ಮಾಡುವುದರೊಂದಿಗೆ ಪ್ರಶಸ್ತಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಹಾಗೂ ಬೂಕರ್ ಪ್ರಶಸ್ತಿ ವಿಜೇತ ಬಾನು ಮುಸ್ತಾಕ್ ಹಾಗೂ ದೀಪಾ ಭಾಸ್ತಿ ಅವರಿಗೆ ಅಭಿನಂದನೆ ಸಲ್ಲಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ವಾರ್ಷಿಕ ಪುಸ್ತಕ ಬಹುಮಾನ ಪ್ರದಾನ ಮಾಡಲಿದ್ದಾರೆ ಹಾಗೂ ಇಲಾಖಾ ಸಚಿವ ಶಿವರಾಜ ತಂಗಡಿ ಅವರು ಪ್ರಾಧಿಕಾರದ ಕಿರುಹೊತ್ತಿಗೆ ಬಿಡುಗಡೆ ಮಾಡಲಿದ್ದು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಉದಯ್ ಬಿ. ಗರುಡಾಚಾರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಎಂದು ಪ್ರಕಟಣೆ ತಿಳಿಸಿದೆ.

ಬಹುಮಾನಕ್ಕಾಗಿ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ 2024ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಬಹುಮಾನಕ್ಕೆ ಸಲ್ಲಿಸುವ ಕೃತಿಗಳು 2024ರ ಜ.01ರಿಂದ ಡಿ.31ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿರುವ ಕೃತಿಗಳಾಗಿರಬೇಕು. ಕೃತಿಯಲ್ಲಿ ಪ್ರಥಮ ಮುದ್ರಣ 2024 ಎಂದು ಮುದ್ರಿತವಾಗಿರಬೇಕು. ಬಹುಮಾನಕ್ಕಾಗಿ ಕಳುಹಿಸುವ ಕೃತಿಯ ಮೇಲೆ ತಿಳಿಸಿದ ಪ್ರಕಾರಗಳಲ್ಲಿ ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಪುಸ್ತಕದ ಶೀರ್ಷಿಕೆ ಪುಟದಲ್ಲಿ ಬರೆದಿರಬೇಕು. ಪ್ರಕಟವಾದ ಪುಸ್ತಕಗಳ ತಲಾ 4 ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560002 ಇವರಿಗೆ ಅಂಚೆ/ಕೊರಿಯರ್ ಮೂಲಕ ಅಥವಾ ಖುದ್ದಾಗಿ 2025ರ ಜುಲೈ 15 ರೊಳಗೆ ತಲುಪಿಸಬೇಕಾಗಿ ಕೋರಿದೆ. ವಿವರಗಳಿಗೆ ವೆಬ್‌ಸೈಟ್ www.sahithyaacademy.karnataka.gov.in ಸಂಪರ್ಕಿಸಬಹುದು.

{ ರಮೇಶ್ ಜಾರಕಿಹೊಳಿ } ಶಾಸಕ

ಬಿಜೆಪಿಯಿಂದ ಉಚ್ಚಾಟನೆಗೊಂಡ ಯತ್ನಾಳ್ ಅವರಿಗೆ ಮತ್ತೆ ಬಿಜೆಪಿ ಸಂತೋಷದ ಸುದ್ದಿ ನೀಡುತ್ತದೆ. ಮಾತಿನ ಮೇಲೆ ಹಿಡಿತ ಇರಿಸಿಕೊಳ್ಳಬೇಕು. ಎಸ್.ಟಿ.ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ಅವರನ್ನು ಉಚ್ಚಾಟಿಸಿರುವ ಪಕ್ಷದ ತೀರ್ಮಾನವನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಶಾರದಾ ವಿದ್ಯಾನಿಕೇತನ ಶಾಲೆಯೊಳಗೆ ಅತಿಕ್ರಮ ಪ್ರವೇಶ ಆರೋಪ | ಡಿಡಿಪಿಐಗೆ ಡಿಕೆಶಿ ಸೂಚನೆ

ತೊಂದರೆ ಕೊಡುವವರ ವಿರುದ್ಧ ಕ್ರಮ ಕೈಗೊಳ್ಳಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿದ್ಯಾರಣ್ಯಪುರದ ಶ್ರೀ ಶಾರದಾ ವಿದ್ಯಾನಿಕೇತನ ಶಾಲೆಯೊಳಗೆ ಅತಿಕ್ರಮ ಪ್ರವೇಶ ಮಾಡಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರಿಗೆ ತೊಂದರೆ ನೀಡುವವರ ವಿರುದ್ಧ ಕ್ರಮ ಕೈಗೊಂಡು ಶಾಲೆ ಸುಗಮವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಬೆಂಗಳೂರು ನಗರ ಜಿಲ್ಲಾಧಿಕಾರಿ ಹಾಗೂ ಉತ್ತರ ಡಿಡಿಪಿಐಗೆ ಸೂಚನೆ ನೀಡಿದರು.

ಬೆಂಗಳೂರಿನ ವಿದ್ಯಾರಣ್ಯಪುರದ ಎಂ.ಎಸ್. ಪಾಳ್ಯದಲ್ಲಿರುವ ಶ್ರೀ ಶಾರದಾ ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರು, ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಭೇಟಿ ಮಾಡಿ, ಧನಂಜಯ ಎಂಬುವರು ಅಕ್ರಮವಾಗಿ ಶಾಲೆಯನ್ನು ಕಬ್ಜಾ ಮಾಡಿಕೊಂಡು ಗೂಂಡಾಗಳ ನೆರವಿನಿಂದ ಶಾಲೆ ಆವರಣದಿಂದ ತಮ್ಮನ್ನು ಹೊರಗೆ ಹಾಕಿದ್ದಾರೆ ಎಂದು ದೂರಿದರು. ಈ ವೇಳೆ ಡಿಸಿಎಂ ಅವರು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಹಾಗೂ ಬೆಂಗಳೂರು ಉತ್ತರ ಡಿಡಿಪಿಐ ಜತೆ ಮಾತನಾಡಿ ಸಮಸ್ಯೆ ಬಗೆಹರಿಸುವಂತೆ ಸೂಚಿಸಿದರು.

ಧನಂಜಯ ಎಂಬಾತ 2022ರ ಏಪ್ರಿಲ್ ತಿಂಗಳಿಂದ ನಮಗೆ ತೊಂದರೆ ನೀಡುತ್ತಿದ್ದು, ಶಾಲೆ ಮೇಲೆ ದಾಳಿ ಮಾಡಿ ಶಾಲೆ ವಸ್ತುಗಳನ್ನು ಹಾನಿಗೊಳಿಸಿದ್ದರು. ನಂತರ ಮೇ ಹಾಗೂ ಜೂನ್ ತಿಂಗಳಲ್ಲಿ ಬಿಇಓ ಕಚೇರಿಯಿಂದ ನೀವು ಶಾಲೆ ನಡೆಸಲು ಅವಕಾಶ ಇಲ್ಲ ಎಂದು ಪತ್ರ ಕಳುಹಿಸಿ ಶಾಲೆ ನಡೆಸಲು ಅಡ್ಡಿಪಡಿಸಿದ್ದು, ಶಾಲೆಯನ್ನು ಮುಚ್ಚಬೇಕು ಎಂದು ತಿಳಿಸಿದರು. ಶಾಲೆಯ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು ಮುಂದಾದಾಗ ಅದನ್ನು ಕೆಡವಿದರು. ಅಷ್ಟೇ ಅಲ್ಲದೆ ಶಾಲೆ ಆವರಣದಲ್ಲಿ ಕಟ್ಟಡ ತ್ಯಾಜ್ಯ ತಂದು ಹಾಕಲು ಮುಂದಾದರು. ಇತ್ತೀಚೆಗೆ ಸುಮಾರು 50–60 ಜನರನ್ನು ಕರೆತಂದು ದಬ್ಬಾಳಿಕೆ ನಡೆಸಿದರು ಎಂದು ಆರೋಪಿಸಿದ್ದಾರೆ.

ಈ ವೇಳೆ ಬೆಂಗಳೂರು ಉತ್ತರ ಡಿಡಿಪಿಐ ಜತೆ ಮಾತನಾಡಿದ ಶಿವಕುಮಾರ್, ನಿಮ್ಮ ವ್ಯಾಪ್ತಿಯಲ್ಲಿ ಧನಂಜಯ ಎಂಬಾತ ಶಾರದಾ ವಿದ್ಯಾನಿಕೇತನ್ ಶಾಲೆ ಮೇಲೆ ದಾಳಿ ಮಾಡುತ್ತಿದ್ದಾನೆ. ನೀವು ಏನು ಮಾಡುತ್ತಿದ್ದೀರಿ? ನಿಮ್ಮ ಗಮನಕ್ಕೆ ಬಂದಿಲ್ಲ ಎಂದರೆ ಹೇಗೆ. ನನ್ನ ಬಳಿ 200ಕ್ಕೂ ಹೆಚ್ಚು ಜನ ಪೋಷಕರು, ಶಿಕ್ಷಕರು ಬಂದು ದೂರು ನೀಡುತ್ತಿದ್ದಾರೆ. ಈ ತಕ್ಷಣವೇ ಅಲ್ಲಿಗೆ ಹೋಗಿ ಸಮಸ್ಯೆ ಬಗೆಹರಿಸಿ. ನಾನು ಮಧ್ಯಾಹ್ನ ಸಮಯ ಸಿಕ್ಕರೆ ಶಾಲೆಯ ಜಾಗಕ್ಕೆ ಬಂದು ಪರಿಶೀಲನೆ ಮಾಡುತ್ತೇನೆ. ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಶಾಲೆಗೆ ಈ ರೀತಿ ಕಿರುಕುಳ ನೀಡುವುದು ಸರಿಯಲ್ಲ. ಸ್ಥಳಕ್ಕೆ ನೀವೇ ಹೋಗಿ. ಪೊಲೀಸರು ಏನಾದರೂ ಕುತಂತ್ರ ಮಾಡುತ್ತಿದ್ದಾರಾ ಎಂದು ನೋಡಿ. ಈ ಪ್ರಕರಣದ ಬಗ್ಗೆ ನನಗೆ ವರದಿ ನೀಡಬೇಕು. ಶಾಲೆಯವರು ಒಪ್ಪಂದ ಮಾಡಿಕೊಂಡಿರುವಂತೆ ಶಾಲೆ ನಡೆಸಲು ಅವಕಾಶ ನೀಡಬೇಕು. ತೊಂದರೆ ನೀಡುತ್ತಿರುವವರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಕಾನೂನು ಕೈಗೆತ್ತಿಕೊಳ್ಳಲು ಅವಕಾಶ ಇಲ್ಲ

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಯಾರೂ ಕಾನೂನು ಕೈಗೆತ್ತಿಕೊಂಡು ಶಾಲೆಯನ್ನು ಕಬ್ಜಾ ಮಾಡಲು ಸಾಧ್ಯವಿಲ್ಲ. ಮಕ್ಕಳ ಭವಿಷ್ಯ ಮುಖ್ಯ. ಈ ರೀತಿ ಮಾಡುವವರು ಕಾಂಗ್ರೆಸ್ ನಾಯಕರೇ ಆಗಿರಲಿ ಅಥವಾ ಬೇರೆಯವರೇ ಆಗಿರಲಿ ಯಾರನ್ನೂ ಬಿಡಬಾರದು. ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಡಿಸಿ, ಡಿಡಿಪಿಐ ಹಾಗೂ ಪೊಲೀಸ್ ಆಯುಕ್ತರಿಗೆ ಸೂಚಿಸಿದ್ದೇನೆ ಎಂದರು. ಖಾಸಗಿ ಶಾಲೆಯಾದರೂ ಅದು ಸಾರ್ವಜನಿಕ ಸಂಸ್ಥೆ. ನಾನು ಶಾಲೆಗಳನ್ನು ನಡೆಸುತ್ತಿದ್ದೇನೆ. ನಾನು ಅದರ ವಾರಸುದಾರ ಆಗಿರಬಹುದು. ಆದರೆ ಮಾಲೀಕನಾಗಲು ಆಗುವುದಿಲ್ಲ. ಎಂತಹುದೇ ಪರಿಸ್ಥಿತಿ ಬಂದರೂ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರ ಹಿತ ಕಾಪಾಡುತ್ತೇವೆ. ಪ್ರತಿಯೊಬ್ಬರೂ ಕಾನೂನಿಗೆ ಗೌರವ ನೀಡಬೇಕು. ಇಲ್ಲಿ ಯಾರೂ ಶಾಶ್ವತ ಅಲ್ಲ ಎಂದು ತಿಳಿಸಿದರು.

ಕೆಂಪೇಗೌಡ ಪ್ರಾಧಿಕಾರಕ್ಕೆ ಜಮೀನು; ಸಂಪುಟದಲ್ಲಿ ಚರ್ಚೆ

ಬೆಂಗಳೂರು: ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಾಜ ಕಲ್ಯಾಣ ಇಲಾಖೆ ಬಳಿಯಿರುವ ಜಮೀನನ್ನು ಹಸ್ತಾಂತರಿಸುವ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು

ಕೆಂಪೇಗೌಡ ಜಯಂತಿ ಕಾರ್ಯಕ್ರಮ ನಡೆಯುತ್ತಿರುವ ಜಾಗವನ್ನು ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವರ್ಷ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಇಲ್ಲಿ ನಡೆಸಲು ತೀರ್ಮಾನಿಸಿದ್ದೇವೆ. ನಮ್ಮ ಸರಕಾರ ಸಮೀಪದಲ್ಲೇ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಜಮೀನು ನಿಗದಿ ಮಾಡಿದೆ. ಈ ಜಾಗದಲ್ಲಿ ಜೂ.27ರಂದು ಶಂಕುಸ್ಥಾಪನೆ ಮಾಡಿ, ನಂತರ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಇಲ್ಲಿ ಆಚರಿಸಲು ಮುಂದಾಗಿದ್ದೇವೆ. ಇಲ್ಲಿ ಕೆಂಪೇಗೌಡರ ಇತಿಹಾಸ ಸಾರುವ ವಸ್ತುಪ್ರದರ್ಶನ ಕೇಂದ್ರ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು.

ಈಗ ಮಂಜೂರಾಗಿರುವ ಜಾಗವನ್ನು ಸಮಾಜ ಕಲ್ಯಾಣ ಇಲಾಖೆ ಜಾಗದ ಜೊತೆ ಬದಲಾಯಿಸಿಕೊಳ್ಳಬೇಕು ಎಂದು ನಮ್ಮ ಸ್ಥಳೀಯ ನಾಯಕರು ಸಲಹೆ ನೀಡಿದ್ದಾರೆ. ಅಧಿಕಾರಿಗಳ ಜತೆ ಈ ಜಾಗದ ಪರಿಶೀಲನೆ ಮಾಡಿದೆ. ಜಾಗ ಅದಲು ಬದಲು ಮಾಡಿದರೆ, ಪಕ್ಕದಲ್ಲೇ ಈ ದೊಡ್ಡ ಸಭಾಂಗಣವಿದೆ. ಆಗ ಮತ್ತೊಂದು ಸಭಾಂಗಣ ನಿರ್ಮಾಣ ಮಾಡುವ ಅಗತ್ಯ ಇರುವುದಿಲ್ಲ. ಮುಂದೆ ಇಲ್ಲಿ ರೈಲ್ವೆ ಮಾರ್ಗ ಬರಲಿದ್ದು, ಇಲ್ಲೇ ಒಂದು ನಿಲ್ದಾಣವನ್ನು ಮಾಡಲಾಗುವುದು. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪ ಮಾಡಲಾಗುವುದು. ಸಚಿವ ಸಂಪುಟ ಸಭೆಯಲ್ಲಿ ಅಂತಿಮವಾಗಿ ತೀರ್ಮಾನ ಮಾಡಲಾಗುವುದು ಎಂದು ತಿಳಿಸಿದರು.

ಜಾಗ ದೂರ ಆಗಲಿಲ್ಲವೇ ಎನ್ನುವ ಪ್ರಶ್ನೆಗೆ, ಬೆಂಗಳೂರು ಬೆಳೆದಿದೆ ಏನು ಮಾಡುತ್ತೀರಿ? ಬೆಂಗಳೂರಿನಲ್ಲಿ ಬೇರೆ ಎಲ್ಲಿ ಜಾಗ ನೀಡುತ್ತೀರಿ? ಗಾಲ್ಫ್ ಕೋರ್ಸ್, ಕಬ್ಬನ್ ಪಾರ್ಕ್, ರೇಸ್ ಕೋರ್ಸ್ ಬಿಡಲು ಯಾರೂ ಸಿದ್ಧರಿಲ್ಲ. ಮತ್ತೆ ಬೇರೆ ಎಲ್ಲಿ ಜಾಗ ಇದೆ? ಮಂತ್ರಿಗಳ ಮನೆ, ನ್ಯಾಯಾಧೀಶರಿಗೆ ಹೊಸ ಮನೆ, ಹೈಕೋರ್ಟ್ ಮಾಡಲು ಬೆಂಗಳೂರು ಮಧ್ಯಭಾಗದಲ್ಲಿ ಜಾಗ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಬೇರೆ ಎಲ್ಲಿ ನೀಡಲು ಸಾಧ್ಯ? ಹೀಗಾಗಿ ಇಲ್ಲಿ ಜಾಗ ನೀಡಿದ್ದೇವೆ ಎಂದು ತಿಳಿಸಿದರು.

ಸಂಕಷ್ಟಕ್ಕೆ ಸಿಲುಕಿದ ಬೆಂಗಳೂರಿನ ಹಲವು ಪಿಜಿಗಳು | ಮಾಲೀಕರು ಹೈರಾಣ

ಪಾಲಿಕೆ ನಿಯಮ ಕಠಿಣ: ಪಿಜಿಗಳಿಗೆ ಮುಚ್ಚುವ ಭೀತಿ

ಬೆಂಗಳೂರು: ಪಿಜಿ ನಡೆಸಲು ಬಿಬಿಎಂಪಿ ಕಠಿಣ ಮಾರ್ಗಸೂಚಿ ಹಾಗೂ ಶುಲ್ಕವನ್ನು ಹೆಚ್ಚಿಸಿದ ಬೆನ್ನಲ್ಲೇ ಬೆಂಗಳೂರಿನಲ್ಲಿನ ಹಲವು ಪಿಜಿಗಳು ಸಂಕಷ್ಟಕ್ಕೆ ಸಿಲುಕಿದ್ದು, ಹಲವು ಪಿಜಿ ಮಾಲೀಕರು ಸಂಕಷ್ಟಕ್ಕೊಳಗಾಗಿದ್ದಾರೆ.

ಕೆಲ ವರ್ಷಗಳ ಹಿಂದೆ ಬಂದ ಕರೋನಾದ ಬಳಿಕ ಪಿಜಿ ಮಾಲೀಕರು ಭಾರಿ ಪ್ರಮಾಣದಲ್ಲಿ ಸಂಕಷ್ಟಕ್ಕೊಳಗಾಗಿದ್ದು, ಹಲವು ಐಟಿ ಕೆಲಸಗಾರರು ಮನೆಯಿಂದಲೇ ಕೆಲಸ ಮಾಡುತ್ತಿದ್ದದರಿಂದ ಪಿಜಿ ಖಾಲಿ ಹೊಡೆಯುತ್ತಿತ್ತು. ಕರೋನಾ ಬಿಕ್ಕಟ್ಟಿನ ಬಳಿಕವೂ ಇತ್ತೀಚೆಗೆ ಪಿಜಿ ಮಾಲೀಕರು ಚೇತರಿಸಿಕೊಳ್ಳುತ್ತಾ ಬಂದರೂ ಕೂಡಾ ಈಗ ಮತ್ತೆ ಸಂಕಷ್ಟ ಎದುರಿಸುವ ಪರಿಸ್ಥಿತಿ ಬಂದಿದೆ. ಸಾಂಕ್ರಾಮಿಕದ ಬಳಿಕ ಪಿಜಿಗಳು ಕಾಸ್ಟ್ಲಿ ಎನ್ನುವ ಮಾತುಗಳು ಕೇಳಿ ಬರುತ್ತಿದ್ದು, ಈಗಲೂ ಬಹುತೇಕ ಪಿಜಿ ಮಾಲೀಕರು ಶೇ.20 ರಿಂದ 25ರಷ್ಟು ನಷ್ಟವನ್ನು ಅನುಭವಿಸುತ್ತಿದ್ದಾರೆ. ಹಲವಾರು ಪ್ರದೇಶಗಳಲ್ಲಿ, ಕನಿಷ್ಠ ಎರಡು ಪಿಜಿಗಳು ಮುಚ್ಚಿರುವುದು ಗಮನಾರ್ಹ ವಿಷಯವಾಗಿದೆ. ವಿಶೇಷವಾಗಿ, ಐಟಿ ವಲಯದ ಬಳಿಯ ಮಾರತಹಳ್ಳಿ, ಸರ್ಜಾಪುರ ಹಾಗೂ ಸುತ್ತಲೂ ಹೆಚ್ಚು ಸಂಖ್ಯೆಯ ಪಿಜಿಗಳು ಕಾಲಿ ಹೊಡೆಯುತ್ತಿವೆ.

ಪಿಜಿಗಳ ಮೇಲೆ ಒತ್ತಡ

ಬಿಬಿಎಂಪಿ ಇತ್ತೀಚೆಗೆ ಕಟ್ಟುನಿಟ್ಟಾದ ನಿಯಮಗಳನ್ನು ಪರಿಚಯಿಸಿದ್ದು, 40 ಅಡಿಗಿಂತ ಕಡಿಮೆ ಅಗಲದ ರಸ್ತೆಗಳ ಬಳಿ ಪಿಜಿ ವ್ಯವಸ್ಥೆ ನಡೆಸಬಾರದು ಎಂಬ ನಿಯಮವನ್ನು ಪರಿಚಯಿಸಿದೆ. ಈ ನಿಯಮಗಳು ಅನೇಕ ಪಿಜಿಗಳ ಭವಿಷ್ಯವನ್ನು ಸಂಕುಚಿತಗೊಳಿಸಿದೆ. ಮಹದೇವಪುರ ಪ್ರದೇಶದಲ್ಲಿ ಬಿಬಿಎಂಪಿ ಅನೇಕ ಪಿಜಿಗಳನ್ನು ಸೀಲ್ ಮಾಡಿದ್ದು, ಅವುಗಳಲ್ಲಿ ಹಲವು ಸರಿಯಾದ ವ್ಯಾಪಾರ ಪರವಾನಗಿ ಇಲ್ಲದ ಕಾರಣವಷ್ಟೇ ಅಲ್ಲದೆ, ನಿರ್ವಹಣಾ ಮಾನದಂಡಗಳನ್ನು ಕೂಡ ಪೂರೈಸದೆ ಇದ್ದವು. ಹೆಚ್ಚಿನ ನಿಯಮಾವಳಿ ಹಾಗೂ ಭದ್ರತೆ ಹೆಚ್ಚಿಸುವ ತಜ್ಞತೆಯಿಂದಾಗಿ, ಬಿಬಿಎಂಪಿ ಮತ್ತು ಪೊಲೀಸರ ಸಹಕಾರದಲ್ಲಿ ಅನೇಕ ಅಕ್ರಮ ಪಿಜಿಗಳನ್ನು ತೆರವುಗೊಳಿಸಿದೆ.

ನಿಯಮ ಸಡಿಲಿಕೆ ಸಾಧ್ಯತೆ

ಪಿಜಿ ಮಾಲೀಕರು ಮತ್ತು ಸಂಬಂಧಿತ ಸಂಘಟನೆಗಳು ಈಗ ಬಿಬಿಎಂಪಿ ಮತ್ತು ಬಡಾವಣಾ ನೀರು ಮತ್ತು ವಿದ್ಯುತ್ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಂಬಂಧಗೊಳ್ಳಿ, ತಮ್ಮನ್ನು ಸರಕಾರಿ ವಸತಿ ಸೇವೆಗಳಂತೆ ಪರಿಗಣಿಸಲು ಆಗ್ರಹಿಸುತ್ತಿವೆ. ಇದರಿಂದಾಗಿ ಸರಕಾರದಿಂದ ನಿರ್ವಹಣಾ ವೆಚ್ಚ ಕಡಿಮೆ ಮಾಡುವ ಮತ್ತು ನಿಯಮಗಳು ಅನುಗುಣವಾಗಿ ಸ್ವೀಕಾರ ಮಾಡುವ ಅವಕಾಶ ಸಿಗಬಹುದು ಎಂದು ನಿರೀಕ್ಷೆ ವ್ಯಕ್ತಪಡಿಸುತ್ತಿದ್ದಾರೆ.

ಪಿಜಿ ಮಾಲೀಕರ ಸಂಘದ ಅಧ್ಯಕ್ಷ ಅರುಣ್ ಕುಮಾರ್ ಮತ್ತು ಕಾರ್ಯದರ್ಶಿ ಸುಖಿ ಸಿಯೋ ಮಾಹಿತಿ ನೀಡಿ, ಬಹುಶಾಖೆ ನಡೆಸುವ ದೊಡ್ಡ ಪಿಜಿಗಳಷ್ಟೇ ಈಗ ತಾಳ್ಮೆಯಿಂದ ಮುಂದುವರಿಯುತ್ತಿದ್ದು ಸ್ವತಂತ್ರ ಪಿಜಿ ಮಾಲೀಕರು ಬಾಗಿಲು ಮುಚ್ಚಿದ್ದಾರೆ. ಇತ್ತೀಚೆಗೆ ಹೆಚ್ಚಿದ ನೀರು ಮತ್ತು ವಿದ್ಯುತ್ ಬಿಲ್ಲುಗಳು, ಬಾಡಿಗೆ ದರ ಏರಿಕೆ ಮತ್ತು ಬಿಬಿಎಂಪಿ ನಿಯಮಗಳ ಸಡಿಲಿಕೆ ಕೊರತೆಯು ಪಿಜಿಗಳ ಮೇಲಿನ ಒತ್ತಡವನ್ನು ಹೆಚ್ಚಿಸುತ್ತಿವೆ ಎಂದು ಹೇಳಿದರು.

ಹೆಚ್ಚುವರಿ ಬಡ್ಡಿ ಸರಕಾರ ಭರಿಸಲಿ

ಬೆಂಗಳೂರು: ನಬಾರ್ಡ್ ಕೇಳುತ್ತಿರುವ ಹೆಚ್ಚುವರಿ ಬಡ್ಡಿಯನ್ನು ಅಪೆಕ್ಸ್ ಬ್ಯಾಂಕ್ ಪರವಾಗಿ ರಾಜ್ಯ ಸರಕಾರ ಭರಿಸಿ, ರಾಜ್ಯದಲ್ಲಿ ಆಹಾರ ಧಾನ್ಯ ಉತ್ಪಾದನೆಯ ಗುರಿ ತಲುಪಲು ನೆರವಾಗಬೇಕು ಎಂದು ಆಗ್ರಹಿಸಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

ಪ್ರಸಕ್ತ ವರ್ಷ 37 ಲಕ್ಷ ರೈತರಿಗೆ 28 ಸಾವಿರ ಕೋಟಿ ಸಾಲ ವಿತರಿಸುವ ಗುರಿಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ನಬಾರ್ಡ್ ನಿಗದಿಪಡಿಸಿರುವುದಕ್ಕಿಂತ ಹೆಚ್ಚುವರಿ ಸಾಲವನ್ನು ಅಪೆಕ್ಸ್ ಬ್ಯಾಂಕ್ ಪಡೆಯಬೇಕಿದ್ದರೆ ಹೆಚ್ಚುವರಿಯಾಗಿ ಶೇ. 4ರಷ್ಟು ಬಡ್ಡಿ ಭರಿಸಬೇಕಿದೆ. ಅಪೆಕ್ಸ್ ಬ್ಯಾಂಕ್‌ನ ಮೇಲೆ ಬೀಳುವ ಹೆಚ್ಚುವರಿ ಹೊರೆಯನ್ನು ರಾಜ್ಯ ಸರಕಾರ ಭರಿಸಬೇಕು ಎಂದು ಮನವಿ ಮಾಡಿದ್ದಾರೆ. ಕಳೆದ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕ್‌ಗೆ ನಬಾರ್ಡ್ ಶೇ 4ರ ಬಡ್ಡಿ ದರದಲ್ಲಿ 5,450 ಕೋಟಿ ಸಾಲ ನೀಡಿತ್ತು. ಈ ಬಾರಿ ಶೇ 4ರ ಬಡ್ಡಿಯಲ್ಲಿ ನೀಡುವ ಸಾಲದ ಪ್ರಮಾಣವನ್ನು 2,700 ಕೋಟಿಗೆ ಸೀಮಿತಗೊಳಿಸಿದೆ. ಹೆಚ್ಚುವರಿ ಸಾಲ ನೀಡಲು ನಬಾರ್ಡ್ ಸಿದ್ಧವಿದ್ದರೂ ಅದಕ್ಕೆ ಶೇ 8.25 ರಷ್ಟು (ಶೇ 4.25 ಹೆಚ್ಚುವರಿ) ಬಡ್ಡಿ ನೀಡಬೇಕೆಂದು ಹೇಳುತ್ತಿದೆ. ಹೆಚ್ಚುವರಿ ಬಡ್ಡಿ ನೀಡಿ ಸಾಲ ಪಡೆಯದಿದ್ದರೆ ಅಪೆಕ್ಸ್, ಡಿಸಿಸಿ ಬ್ಯಾಂಕ್‌ಗಳು ಹಾಗೂ ಆ ಮೂಲಕ, ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯಿದೆ ಎಂದು ಆತಂಕವ್ಯಕ್ತಪಡಿಸಿದ್ದಾರೆ.

ಮುಂಗಾರು ಹಂಗಾಮಿನಲ್ಲಿ 114.40 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. 5.99 ಲಕ್ಷ ಕ್ವಿಂಟಲ್ ಬಿತ್ತನೆ ಬೀಜ, 26.77 ಲಕ್ಷ ಟನ್ ರಸಗೊಬ್ಬರಗಳ ಬೇಡಿಕೆಯಿದೆ. ಕೃಷಿ ಇಲಾಖೆ ಬಿತ್ತನೆಯ ಗುರಿ ಮುಟ್ಟಬೇಕಾದರೆ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಕಾಲದಲ್ಲಿ ಸಾಲ ಸೌಲಭ್ಯ ಒದಗಿಸಬೇಕಿದೆ. ಸ್ವಸಹಾಯ ಸಂಘಗಳಿಗೆ 3 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆಯಲು ಪೋರ್ಟಲ್‌ನಲ್ಲಿ ನೋಂದಣಿ ಮಾಡಬೇಕೆಂಬ ನಿಯಮವನ್ನೂ ಸರಳೀಕರಿಸಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ಕರಾವಳಿಯಲ್ಲಿ ಕಾನೂನು ಸುವ್ಯವಸ್ಥೆ ಹಾಳು

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರಕಾರದ ನಡವಳಿಕೆಯಿಂದ ದಕ್ಷಿಣ ಕನ್ನಡ ಸೇರಿದಂತೆ ಕರಾವಳಿ ಭಾಗದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ಹಾಳಾಗುತ್ತಿದೆ. ಇದನ್ನು ತಿದ್ದಿಕೊಳ್ಳದೆ ಪೊಲೀಸರ ಮೂಲಕ ಗೂಂಡಾಗಿರಿ ಮಾಡಿದ್ದೇ ಆದರೆ, ಬಿಜೆಪಿ ಕೈಕಟ್ಟಿಕೊಂಡು ಕೂರುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಈ ವಿಷಯವಾಗಿ ನಿನ್ನೆ ರಾತ್ರಿ ರಾಷ್ಟ್ರೀಯ ಮುಖಂಡರ ಜತೆ ಚರ್ಚೆ ಮಾಡಿದ್ದೇನೆ. ಇವತ್ತು ನಮ್ಮ ಸಂಸದರು, ಶಾಸಕರು ಪೊಲೀಸ್ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಲಿದ್ದಾರೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವರ ಗಡಿಪಾರು ಕುರಿತು ಮಾತನಾಡಿ, ರಾಜ ಮಹಾರಾಜರು ಹಿಂದೆ ನಮ್ಮ ದೇಶ ಆಳಿದ್ದರು. ಆಗ ಪಾಳೇಗಾರರು ಇದ್ದ ಬಗ್ಗೆ ನಾವು ಕೇಳಿದ್ದೇವೆ. ಆ ಪಾಳೇಗಾರಿಕೆಯನ್ನು ಹಂಗಿಸುವಂತೆ ರಾಜ್ಯದ ಕಾಂಗ್ರೆಸ್ ಸರಕಾರವು ಅಧಿಕಾರ ನಡೆಸುತ್ತಿದೆ. ಪ್ರಜಾಪ್ರಭುತ್ವವನ್ನು ಹಂಗಿಸುವಂತೆ ಸಿದ್ದರಾಮಯ್ಯರ ನೇತೃತ್ವದ ಸರಕಾರವು ತುಘಲಕ್ ದರ್ಬಾರ್ ನಡೆಸುತ್ತಿದೆ. ಕಳೆದ ಕೆಲವು ತಿಂಗಳಿನಿಂದ ಈ ಲಜ್ಜೆಗೆಟ್ಟ ಕಾಂಗ್ರೆಸ್ ಸರಕಾರದ ವರ್ತನೆ ಗಮನಿಸಿ. ರಾಜ್ಯದಲ್ಲಿ ಅಭಿವೃದ್ಧಿ ಆಗುತ್ತಿಲ್ಲವೆಂದು ಜನಾಕ್ರೋಶ ವ್ಯಕ್ತಪಡಿಸುತ್ತಿರುವ ಸಂದರ್ಭದಲ್ಲೇ ಮತ್ತೊಂದು ಕಡೆ ಸರಕಾರದ ಹುಳುಕು ಮುಚ್ಚಿಹಾಕಿಕೊಳ್ಳಲು ಇಂಥ ಘಟನೆಗಳು ನಡೆಯುತ್ತಿವೆ. ಸರಕಾರವು ಕೂಡ ಹಿಂದೂ ಕಾರ್ಯಕರ್ತರಿಗೆ ಅಪಮಾನ ಮಾಡಲು ಕುತಂತ್ರ ಮಾಡುತ್ತಿದೆ ಎಂದು ದೂರಿದರು.

ಸುಹಾಸ್ ಹತ್ಯೆ ನಡೆದಾಗ ಗೃಹ ಸಚಿವರು ಸುಹಾಸ್ ಮನೆಗೆ ಹೋಗದಂತೆ ಕೆಲವು ದುಷ್ಟ ಶಕ್ತಿಗಳು ಅವರನ್ನು ತಡೆದಿದ್ದವು. ಸುಹಾಸ್ ಶೆಟ್ಟಿ ಹತ್ಯೆ ಆದಾಗ ಮಹಿಳೆಯರೂ ಅದರಲ್ಲಿ ಭಾಗಿಯಾಗಿದ್ದರು. ಇದು ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಮೂರ್ನಾಲ್ಕು ಜನ ಮಹಿಳೆಯರು ರಸ್ತೆಯಲ್ಲಿ ನಿಂತು ಕೊಲೆಗಡುಕರು, ದೇಶದ್ರೋಹಿಗಳನ್ನು ಕಾರಿನಲ್ಲಿ ಕೂರಿಸಿ, ಪರಾರಿ ಆಗಲು ಸಹಕರಿಸಿದ್ದರು. ಅದರ ಕುರಿತು ಏನಾಗಿದೆ? ಅವರನ್ನು ಬಂಧಿಸಿದ್ದಾರಾ? ಎಂದು ಪ್ರಶ್ನಿಸಿದರು.

ಪೊಲೀಸರ ಮೇಲೆ ನಂಬಿಕೆ ಬರುತ್ತಿಲ್ಲ

ನಮ್ಮ ರಾಜ್ಯದಲ್ಲಿ ಚುನಾಯಿತ ಸರಕಾರವಿದೆ. ಪೊಲೀಸರು ಕಾನೂನು–ಸುವ್ಯವಸ್ಥೆ ಕಾಪಾಡುತ್ತಿದ್ದಾರೆ ಎಂಬ ನಂಬಿಕೆ ಬರುತ್ತಿಲ್ಲ. ಇದರ ನಡುವೆ ಸಂಘ ಪರಿವಾರದ ಹಿರಿಯರ ಮೇಲೆ ಎಫ್‌ಐಆರ್ ದಾಖಲಿಸಿದ್ದಾರೆ. ಅಲ್ಲದೆ ಹಿಂದೂ ಮುಖಂಡರ ವಿರುದ್ಧ ಎಫ್‌ಐಆರ್ ದಾಖಲಿಸಿ, ಕಾರ್ಯಕರ್ತರನ್ನು ಬೆದರಿಸುವ ಕುತಂತ್ರ ನಡೆಯುತ್ತಿದೆ. ಮಧ್ಯರಾತ್ರಿ ಕಾರ್ಯಕರ್ತರ ಮನೆಯ ಬಾಗಿಲು ತಟ್ಟಿ, ಅವರನ್ನು ವಿಚಾರಿಸುತ್ತಿದ್ದಾರೆ. ನಾವು ಪ್ರಜಾಪ್ರಭುತ್ವದಲ್ಲಿ ಇದ್ದೇವಾ?, ಎಲ್ಲಿದ್ದೇವೆ ನಾವು ಎಂದು ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ವಿಜಯನಗರದಲ್ಲಿ ಶಾಸಕ ಲೇಔಟ್ ಕೃಷ್ಣಪ್ಪ ಹಾಗೂ ಪ್ರಿಯಾಕೃಷ್ಣ ಅವರು ಆಯೋಜಿಸಿದ್ದ ಆರ್‌ಸಿಬಿ ಹಾಗೂ ಪಂಜಾಬ್ ಸೂಪರ್ ಕಿಂಗ್ಸ್‌ನಡುವಿನ ಐಪಿಎಲ್ ಫೈನಲ್ ಪಂದ್ಯಾವಳಿಯ ಲೈವ್‌ನಲ್ಲಿ ಸಾವಿರಾರು ಜನರು ಭಾಗವಹಿಸಿ ಸಂಭ್ರಮಿಸಿದರು.

ಕೋಲ್ಡ್ ಮಿಕ್ಸ್, ಇಕೋ ಫಿಕ್ಸ್ ಬಳಸಿ ರಸ್ತೆ ಗುಂಡಿ ಮುಚ್ಚಲು ಸಲಹೆ

ಗುಂಡಿಗಳನ್ನು ಮುಚ್ಚಲು ತುಷಾರ್ ಗಿರಿನಾಥ್ ಸೂಚನೆ

ಬೆಂಗಳೂರು: ನಗರದಲ್ಲಿ ಕೋಲ್ಡ್ ಮಿಕ್ಸ್ ಹಾಗೂ ಇಕೋ ಮಿಕ್ಸ್ ಬಳಸಿ ರಸ್ತೆ ಗುಂಡಿಗಳನ್ನು ಮುಚ್ಚಿ ಎಂದು ಅಧಿಕಾರಿಗಳಿಗೆ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಕೆ ಕೇಂದ್ರ ಕಚೇರಿಯ ಆಡಳಿತಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿ, ನಗರದಲ್ಲಿ ತ್ವರಿತಗತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ಮಳೆಯಿರುವ ಹಿನ್ನೆಲೆ ಇಕೋ ಫಿಕ್ಸ್ ಹಾಗೂ ಕೋಲ್ಡ್ ಮಿಕ್ಸ್ ಬಳಸಿಕೊಂಡು ರಸ್ತೆ ಗುಂಡಿಗಳನ್ನು ಮುಚ್ಚಿ. ಬಿಬಿಎಂಪಿ ಎಲ್ಲಾ 8 ವಲಯಗಳಲ್ಲಿ ಸ್ಥಳೀಯ ಗುತ್ತಿಗೆದಾರ ಮೂಲಕ ಅವಶ್ಯಕ ಡಾಂಬರನ್ನು ಪಡೆದು ತ್ವರಿತಗತಿಯಲ್ಲಿ ರಸ್ತೆಗುಂಡಿಗಳನ್ನು ಮುಚ್ಚಬೇಕು. ರಸ್ತೆ ಗುಂಡಿಗಳನ್ನು ಮುಚ್ಚುವ ವರದಿಯನ್ನು ಪ್ರತಿ ನಿತ್ಯ ನೀಡಬೇಕು ಎಂದು ಸೂಚನೆ ನೀಡಿದರು.

ಪಾಲಿಕೆ ಕೇಂದ್ರ ಕಚೇರಿಯಲ್ಲಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳ ಜತೆ ಸಭೆ ನಡೆಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ 690 ಕೋಟಿ ರು. ವೆಚ್ಚದಲ್ಲಿ ರಸ್ತೆಗಳಿಗೆ ಡಾಂಬರೀಕರಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಈ ಸಂಬಂಧ ತ್ವರಿತಗತಿಯಲ್ಲಿ ರಸ್ತೆಗಳಿಗೆ ಡಾಂಬರೀಕರಣ ಮಾಡಿ ಪೂರ್ಣಗೊಳಿಸಬೇಕು. ನಗರದಲ್ಲಿ ಪ್ರಮುಖವಾಗಿ ಮಳೆಗಾಲದ ವೇಳೆ 82 ಕಡೆಯ ರಸ್ತೆಗಳಲ್ಲಿ ನೀರು ನಿಂತು ಸಂಚಾರ ದಟ್ಟಣೆ ಹೆಚ್ಚಾಗಲಿದೆ. ಅದನ್ನು ತಪ್ಪಿಸುವ ಸಲುವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಈ ಸಂಬಂಧ ರಸ್ತೆಗಳಲ್ಲಿ ನೀರು ನಿಲ್ಲದಂತೆ ಕಾಮಗಾರಿ ಮಾಡಿ ಸೈಡ್ ಡ್ರೈನ್ ಗಳಿಗೆ ಸರಾಗವಾಗಿ ನೀರು ಹರಿದು ಹೋಗುವ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ವಿಶೇಷ ಆಯುಕ್ತರುಗಳಾದ ಡಾ ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ನವೀನ್ ಕುಮಾರ್ ರಾಜು, ವಲಯ ಆಯುಕ್ತರುಗಳಾದ ಸತೀಶ್, ರಮ್ಯಾ, ರಮೇಶ್, ಕರೀಗೌಡ, ಸ್ನೇಹಲ್, ದಿಗ್ವಿಜಯ್ ಬೋಡ್ಕೆ, ಸಂಚಾರಿ ಪೊಲೀಸ್ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಅನುಚೇತ್, ಎಲ್ಲಾ ವಲಯ ಜಂಟಿ ಆಯುಕ್ತರು, ಮುಖ್ಯ ಅಭಿಯಂತರರು, ಸಂಬಂಧಪಟ್ಟ ಅಧಿಕಾರಿಗಳು ಇದ್ದರು.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ನಿಗಾವಹಿಸಿ

ನಗರದಲ್ಲಿ 44 ಕಡೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಯಾವುದೇ ಸಮಸ್ಯೆಯಾಗದಂತೆ ತಾತ್ಕಾಲಿಕ ಕ್ರಮಗಳನ್ನು ತೆಗೆದುಕೊಳ್ಳುವ ಜತೆಗೆ ಶಾಶ್ವತ ಪರಿಹಾರಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಮುಖ್ಯ ಆಯುಕ್ತ ಮಹೇಶ್ವರ್ ರಾವ್ ರವರು ಮಾತನಾಡಿ, ನಗರದಲ್ಲಿ ಮಳೆಗಾಲದ ವೇಳೆ ಪ್ರವಾಹ ಪೀಡಿತ ಪ್ರದೇಶಗಳು ಹಾಗೂ ರಸ್ತೆಗಳಲ್ಲಿ ಜಲಾವೃತವಾಗುವ ಸ್ಥಳಗಳಿಗೆ ಮೊದಲ ಆದ್ಯತೆ ನೀಡಬೇಕು. ಆ ಸ್ಥಳಗಳಲ್ಲಿ ಇರುವ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಪ್ರತಿಭಾ ಪುರಸ್ಕಾರದ ಸಲುವಾಗಿ ಮಿಲೆಕ್ಸ್ ವತಿಯಿಂದ ಝೀ ಕನ್ನಡದ ರಿಯಾಲಿಟಿ ಶೋ ಸರಿಗಮಪ ಸೀಸನ್–21 ರ ಸ್ಪರ್ಧಿ ದ್ಯಾಮೇಶ್‌ಗೆ ಸಮನಂ ಫುಡ್ ಪ್ರೈವೇಟ್ ಲಿಮಿಟೆಡ್ ಸಿಇಓ ನಾರಾಯಣ್ ಒಂದು ಲಕ್ಷ ಪ್ರೋತ್ಸಾಹ ಧನದ ಚೆಕ್ ವಿತರಿಸಿದರು.

ಸಮಾಚಾರ ಸಣ್ಣದಲ್ಲ

ಗೌಡಾ ನಿರಾಕರಿಸಿದ ಸತೀಶ್ ಜಾರಕಿಹೊಳಿ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನೀಡಿದ ಗೌರವ ಡಾಕ್ಟರೇಟ್ ಡಿ.ಲಿಟ್ ಗೌರವ ಪದವಿಯನ್ನು ಸ್ವೀಕರಿಸಲು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ನಿರಾಕರಿಸಿದ್ದಾರೆ. ಈ ಸಂಬಂಧ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಪತ್ರ ಬರೆದಿರುವ ಅವರು, ವಿಶ್ವವಿದ್ಯಾಲಯದ ವತಿಯಿಂದ ನನಗೆ ನೀಡಿದಂತಹ ಗೌರವ ಡಾಕ್ಟರೇಟ್ ಪದವಿಯನ್ನು ಹಿಂಪಡೆಯಲು ಕೋರುತ್ತೇನೆ. ನನ್ನ ಈ ನಿರ್ಧಾರವನ್ನು ಅನ್ಯತಾ ಭಾವಿಸದೆ ನಾನು ಮನಸೋಇಚ್ಛೆ ಕೈಗೊಂಡ ನಿರ್ಧಾರವಾಗಿದ್ದು, ಈ ತೀರ್ಮಾನವನ್ನು ಸ್ವಾಗತಿಸುತ್ತಿರೆಂದು ಭಾವಿಸುವುದಾಗಿ ಹೇಳಿದ್ದಾರೆ. ಗೌರವ ಡಾಕ್ಟರೇಟ್ ಪದವಿಯನ್ನು ನನಗೆ ಪ್ರದಾನಿಸುವ ಮೂಲಕ ತಾವು ಸಮಾಜದಲ್ಲಿ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿರುತ್ತಿರಿ. ಸಾಮಾಜಿಕ ಸೇವೆಯಲ್ಲಿ ನಾನು ಕೈಗೊಂಡಿರುವ ಕಾರ್ಯಕ್ರಮಗಳನ್ನು ಸಫಲಗೊಳಿಸುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ರೂಪಿಸಿಕೊಂಡಿದ್ದೇನೆ. ಅದನ್ನು ಕಾರ್ಯರೂಪಕ್ಕೆ ತರುವಂತಹ ಗುರುತರವಾದ ಹೊಣೆಗಾರಿಕೆ ನನ್ನ ಮೇಲಿದೆ. ಇದಕ್ಕೆ ಇನ್ನೂ ಹೆಚ್ಚಿನ ಕಾಲಾವಕಾಶ ಅವಶ್ಯಕತೆ ಇರುತ್ತದೆ ಎಂದಿದ್ದಾರೆ. ರಾಜ್ಯ ಮುಕ್ತ ವಿವಿ ಕುಲಾಧಿಪತಿ, ಸಮಕುಲಾಧಿಪತಿ, ಕುಲಪತಿ ಮತ್ತು ವ್ಯವಸ್ಥಾಪನ ಮಂಡಳಿ ಸದಸ್ಯರ ವತಿಯಿಂದ ಮಾ.27ರಂದು ವಿವಿಯ ಗೌರವ ಡಾಕ್ಟರೇಟ್ ಡಿ.ಲಿಟ್ ಗೌರವ ಪದವಿಯನ್ನು ನೀಡುವುದರ ಮೂಲಕ ಸನ್ಮಾನಿಸಿದ ವ್ಯವಸ್ಥಾಪನಾ ಮಂಡಳಿಗೆ ನಾನು ಹುತ್ಪೂರ್ವಕ ಆಬಾರಿಯಾಗಿದ್ದೇನೆ ಎಂದು ಹೇಳಿದ್ದಾರೆ.

ಆಪರೇಷನ್ ಸಿಂದೂರ ಪ್ರಬಂಧ ಸ್ಪರ್ಧೆ ಆರಂಭ

ದೆಹಲಿ: 'ಆಪರೇಷನ್ ಸಿಂದೂರ' ವಿಷಯವಾಗಿ ಜೂನ್ 1 ರಿಂದ 30ರವರೆಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ. ಮೊದಲು ಮೂವರಯ ವಿಜೇತರಿಗೆ ತಲಾ 10,000 ರು. ನಗದು ಬಹುಮಾನ ನೀಡಲಾಗುವುದು ಮತ್ತು ದೆಹಲಿಯ ಕೆಂಪು ಕೋಟೆಯಲ್ಲಿ ನಡೆಯುವ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ವಿಶೇಷ ಅವಕಾಶ ನೀಡಲಾಗುವುದು. ಯಾವುದೇ ವ್ಯಕ್ತಿ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಹಿಂದಿ, ಇಂಗ್ಲಿಷ್‌ನಲ್ಲಿ ಪ್ರಬಂಧ ಬರೆಯಬಹುದು. ಸ್ಪರ್ಧೆಯ ವಿವರ ರಕ್ಷಣಾ ಇಲಾಖೆ ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿದೆ ಎಂದು ರಕ್ಷಣಾ ಸಚಿವಾಲಯ ಭಾನುವಾರ 'ಎಕ್ಸ್' ಖಾತೆಯಲ್ಲಿ ಪ್ರಕಟಿಸಿದೆ. ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22ರಂದು ನಡೆದ ಭಯೋತ್ಪಾದಕರ ದಾಳಿಯಲ್ಲಿ 26 ಜನರು ಸಾವಿಗೀಡಾಗಿದ್ದಕ್ಕೆ ಪ್ರತೀಕಾರವಾಗಿ ಭಾರತದ ಸೇನಾಪಡೆಗಳು ಮೇ 7ರಂದು 'ಆಪರೇಷನ್ ಸಿಂದೂರ' ಸೇನಾ ಕಾರ್ಯಾಚರಣೆ ಆರಂಭಿಸಿ ಪಾಕ್‌ನಲ್ಲಿನ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿ 100ಕ್ಕೂ ಅಧಿಕ ಉಗ್ರರು, ಪ್ರಮುಖರನ್ನು ಕೊಂದು ಹಾಕಿದವು. ಪಾಕ್‌ನ ಮನವಿಯ ಮೇರೆಗೆ ಮೇ 10ರ ಸಂಜೆ ಕದನ ವಿರಾಮ ಘೋಷಣೆಯಾಗಿದೆ. ಹಾಗಿದ್ದೂ ಈಗಲೂ ಆಪರೇಷನ್ ಸಿಂದೂರ ಜಾಗೃತಾವಸ್ಥೆಯಲ್ಲೇ ಇದೆ.

ಜೈಷೆ ಉಗ್ರ, ಮೌಲಾನಾ ಅಬ್ದುಲ್ ಅಜೀಜ್ ಹತ

ಇಸ್ಲಾಮಾಬಾದ್: ಭಾರತದಲ್ಲಿ ಭಯೋತ್ಪಾದನೆ ಚಟುವಟಿಕೆಗಳಿಗೆ ಗಡಿಯಾಚೆಯಿಂದಲೇ ಪ್ರೇರಣೆ ನೀಡುತ್ತಿದ್ದ ಮತ್ತೊಬ್ಬ ಭಯೋತ್ಪಾದಕ ಮೌಲಾನಾ

ಅಬ್ದುಲ್ ಅಜೀಜ್ ಇಸಾರ್ ಪಾಕಿಸ್ತಾನದಲ್ಲಿ ನಿಗೂಢವಾಗಿ ಹತನಾಗಿದ್ದಾನೆ. ಜೈಶ್-ಎ-ಮೊಹಮ್ಮದ್ ಉಗ್ರ ಸಂಘಟನೆಯ ಹಿರಿಯ ಕಮಾಂಡರ್ ಮೌಲಾನಾ ಅಬ್ದುಲ್ ಅಜೀಜ್ ಇಸಾರ್‌ನನ್ನು ಅಪರಿಚಿತ ಬಂದೂಕುಧಾರಿಗಳು ಗುಂಡಿಕ್ಕಿ ಕೊಂದಿದ್ದಾರೆ. ಅಜೀಜ್ ಹೇಗೆ ಸತ್ತ ಎಂಬುದೇ ನಿಗೂಢವಾಗಿದೆ. ಉಗ್ರ ಪ್ರಮುಖನ ನಿಗೂಢ ಸಾವು ಪಾಕಿಸ್ತಾನದ ಗುಪ್ತಚರ ವಲಯ ಮತ್ತು ಭಯೋತ್ಪಾದಕರ ಜಾಲದಲ್ಲಿ ಸಂಚಲನ ಮೂಡಿಸಿದೆ. ಅಜೀಜ್ ಸಾವು ಜೈಷ್ ಎ ಮೊಹಮ್ಮದ್ ಉಗ್ರ ಸಂಘಟನೆಗೆ, ವಿಶೇಷವಾಗಿ ಸ್ಥಳೀಯ ನೇಮಕಗಳು ಮತ್ತು ತರಬೇತಿ ಕಾರ್ಯಕ್ರಮಗಳಿಗೆ ದೊಡ್ಡ ಹೊಡೆತ ನೀಡಿದೆ. ಭಾರತದ ವಿರುದ್ಧ ಸದಾ ವಿಷ ಕಾರುತ್ತಿದ್ದ ಕುಖ್ಯಾತ ಉಗ್ರ, ಅಬ್ದುಲ್‌ನ ಶವ ಜೈಷ್ ಪ್ರಧಾನ ಕಚೇರಿ ಇರುವ ಬಹವಾಲ್‌ಪುರದಲ್ಲಿ ಮಂಗಳವಾರ ಪತ್ತೆಯಾಗಿದೆ. ಉಗ್ರ ನಾಯಕನ ನಿಗೂಢ ಸಾವಿನ ಬಗ್ಗೆ ಜೈಷ್ ಉಗ್ರ ಸಂಘಟನೆಯಾಗಲೀ, ಪಾಕ್ ಸರಕಾರವಾಗಲೀ ಈವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಜೈಷ್ ಸಂಘಟನೆಗೆ ಸಂಬಂಧಿಸಿದ ಸಾಮಾಜಿಕ ಮಾಧ್ಯಮ ಖಾತೆಗಳು ಅಜೀಜ್ ಸಾವು ಮತ್ತು ಅಂತ್ಯಕ್ರಿಯೆ ಸುದ್ದಿಯನ್ನು ಖಚಿತಪಡಿಸಿವೆ.

ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ

ಬೆಂಗಳೂರು: ಮತಗಟ್ಟೆ ಮಟ್ಟದಲ್ಲಿ ವಿಶೇಷ ಶಿಬಿರಗಳ ಮೂಲಕ ನಡೆಸಲಾಗುತ್ತಿರುವ ಪರಿಶಿಷ್ಟ ಜಾತಿಗಳ ಸಮೀಕ್ಷಾ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಪಾಲಿಕೆ ಸಾಮಾನ್ಯ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ನಾಗರಿಕರಲ್ಲಿ ಮನವಿ ಮಾಡಿದರು. ಪರಿಶಿಷ್ಟ ಜಾತಿಗಳ ಸಮೀಕ್ಷಾ ಕಾರ್ಯವನ್ನು 8ನೇ ಮೇ 2025 ರವರೆಗೆ ವಿಸ್ತರಿಸಲಾಗಿದ್ದು, ವಿಶೇಷ ಶಿಬಿರ ಹಾಗೂ ಆನ್ ಲೈನ್ ಮೂಲಕ ಸ್ವಯಂ ಘೋಷಣೆ ಮಾಡಿಕೊಳ್ಳಬಹುದು. ನಗರದಲ್ಲಿ ನಿಮ್ಮ ಹತ್ತಿರದ ಮತಗಟ್ಟೆಗಳಲ್ಲಿ ವಿಶೇಷ ಶಿಬಿರಗಳನ್ನು ಸ್ಥಾಪಿಸಲಾ ಗಿದ್ದು, ನಿಮ್ಮ ಹತ್ತಿರದ ವಿಶೇಷ ಶಿಬಿರಗಳನ್ನು ಈ ಲಿಂಕ್ https://bbmp.gov.in/castsurvey/ ಮೂಲಕ ತಿಳಿಯಿರಿ. ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ತಿಳಿಯಿರಿ. ವಿಶೇಷ ಶಿಬಿರದಲ್ಲಿ ಸಮೀಕ್ಷೆಗೆ ಹೋಗುವವರು ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿ ತೆಗೆದುಕೊಂಡು ಹೋಗುವುದು ಕಡ್ಡಾಯವಾಗಿದೆ ಎಂದರು.

ವಿರಾಮ
ಪ್ರತಿ ಭಾನುವಾರ

ನೀವು ಭಾಷಾ ತಜ್ಞರೇ? ಇಲ್ಲವೇ ಇತಿಹಾಸಕಾರರೇ?

ಭಾವನೆಗೆ ಧಕ್ಕೆ ತಂದು ಇಲ್ಲಿ ಸಂಪಾದನೆ ಮಾಡಬೇಕಾ? ಮೊದಲು ಕ್ಷಮೆ ಕೇಳಿ

ಕಮಲ್‌ಗೆ ಹೈ ಚಾಟಿ

ಬೆಂಗಳೂರು: ಭಾಷೆ ಹುಟ್ಟಿರುವುದರ ಬಗ್ಗೆ ಮಾತನಾಡುವುದಕ್ಕೆ ನೀವು ಭಾಷಾ ತಜ್ಞರೇ? ಇಲ್ಲವೇ ಇತಿಹಾಸಕಾರರೇ? ಎಂದು ಕರ್ನಾಟಕ ಹೈಕೋರ್ಟ್ ಕಮಲ್ ಹಾಸನ್‌ಗೆ ಖಾರವಾಗಿ ಪ್ರಶ್ನಿಸಿದೆ.

'ಥಗ್ ಲೈಫ್' ಚಲನಚಿತ್ರ ಬಿಡುಗಡೆಗೆ ಕರ್ನಾಟಕದಲ್ಲಿ ವಿರೋಧ ವ್ಯಕ್ತವಾಗುತ್ತಿದ್ದಂತೆ ಕಮಲ್ ಹಾಸನ್ ಅವರು ಬಿಡುಗಡೆಗೆ ಅವಕಾಶ ನೀಡಬೇಕು ಮತ್ತು ಚಿತ್ರ ಮಂದಿರಕ್ಕೆ ಪೊಲೀಸ್ ಭದ್ರತೆ ಒದಗಿಸಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ನಾಗಪ್ರಸನ್ನ ಅವರಿದ್ದ ಪೀಠ, ಕಮಲ್ ಹಾಸನ್ ಅವರನ್ನು ತರಾಟೆಗೆ ತೆಗೆದುಕೊಂಡಿತು.

ಈ ವೇಳೆ ಕಮಲ್ ಹಾಸನ್ ಪರ ವಕೀಲ ಧ್ಯಾನ್ ಚಿನ್ನಪ್ಪ ವಾದ ಮಂಡನೆ ಮಾಡಿ, ಕನ್ನಡ ನಾಡು ಮತ್ತು ಕರ್ನಾಟಕದ ಬಗ್ಗೆ ಪ್ರೀತಿ ಇದೆ ಎಂದು ಕಮಲ್ ಹೇಳಿದ್ದಾರೆ. ದುರುದ್ದೇಶವಿದ್ದರೆ ಮಾತ್ರ ಕ್ಷಮೆ ಕೋರಬೇಕು ಎಂದು ಕೆಎಫ್‌ಸಿಸಿಗೆ ಬರೆದಿರುವ ಪತ್ರದಲ್ಲಿ ಘೋಷಣೆ ಮಾಡಿದ್ದಾರೆ. ಕರ್ನಾಟಕದಲ್ಲಿ ಚಿತ್ರ ಬಿಡುಗಡೆಯನ್ನು ವಿಳಂಬಿಸಬಹುದು ಎಂದಿದ್ದಾರೆ. ಕೆಎಫ್‌ಸಿಸಿ ಜತೆ ಸಮಾಲೋಚನೆ ನಡೆಸಲಾಗುವುದು ಎಂದಿದ್ದಾರೆ.ಅತ್ಯಂತ ಗೌರವಪೂರ್ವಕವಾಗಿ ಕಮಲ್ ಹಾಸನ್ ಹೇಳಿಕೆ ನೀಡಿದ್ದು, ಅದರಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದಾರೆ. ಸಮಾಲೋಚನೆ ನಡೆಸುವವರೆಗೆ ಸಿನಿಮಾ ಬಿಡುಗಡೆ ಮಾಡದಿರಲು ಕಮಲ್ ನಿರ್ಧರಿಸಿದ್ದಾರೆ ಎಂದರು.

ಅದಕ್ಕೆ ಪೀಠವು. ಅಹಂ ಮುಂದೆ ಮಾಡಿದ್ದೀರಿ. ಅದು ಕಮಲ್ ಹಾಸನ್ ಅಥವಾ ಬೇರೆ ಯಾರೇ ಆಗಿರಬಹುದು. ಇದು ಜನರ ಭಾವನೆಗಳಿಗೆ ಹಾನಿ ಮಾಡುವ ವಿಚಾರವಾಗಿದೆ. ಕಮಲ್ ಹಾಸನ್ ಹೇಳಿಕೆಯಿಂದ ಇಷ್ಟೆಲ್ಲಾ ಆಗಿದ್ದು, ಇದೆಲ್ಲವನ್ನೂ ಅವರ ಹೇಳಿಕೆಯೇ ನಿಲ್ಲಿಸಬಹುದು.

ಕೆಎಫ್‌ಸಿಸಿಗೆ ಬರೆದಿರುವ ಪತ್ರದಲ್ಲಿ ಕ್ಷಮೆ ವಿಚಾರ ಹೊರತುಪಡಿಸಿ ಉಳಿದೆಲ್ಲವೂ ಇದೆ. ವಾಣಿಜ್ಯ ಉದ್ದೇಶದಲ್ಲಿ ಸಿನಿಮಾ ಮಾಡಿದ್ದೀರಾ, ನಿಮ್ಮ ತಪ್ಪಿಗೆ ಪೊಲೀಸರು ಭದ್ರತೆ ನೀಡಬೇಕಾ? ಇದರಲ್ಲಿ ನಿಮ್ಮ ನಿಲುವೇನು? ಎಂದು ನ್ಯಾಯಮೂರ್ತಿ ಕೇಳಿದರು. ಕಮಲ್ ಹಾಸನ್ ಆಗಿರಲಿ ಅಥವಾ ಯಾರೇ ಆಗಿರಲಿ ಜನರ ಭಾವನೆಗೆ ನೋವುಂಟು ಮಾಡಬಾರದು. ಅವರಿಗೆ ಕ್ಷಮೆ ಕೇಳಲು ಆತ್ಮಪ್ರತಿಷ್ಠೆ ಅಡ್ಡಿಯಾಗುತ್ತಿದೆ ಎಂದು ಕಿಡಿಕಾರಿದೆ. ಸುದೀರ್ಘ ವಿಚಾರಣೆ ನಡೆಸಿದ್ದ ಪೀಠವು, ಕಮಲ್ ಹಾಸನ್ ಕನ್ನಡಿಗರ ಕ್ಷಮೆ ಕೋರುವ ಮೂಲಕ ವಿವಾದಕ್ಕೆ ಅಂತ್ಯ ಹಾಡಲು ಸಲಹೆ ನೀಡಿತು.

ಈ ಸಂಬಂಧ ಸೂಚನೆ ಪಡೆದು, ವಾದಿಸುವುದಾಗಿ ಪೀಠಕ್ಕೆ ತಿಳಿಸಿದ್ದ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ ಅವರು ಸೋಮವಾರ ಮಧ್ಯಾಹ್ನದ ನಂತರದ ವಿಚಾರಣೆಯಲ್ಲಿ ಕೆಎಫ್‌ಸಿಸಿಗೆ ಕಮಲ್ ಹಾಸನ್ ಬರೆದಿರುವ ಪತ್ರವನ್ನು ಓದುವ ಮೂಲಕ ಸಮರ್ಥನೆಗೆ ಮುಂದಾದರು. ಸದ್ಯಕ್ಕೆ ಕರ್ನಾಟಕದಲ್ಲಿ ಚಿತ್ರ ಬಿಡುಗಡೆ ಮಾಡದಿರಲು ಕಮಲ್ ಹಾಸನ್ ನಿರ್ಧರಿಸಿದ್ದಾರೆ. ಹೀಗಾಗಿ, ಪೊಲೀಸ್ ರಕ್ಷಣೆ ಕೋರುವುದಿಲ್ಲ, ಈ ನಡುವೆ, ಕೆಎಸ್‌ಸಿಸಿ ಜತೆ ಸಮಾಲೋಚನೆ ನಡೆಸಲು ಕಮಲ್ ನಿರ್ಧರಿಸಿದ್ದಾರೆ ಎಂದರು. ಇದನ್ನು ಆಲಿಸಿದ ಪೀಠವು ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಿತು.

ಕಮಲ್ ಹಾಸನ್ ಭಾಷಾ ತಜ್ಞರೇ?: ತಮಿಳು ಭಾಷೆಯಿಂದಲೇ ಕನ್ನಡ ಭಾಷೆ ಜನ್ಮ ತಾಳಿದೆ ಎಂಬುದಾಗಿ ಹೇಳಲು ನೀವು ಭಾಷಾ ತಜ್ಞರೇ?ಎಂದು ಕಮಲ್ ಹಾಸನ್ ಅವರನ್ನು ನ್ಯಾಯಪೀಠ ಪ್ರಶ್ನಿಸಿತು. ಜತೆಗೆ, ಮೌಖಿಕವಾಗಿ ಕ್ಷಮೆ ಯಾಚಿಸುವಂತೆಯೂ ಸೂಚಿಸಿದೆ. ನೀವು ಕಮಲ್ ಹಾಸನ್ ಆಗಿರಬಹುದು. ಬಹುಜನರ ಭಾವನೆಗಳನ್ನು ನೋಯಿಸುವುದಕ್ಕೆ ಅವಕಾಶವಿಲ್ಲ ಎಂದು ಬೆಳಗಿನ ಜಾವ ನಡೆದ ವಿಚಾರಣೆ ವೇಳೆ ಹೈಕೋರ್ಟ್ ತಾಕೀತು ಮಾಡಿತು.

ಆದೇಶ ಪಾಲಿಸುವ ವಿಶ್ವಾಸವಿದೆ

ಕಮಲಹಾಸನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾ ಡಿದ್ದು, ನ್ಯಾಯಾಲಯ ಎಲ್ಲರನ್ನು ಗಮನದಲ್ಲಿಟ್ಟು ಕೊಂಡು, ರಾಜ್ಯದ ಹಿತ, ಭಾಷೆ ಕಾಪಾಡಲು ತನ್ನ ಅಭಿಪ್ರಾಯ ತಿಳಿಸಿರುತ್ತದೆ. ಈ ವಿವಾದದ ಬಗ್ಗೆ ಸಾಹಿತಿಗಳು ಹಾಗೂ ತಜ್ಞರ ಜತೆ ಚರ್ಚೆ ಮಾಡಿದೆ. ಆಗ ನನಗೆ ತಿಳಿದಿದ್ದು, ನಾವು ದ್ರಾವಿಡ ಭಾಗಕ್ಕೆ ಸೇರಿದವರು. ಇಲ್ಲಿ ಮೇಲು ಕೀಳು ಎಂಬ ಭೇದವಿಲ್ಲ. ನಮ್ಮ ಭಾಷೆಗಳು ಒಂದರ ಜತೆ ಮತ್ತೊಂದು ತನ್ನದೇ ಆದ ರೀತಿಯಲ್ಲಿ ಬೆಸೆದುಕೊಂಡಿವೆ. ಕಮಲ್ ಹಾಸನ್ ಅವರ ಹೇಳಿಕೆ ವಿಚಾರ ನ್ಯಾಯಾಲಯ ಮೆಟ್ಟಿಲೇರಿದ್ದು, ಅದರ ಆದೇಶ ನಾವೆಲ್ಲರೂ ಪಾಲನೆ ಮಾಡಬೇಕು. ಇದಕ್ಕೆ ನನ್ನ ಸಹಮತವಿದೆ. ಕಮಲ್ ಹಾಸನ್ ಅವರು ನ್ಯಾಯಾಲಯದ ಆದೇಶ ಪಾಲನೆ ಮಾಡುತ್ತಾರೆ ಎಂಬ ವಿಶ್ವಾಸವಿದೆ. ಈ ವಿಚಾರವನ್ನು ಬೇರೆ ಹಂತಕ್ಕೆ ತೆಗೆದುಕೊಂಡು ಹೋಗುವುದು ಬೇಡ. ಕಾನೂನು ಕೈಗೆ ತೆಗೆದುಕೊಳ್ಳುವುದು, ಚಿತ್ರ ಮಂದಿರಗಳ ಮುಂದೆ ಗಲಾಟೆ ಮಾಡುವುದು ಬೇಡ ಎಂದು ಕನ್ನಡ ಸಂಘಟನೆಗಳಿಗೆ ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಕ್ಷಮೆ ಕೇಳದೆ ಕಮಲ್ ಮತ್ತೆ ಮೊಂಡಾಟ

ನಟ ಕಮಲ್ ಹಾಸನ್ ಅವರು ಕ್ಷಮೆ ಕೇಳಬೇಕು ಎಂದು ಹೈಕೋರ್ಟ್ ಮೌಖಿಕ ಸೂಚನೆ ನೀಡಿದೆ ಎಂದು ವರದಿಯಾಗುತ್ತಿರುವ ಸಂದರ್ಭದಲ್ಲಿಯೇ ಅವರು ಸುದೀರ್ಘ ಪತ್ರವೊಂದನ್ನು ಬರೆದಿದ್ದಾರೆ. ತಮಿಳಿನ 'ಥಗ್ ಲೈಫ್' ಆಡಿಯೋ ಬಿಡುಗಡೆ ಸಮಾರಂಭದಲ್ಲಿ ದಂತಕಥೆ ಡಾ. ರಾಜ್‌ಕುಮಾರ್ ಅವರ ಕುಟುಂಬದ ಬಗ್ಗೆ ಹಾಗೂ ವಿಶೇಷವಾಗಿ ಶಿವರಾಜ್‌ಕುಮಾರ್ ಅವರ ಬಗ್ಗೆ ನಿಜವಾದ ಪ್ರೀತಿಯಿಂದ ಹೇಳಲಾಗಿರುವ ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ಅದನ್ನು ಬೇರೆ ರೀತಿ ಭಾವಿಸಿರುವುದು ನನಗೂ ನೋವುಂಟು ಮಾಡಿದೆ. ನಾವೆಲ್ಲರೂ ಒಂದೇ ಮತ್ತು ಒಂದೇ ಕುಟುಂಬದವರು ಎನ್ನುವುದಷ್ಟೇ ನನ್ನ ಮಾತಾಗಿತ್ತು. ಕನ್ನಡವನ್ನು ಯಾವುದೇ ರೀತಿಯಲ್ಲಿ ಕಮ್ಮಿ ಅಂತ ಹೇಳುವುದು ನನ್ನ ಉದ್ದೇಶವಲ್ಲ ಎಂದು ಪತ್ರದಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿಲ್ಲ ಬಿಡುಗಡೆ

ಕಮಲ್‌ಹಾಸನ್ ಸಿನಿಮಾದ ವಿವಾದ ಕೊನೆ ಯಾಗದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ವಿತರಣೆಯ ಹಕ್ಕು ಪಡೆದಿದ್ದ ವಿತರಕ ವೆಂಕಟೇಶ್ ಸದ್ಯ ಕರ್ನಾಟಕದಲ್ಲಿ ಸಿನಿಮಾ ಬಿಡುಗಡೆ ಮಾಡದೇ ಇರಲು ನಿರ್ಧರಿಸಿದ್ದಾರೆ. ಇದರಿಂದ 'ಥಗ್ಸ್ ಲೈಫ್' ಕರುನಾಡಿನಲ್ಲಿ ಸಂಪೂರ್ಣ ಕುಗ್ಗಿದೆ. ಈ ಹಿಂದೆ ಕಮಲ್ ಹಾಸನ್ ಅಭಿನಯದ ವಿಕ್ರಮ್ ತೆರೆಗೆ ಬಂದಿತ್ತು. ಕಮಲ್ ಕನ್ನಡ ಸಿನಿಮಾದಲ್ಲಿ ನಟಿಸಿದ್ದರಿಂದ ಪ್ರೇಕ್ಷಕರು ಕಮಲ್ ಅವರನ್ನು ಕರುನಾಡಿನ ಮಗ ಎನ್ನುವಂತೆ ಭಾವಿಸಿ ಸಿನಿಮಾ ಗೆಲ್ಲಿಸಿದ್ದರು. ವಿಕ್ರಮ್ ಕರುನಾಡಿನಲ್ಲಿಯೇ ಬರೋಬ್ಬರಿ ಎಪ್ಪತ್ತು ಕೋಟಿ ಗಳಿಸಿತ್ತು. ಆದರೆ ಈಗ ಕಮಲ್ ಈಗ ವರಸೆ ಬದಲಾಯಿಸಿದ್ದಾರೆ. ತನ್ನನ್ನು ಕೈಹಿಡಿದ ಕನ್ನಡ ಭಾಷೆಯ ಬಗ್ಗೆಯೇ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಇದರಿಂದ ಕಮಲ್ ಅಭಿನಯದ 'ಥಗ್ ಲೈಫ್' ಕರುನಾಡಿನಲ್ಲಿ ಸಂಪೂರ್ಣ ಸೋತಿದೆ. ನೂರು ಕೋಟಿಗೂ ಹೆಚ್ಚು ನಷ್ಟವಾಗಿದ್ದು, ಕರುನಾಡಿನ ಜನತೆಯನ್ನು ಕೆಣಕ್ಕಿದರ ಫಲವಾಗಿದೆ.

ಕೆಎಲ್‌ಇ ವಿಶ್ವವಿದ್ಯಾಲಯದ 15 ನೇ ಘಟಿಕೋತ್ಸವದಲ್ಲಿ ಜೆ.ಪಿ ನಡ್ಡಾ ಅಭಿಮತ

ವೈದ್ಯಕೀಯ ರಂಗದಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಳ್ಳಿ

ಬೆಳಗಾವಿಯ ಕೆಎಲ್‌ಇ ಕೆಎಲ್‌ಇ ವಿಶ್ವವಿದ್ಯಾಲಯದ 15 ನೇ ಘಟಿಕೋತ್ಸ ಸಮಾರಂಭದಲ್ಲಿ ಪಾಲ್ಗೊಂಡ ಕೇಂದ್ರ ಆರೋಗ್ಯ ಸಚಿವ ಜೆ.ಪಿ ನಡ್ಡಾ ಅವರನ್ನು ಸತ್ಕರಿಸಲಾಯಿತು.

ಬೆಳಗಾವಿ: ವೈದ್ಯಕೀಯ ಹಾಗೂ ತಾಂತ್ರಿಕ ಕ್ಷೇತ್ರಗಳು ಉದಯೋನ್ಮುಖಗಳಿಗೆ ಹೆಚ್ಚು ಅವಕಾಶ ಕಲ್ಪಿಸುವ ಕ್ಷೇತ್ರವಾಗಿವೆ. ವೈದ್ಯಕೀಯ ವೃತ್ತಿಪರರು ಆಧಿನಿಕ ಎಐ ತಂತ್ರಜ್ಞಾನ ಬಳಸಿಕೊಳ್ಳುವ ಮೂಲಕ ವೈದ್ಯಕೀಯ ನವ್ಯೋದ್ಯಮಕ್ಕೆ ಸಹಕಾರಿಯಾಗಬೇಕೆಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ ನಡ್ಡಾ ಅಭಿಪ್ರಾಯಪಟ್ಟರು.

ಮಂಗಳವಾರ ನಡೆದ ಕೆಎಲ್‌ಇ ವಿಶ್ವವಿದ್ಯಾಲಯದ 15 ನೇ ಘಟಿಕೋತ್ಸ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು. ಇಂದು ದೇಶಾದ್ಯಂತ 1.75 ಲಕ್ಷ ಆಯುಷ್ಮಾನ್ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇವು ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ ಸಂಬಂಧಿಸಿದ ವಿವಿಧ ಸೇವೆಗಳನ್ನು ಒದಗಿಸುತ್ತಿವೆ. ಕಳೆದ 10 ವರ್ಷಗಳಲ್ಲಿ, ದೇಶಾದ್ಯಂತ 319 ವೈದ್ಯಕೀಯ ಮಹಾವಿದ್ಯಾಲಯಗಳು ಕಾರ್ಯಾರಂಭ ಮಾಡಿದ್ದು ಈಗ ಒಟ್ಟು 706 ಮಹಾವಿದ್ಯಾಲಯಗಳು ಕಾರ್ಯ ಮಾಡುತ್ತಿವೆ ಎಂದರು. ಕಳೆದ 10 ವರ್ಷಗಳಲ್ಲಿ ಎಂಬಿಬಿಎಸ್ ಹಾಗೂ ಸ್ನಾತಕೋತ್ತರ ಸೀಟುಗಳಲ್ಲಿ ಶೇ.130 ರಷ್ಟು ಹೆಚ್ಚಳವಾಗಿದೆ.ವೈದ್ಯಕೀಯ ವೃತ್ತಿಪರರು ಆಧುನಿಕ ಎಐ ತಂತ್ರಜ್ಞಾನವನ್ನು ಅಳವಡಿಸಿಕೊಂಡು. ವೈದ್ಯಕೀಯ ನವೋದ್ಯಮಕ್ಕೆ ಸಹಕಾರಿಯಾಗಬೇಕು. ವೈದ್ಯಕೀಯ ರಂಗದಲ್ಲಿ ಕೆಎಲ್‌ಇ ಸಂಸ್ಥೆ ಅತ್ಯುತ್ತಮ ಸೇವೆ ಸಲ್ಲಿಸುತ್ತಿದೆ. ತನ್ನ ಅಂಗ ಸಂಸ್ಥೆಗಳ ಮೂಲಕ ಗ್ರಾಮೀಣ ಭಾಗದ ಜನರ ಸೇವೆಯಲ್ಲಿ ನಿರಂತರವಾಗಿ ತೊಡಗಿದ್ದು ಸಂತಸದ ಕ್ಷಣ ಎಂದರು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿ, ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ಯುವಕರನ್ನು ಹೊಂದಿದ ದೇಶ ಭಾರತ. ವೈದ್ಯಕೀಯ ಸೀಟುಗಳನ್ನು ಹೆಚ್ಚಿಸುತ್ತ, ಆರ್ಥಿಕವಾಗಿ ಹಿಂದುಳಿದವರೂ ಕೂಡ ವೈದ್ಯರಾಗಬಹುದು ಎಂಬುದನ್ನು ಕೆಎಲ್‌ಇ ಮೂಲಕ ತೋರಿಸಿಕೊಡಲಾಗಿದೆ. ಅತ್ಯಂತ ಪಾರದರ್ಶಕವಾಗಿ ವೈದ್ಯಕೀಯ ಸೀಟುಗಳನ್ನು ಹಂಚಲಾಗುತ್ತಿದೆ ಎಂದ ಅವರು, ಸಪ್ತರ್ಷಿಗಳು ಸ್ಥಾಪಿಸಿದ ಸಂಸ್ಥೆಯನ್ನು ಡಾ. ಪ್ರಭಾಕರ ಕೋರೆ ಅವರು ಆಕಾಶದೆತ್ತರಕ್ಕೆ ಕೊಂಡೊಯ್ದಿದ್ದಾರೆ ಎಂದು ಶ್ಲಾಘಿಸಿದರು.

1844 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಬೆಳಗಾವಿಯ ಕೆಎಲ್‌ಇ ಆರೋಗ್ಯ ವಿಜ್ಞಾನ ವಿವಿಯಿಂದ 1844 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 40 ಪಿಎಚ್.ಡಿ, 29 ಪೋಸ್ಟ್ ಡಾಕ್ಟರಲ್ ಪದವಿ, 660 ಸ್ನಾತಕೋತ್ತರ ಪದವಿ, 1080 ಪದವಿ, 9 ಪಿಜಿ ಡಿಪ್ಲೊಮಾ, 11 ಡಿಪ್ಲೊಮಾ, 4 ಫೆಲೋಶಿಪ್ ಹಾಗೂ 11 ಸರ್ಟಿಫಿಕೇಟ್ ಕೋರ್ಸ್ ಪದವಿ ಪ್ರದಾನ ಮಾಡಲಾಯಿತು.

ಅರಣ್ಯ ಸಂರಕ್ಷಣೆ, ಸಂವರ್ಧನೆಗೆ ಕುಂಬ್ಳೆ ಬಲ

ಬೆಂಗಳೂರು: ವನ್ಯಜೀವಿ, ಅರಣ್ಯ ಸಂರಕ್ಷಣೆ ಮತ್ತು ಸಂವರ್ಧನೆಗೆ ಈಗ ಅನಿಲ್ ಕುಂಬ್ಳೆ ಬಲ ದೊರೆತಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಅರಣ್ಯ, ವನ್ಯಜೀವಿ ರಾಯಭಾರಿಯಾಗಿ ನಾಮ ನಿರ್ದೇಶನವಾದ ಬೆನ್ನಲ್ಲೇ ಅನಿಲ್ ಕುಂಬ್ಳೆ ಸಚಿವ ಈಶ್ವರ್ ಖಂಡ್ರೆ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ತಮ್ಮ ಲೆಗ್ ಸ್ಪಿನ್ ಮೋಡಿಯಿಂದ ಭಾರತ ತಂಡದ ಹಲವು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿರುವ ಕುಂಬ್ಳೆ ಅವರು ಕರ್ನಾಟಕ ಅಷ್ಟೇ ಅಲ್ಲ ಭಾರತದ ಹೆಮ್ಮೆಯ ಪುತ್ರರಾಗಿದ್ದಾರೆ. ಜಿಂ ಲೇಕರ್ ಬಳಿಕ ಟೆಸ್ಟ್ ಪಂದ್ಯ ಒಂದರಲ್ಲಿ ಎಲ್ಲ 10 ವಿಕೆಟ್ ಪಡೆದ ಸಾಧನೆ ಮಾಡೆದ ಮಾಂತ್ರಿಕ ಬೌಲರ್ ಆಗಿದ್ದಾರೆ. ವನ್ಯಜೀವಿ, ಅರಣ್ಯ, ಪರಿಸರದ ಬಗ್ಗೆ ಅಪಾರ ಕಾಳಜಿ ಮತ್ತು ಪ್ರೀತಿ ಹೊಂದಿರುವ ಅನಿಲ್ ಕುಂಬ್ಳೆ ಯಾವುದೇ ಸಂಭಾವನೆ ಇಲ್ಲದೆ ರಾಯಭಾರಿ ಆಗಲು ಸಮ್ಮತಿಸಿದ್ದಾರೆ ಇದು ಅವರ ಪರಿಸರ ಕಾಳಜಿ, ಬದ್ಧತೆಗೆ ಸಾಕ್ಷಿಯಾಗಿದೆ ಎಂದರು.

ಅರಣ್ಯ, ವನ್ಯಜೀವಿ ನೂತನ ರಾಯಭಾರಿಯಾಗಿ ಆಯ್ಕೆಯಾಗಿರುವ ಅನಿಲ್ ಕುಂಬ್ಳೆ ಅವರನ್ನು ಸಚಿವ ಈಶ್ವರ್ ಖಂಡ್ರೆ ತಮ್ಮ ನಿವಾಸದಲ್ಲಿ ಸನ್ಮಾನಿಸಿದರು.

ಕ್ರಿಕೆಟ್ ಜಗತ್ತಿನಲ್ಲಿ ಸ್ಪಿನ್ ಮಾಂತ್ರಿಕ ಎಂದು ಖ್ಯಾತಿ ಪಡೆದಿರುವ ಅನಿಲ್ ಕುಂಬ್ಳೆ ಅರಣ್ಯ, ವನ್ಯಜೀವಿ ರಾಯಭಾರಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಕರ್ನಾಟಕ ವನ್ಯಜೀವಿ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿರುವ ಇವರು ಅರಣ್ಯ, ವನ್ಯಜೀವಿ ಸಂರಕ್ಷಣೆಯ ಬಗ್ಗೆ ಪ್ರಚಾರ, ಪ್ರಸಾರ ಮಾಡಲಿದ್ದು, ಜನರಲ್ಲಿ ಜಾಗೃತಿ ಮೂಡಲಿದೆ ಎಂಬ ವಿಶ್ವಾಸವಿದೆ.
- ಈಶ್ವರ್ ಖಂಡ್ರೆ ಅರಣ್ಯ ಸಚಿವರು.

ಅರಣ್ಯ, ವನ್ಯಜೀವಿ ರಾಯಭಾರಿಯಾಗಿ ನೇಮಕ ಮಾಡಿರುವುದಕ್ಕೆ ಕರ್ನಾಟಕ ಸರಕಾರಕ್ಕೆ ಧನ್ಯವಾದ ಅರ್ಪಿಸುತ್ತೇನೆ. ಇಲಾಖೆಯ ಜತೆಗೂಡಿ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಅರಣ್ಯ, ವನ್ಯಜೀವಿ ಸಂರಕ್ಷಣೆ ಮತ್ತು ಸಂವರ್ಧನೆಗೆ ಶ್ರಮಿಸುತ್ತೇನೆ.
-ಅನಿಲ್ ಕುಂಬ್ಳೆ ಮಾಜಿ ಕ್ರಿಕೆಟಿಗ

ಜೂ.27ಕ್ಕೆ ಪುರಿ ಜಗನ್ನಾಥ ರಥ

ಪುರಿ: ಜಗನ್ನಾಥ ರಥಯಾತ್ರೆ, ಧಾರ್ಮಿಕ ವಿಧಿ ಜೂ. 27ರ ಆಷಾಡ ಶುಕ್ಲ ದ್ವಿತೀಯ ದಿನ ಜರುಗಲಿದೆ. ಜೂ.26ರಂದು ನಬ ಜೌಬನ್ ದರ್ಶನ ನಡೆಯಲಿದ್ದು, ಲಕ್ಷಾಂತರ ಭಕ್ತರು ಅಂದು ಪುರಿಯಲ್ಲಿ ಮೇಳೈಸಲಿದ್ದಾರೆ. ರಥಯಾತ್ರೆಯ ಧಾರ್ಮಿಕ ವಿಧಿವಿಧಾನಗಳು ದಶಮಿ ತಿಥಿಯ ಜುಲೈ 5ರವರೆಗೂ ಜರುಗಲಿವೆ. ಜೂ.11ರಂದು ಪುರಿ ಜಗನ್ನಾಥ ಸ್ವಾಮಿಗೆ ಪವಿತ್ರ ಸ್ನಾನಯಾತ್ರೆ ಆರಂಭಗೊಳ್ಳಲಿದೆ.

ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಾಂಸ್ಕೃತಿಕ ಸರಹದ್ದು ವಿಸ್ತರಿಸಿದೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಕ್ಷೇತ್ರದಿಂದಾಚೆಗೂ ತನ್ನ ಸಾಂಸ್ಕೃತಿಕ ಸರಹದ್ದನ್ನು ವಿಸ್ತರಿಸುತ್ತಿದೆ ಎಂದು ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಹೇಳಿದರು.

ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆದ ಎಂ.ಎಲ್.ಮಾದಯ್ಯ ದತ್ತಿ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಪರಿಷತ್ತು ಸಾಹಿತ್ಯ ಕ್ಷೇತ್ರದಿಂದಾಚೆಗೂ ತನ್ನ ಸಾಂಸ್ಕೃತಿಕ ಸರಹದ್ದನ್ನು ವಿಸ್ತರಿಸಿಕೊಳ್ಳುತ್ತಿದ್ದು, ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದ ಸಾಧಕರಿಗೆ ನೀಡುವ ಎಂ.ಎಲ್.ಮಾದಯ್ಯ ದತ್ತಿ ಪುರಸ್ಕಾರ ಅದಕ್ಕೆ ಸಾಕ್ಷಿಯಾಗಿದೆ. ಇಂಡಿಯನ್ ಇನ್ಸಿಟ್ಯೂಟ್ ಆಫ್ ಅರ್ಬಿಟ್ರೇಟರ್ಸ್ ಕರ್ನಾಟಕ ವಲಯದ ಅಧ್ಯಕ್ಷರಾಗಿದ್ದ ಎಂ.ಎಲ್.ಮಾದಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಮೇಲಿನ ಅಭಿಮಾನದಿಂದ ದತ್ತಿ ನಿಧಿಯನ್ನು ಸ್ಥಾಪಿಸಿ ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದವರಿಗೆ ಪುರಸ್ಕಾರ ನೀಡುವಂತೆ ಮಾಡಿದ್ದಾರೆ. ಕಸಾಪ ಸಂಸ್ಥಾಪನೆಗೆ ಕಾರಣಕರ್ತರಾದ ಸರ್. ಎಂ.ವಿಶ್ವೇಶ್ವರಯ್ಯ ಅವರು ಎಂಜಿನಿಯರ್ ಆಗಿ ದೊಡ್ಡ ಹೆಸರು ಪಡೆದವರು. ಕನ್ನಡ ಸಾಹಿತ್ಯ ಪರಿಷತ್ತು ಸಮಯ ಸಾಧಕರನ್ನು ದೂರವಿಟ್ಟು ನೈಜ ಸಾಧಕರನ್ನು ಗುರುತಿಸಿ ಪುರಸ್ಕಾರ ನೀಡುತ್ತಿದೆ, ಅದು ಬೇರೆಯವರಿಗೂ ಪ್ರೇರಣೆಯಾಗಿದೆ ಎಂದರು.

ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಎಂ.ಕೃಷ್ಣ ಅವರಿಗೆ ಎಂ.ಎಲ್.ಮಾದಯ್ಯ ದತ್ತಿ ಪುರಸ್ಕಾರ ಪ್ರದಾನ ಮಾಡಲಾಯಿತು. ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ, ಎಸ್.ರಾಮದಾಸ್. ನಾಡೋಜ ಡಾ. ವೂಡೇ.ಪಿ.ಕೃಷ್ಣ, ಡಾ.ಕೆ.ಪಿ.ಪುತ್ತೂರಾಯ, ಎಂ.ಎಸ್.ಮಾದಯ್ಯ, ಬಿ.ಎಂ.ಪಟೇಲ್ ಪಾಂಡು ಇದ್ದರು.

ಕಾರ್ಯಕ್ರಮದಲ್ಲಿ ಎಂ.ಕೃಷ್ಣ ಅವರಿಗೆ ಎಂ.ಎಲ್.ಮಾದಯ್ಯ ದತ್ತಿ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಲೋಕೋಪಯೋಗಿ ಇಲಾಖೆ ನಿವೃತ್ತ ಮುಖ್ಯ ಅಭಿಯಂತರರಾದ ಎಸ್.ರಾಮದಾಸ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ.ವೂಡೇ.ಪಿ.ಕೃಷ್ಣ, ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ವಿಶ್ರಾಂತ ನಿರ್ದೇಶಕ ಡಾ.ಕೆ.ಪಿ.ಪುತ್ತೂರಾಯ, ದತ್ತಿದಾನಿಗಳಾದ ಎಂ.ಎಸ್.ಮಾದಯ್ಯ, ಕಸಾಪ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು, ನೇ.ಭ.ರಾಮಲಿಂಗ ಶೆಟ್ಟಿ, ಗೌರವ ಕಾರ್ಯದರ್ಶಿ ಡಾ.ಪದ್ಮಿನಿ ನಾಗರಾಜು ಉಪಸ್ಥಿತರಿದ್ದರು.

ಆರು ವರ್ಷದ ಬಾಲಕಿ ಮೇಲೆ ಅತ್ಯಾಚಾರ

ಚಿಕ್ಕಬಳ್ಳಾಪುರ: 6 ವರ್ಷದ ಬಾಲಕಿ ಮೇಲೆ 55 ವರ್ಷದ ವ್ಯಕ್ತಿಯೊಬ್ಬ ಅತ್ಯಾಚಾರ ಎಸಗಿರುವ ಆರೋಪ ಕೇಳಿಬಂದಿದ್ದು, ಚಿಕ್ಕಬಳ್ಳಾಪುರ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಚಿಕ್ಕಬಳ್ಳಾಪುರ ನಗರದ ಶಮ್ಸ್ ಮಸೀದಿಯಾ ಕೊಠಡಿಯಲ್ಲಿ ಘಟನೆ ನಡೆದಿದೆ. ಮಸೀದಿಯೊಂದರ ಮೌಲ್ವಿಯ ತಂದೆ ಬಾಲಕಿಗೆ ಚಾಕೊಲೇಟ್ ಕೊಡಿಸುವುದಾಗಿ ಆಮಿಷವೊಡ್ಡಿ ಅತ್ಯಾಚಾರ ಎಸಗಿರುವುದಾಗಿ



ದೂರಿನಲ್ಲಿ ಉಲ್ಲೇಖಿಸಲಾಗಿದೆ. ಬಾಲಕಿಯ ತಾಯಿ ದೂರು ನೀಡಿದ ಬಳಿಕ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಸಂಬಂಧ ಆರೋಪಿ ಮಹಫ್ಯೂಸ್ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಯ ಮಗ ಬೇರೊಂದು ಮಸೀದಿಯಲ್ಲಿ ಮೌಲ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ಇದರಿಂದ ಮೌಲ್ವಿಯ ಆಶ್ರಯಕ್ಕೆ ಜಮಾತ್‌ನಿಂದ ಮಸೀದಿಯ ಕೊಠಡಿ ನೀಡಲಾಗಿತ್ತು. ಆದ್ರೆ, ಮಸೀದಿಯ ಕೊಠಡಿಯನ್ನು ದುರುಪಯೋಗ ಪಡಿಸಿಕೊಂಡು ಬಾಲಕಿ ಮೇಲೆ ಅತ್ಯಾಚಾರ ಮಾಡಲಾಗಿದೆ ಎಂದು ಬಾಲಕಿ ತಾಯಿ ಗಂಭೀರ ಆರೋಪ ಮಾಡಿದ್ದಾರೆ.

ಇನ್ನೂ ಆರೋಪಿ ಮಹಫ್ಯೂಸ್ ಮೂಲತಃ ಉತ್ತರ ಪ್ರದೇಶದವನು. 20 ವರ್ಷಗಳ ಹಿಂದೆ ಚಿಕ್ಕಬಳ್ಳಾಪುರಕ್ಕೆ ಬಂದು ಬೀದಿ ಬದಿ ಬಟ್ಟೆ ವ್ಯಾಪಾರ ಮಾಡಿಕೊಂಡಿದ್ದ. ಮಸೀದಿ ಬಳಿ ಆಟವಾಡಿಕೊಂಡಿದ್ದ ಬಾಲಕಿಗೆ ಆಮೀಷ ಹೊಡ್ಡಿ ಅತ್ಯಾಚಾರ ಎಸಗಿದ್ದಾನೆ ಎನ್ನಲಾಗಿದೆ. ಮಸೀದಿಯ ಮೌಲ್ವಿ ಸುಹೇಬ್‌ನನ್ನ ಸ್ಥಳಿಯರು ತರಾಟೆಗೆ ತೆಗೆದುಕೊಂಡಿದ್ದು, ಮೌಲ್ವಿ ಆಶ್ರಯಕ್ಕೆ ಕೊಠಡಿ ಪಡೆದು ತಂದೆಗೆ ಯ್ಯಾಕೆ ನೀಡಿದ್ದು, ಅಂತ ಬಾಲಕಿಯ ತಾಯಿ ಆರೋಪಿಗೆ ಹಿಗ್ಗಾ ಮುಗ್ಗಾ ತರಾಟೆ ತೆಗೆದುಕೊಂಡಿದ್ದಾರೆ.

ಆರ್‌ಸಿಬಿ ಗೆಲುವಿಗಾಗಿ ಬೆಂಗಳೂರಿನಿಂದ ತಿರುಪತಿಗೆ ಕಬ್ಜ ಶರಣು ಪಾದಯಾತ್ರೆ

ಕೊನೆಗೂ ಫಲಿಸಿದ ಆರ್‌ಸಿಬಿ ಅಭಿಮಾನಿ ಕೋರಿಕೆ

ದೇವೇಂದ್ರ, ಜಾಡಿ ಕಲಬುರಗಿ

ಐಪಿಎಲ್‌ನಲ್ಲಿ ಕಳೆದ 17 ಸೀಸನ್‌ಗಳಿಂದ ಹಲವು ಬಾರಿ ಫೈನಲ್ ಪ್ರವೇಶಿಸಿದ್ದ ಆರ್‌ಸಿಬಿ ಫೈನಲ್ ಕಪ್ ಗೆದ್ದಿರಲಿಲ್ಲ. ಕಲಬುರಗಿಯ ಅಭಿಮಾನಿಯೊಬ್ಬರ ವಿಶೇಷ ಹರಕೆ ಫಲಿಸಿದ್ದು, 18ನೇ ಸೀಸನ್‌ನಲ್ಲಿ ಫೈನಲ್ ಗೆದ್ದು, ಕಪ್ ನಮ್ದು ಎಂದು ತೋರಿಸಿಕೊಟ್ಟಿದೆ.

ಕಲಬುರಗಿಯ ಅಭಿಮಾನಿ ಕ್ವಾಲಿಫೈಯರ್‌ನಲ್ಲಿ ಆರ್‌ಸಿಬಿ ಗೆಲ್ಲಲೆಂದು ತಿರುಪತಿ ತಿಮ್ಮನಿಗೆ ಕಟ್ಟಿಕೊಂಡ ಹರಕೆಯನ್ನು ತೀರಿಸಿದ್ದಾರೆ. ಆರ್‌ಸಿಬಿಯ ಅಚ್ಚು ಮೆಚ್ಚಿನ ಅಭಿಮಾನಿ ಕಲಬುರಗಿ ಮೂಲದ ಕಬ್ಜ ಶರಣಬಸವಪ್ಪ ಅಲಿಯಾಸ್ ಕಬ್ಜ ಶರಣು ಎಂಬಾತ ಬೆಂಗಳೂರಿನಿಂದ ತಿರುಪತಿಗೆ ಪಾದಯಾತ್ರೆ ಮೂಲಕ ತೆರಳಿ ಹರಕೆ ತೀರಿಸಿದ್ದಾರೆ.

ಕ್ವಾಲಿಫೈಯರ್ ಪಂದ್ಯ 1 ರಲ್ಲಿ ಪಂಜಾಬ್ ವಿರುದ್ಧ ಆರ್‌ಸಿಬಿ ಗೆಲ್ಲಲೆಂದು ಹರಕೆ ಕೊಟ್ಟಿಕೊಂಡಿದ್ದರು. ಬೆಂಗಳೂರಿನಿಂದ 260 ಕಿ.ಮೀ ನಡೆದುಕೊಂಡೆ ತಿರುಪತಿಗೆ ತೆರಳಿ ತಿಮ್ಮಪ್ಪನ ದರ್ಶನ ಪಡೆದು ಫೈನಲ್‌ನಲ್ಲೂ ಆರ್‌ಸಿಬಿ ಗೆಲ್ಲಲೆಂದು ಕೋರಿಕೆ ಸಲ್ಲಿಸಿದ್ದರು. ಸದ್ಯ ಅಭಿಮಾನಿಯ ಹರಕೆ ಈಡೇರಿದ್ದು, ಆರ್‌ಸಿಬಿ ಫೈನಲ್ ಗೆದ್ದಿದೆ.



ಬಂದೆನವಾಜ್ ದರ್ಗಾದಲ್ಲಿ ಅಭಿಮಾನಿಗಳ ಪ್ರಾರ್ಥನೆ

ರಜತ್ ಪಾಟಿದಾರ್ ನೇತೃತ್ವದ ಆರ್‌ಸಿಬಿ ತಂಡ ಈ ಬಾರಿ ಕಪ್ ಗೆಲ್ಲಲಿ ಎಂದು ಪ್ರಾರ್ಥಿಸಿ ಶ್ರೇಷ್ಠ ಸೂಫಿ ಸಂತ ಖಾಜಾ ಬಂದೆನವಾಜ್ ದರ್ಗಾದಲ್ಲಿ ಯುವ ಕರು ಆರ್‌ಸಿಬಿ ಜೆರ್ಸಿ ಹಾಕಿಕೊಂಡು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಯುವಕನೋರ್ವ ತಲೆಯ ಮೇಲೆ ಹೂವಿನ ಬುಟ್ಟಿಯನ್ನು ಹೊತ್ತು ಮೊಣಕಾಲಿ ನಲ್ಲಿ ಮೆಟ್ಟಿಲುಗಳನ್ನು ಹತ್ತಿ ದರ್ಗಾ ಪ್ರವೇಶಿಸಿದರು. ಬಳಿಕ ಖಾಜಾ ಬಂದಾನವಾಜ್ ಸಮಾಧಿಗೆ ಹೂಗ ಳನ್ನು ಸಮರ್ಪಿಸಿ, ಆರ್‌ಸಿಪಿ ಕಪ್ ಗೆಲ್ಲಲಿ ಎಂದು ಪ್ರಾರ್ಥಿಸಿದರು. ಬಳಿಕ ದರ್ಗಾ ಆವರಣದಲ್ಲಿ ಜರ್ಸಿ ನಂ.18 ಅನ್ನು ಪ್ರದರ್ಶಿಸಿ ಘೋಷಣೆ ಕೂಗಿದರು.



ಕಳೆದ 18 ವರ್ಷದಿಂದ ಆರ್‌ಸಿಬಿ ಎಂದರೆ ತುಂಬಾ ಪ್ರೀತಿ. ಬೆಂಗಳೂರು ತಂಡದ ಗೆಲುವಿಗೆ ಏನು ಬೇಕಾದರೂ ಮಾಡಲು ಸಿದ್ದ. ಈಗಾಗಲೇ, ಅರ್ಧ ತಲೆ ಬೋಳಿಸಿ ದ್ದೇನೆ. ಪಾದಯಾತ್ರೆ ಮೂಲಕ ತಿರುಪ ತಿಗೆ ಹೋಗಿ ಸಂಪೂರ್ಣ ಮೂಡಿ ಕೊಟ್ಟಿದ್ದೇನೆ. 18 ವರ್ಷಗಳ ಬಳಿಕ ಐಪಿಎಲ್ ಕಪ್ ಗೆಲುವು ನನ್ನ ಶ್ರಮಕ್ಕೆ ಶಕ್ತಿ ಸಿಗಲಿದೆ.
- ಶರಣಬಸವಪ್ಪಾ, ಆರ್‌ಸಿಬಿ ಅಭಿಮಾನಿ

ಫೈನಲ್‌ಗಾಗಿ ಕೂದಲು ಮುಡಿಕೊಟ್ಟಿದ ಶರಣು

ಈ ವರ್ಷ ಐಪಿಎಲ್ ಶುರುವಾದಾಗಿನಿಂದಲೂ ತನ್ನ ಸೋಶಿಯಲ್ ಮೀಡಿಯಾ ಅಕೌಂಟ್‌ಗಳಲ್ಲಿ ಆರ್‌ಸಿಬಿಯ ಗೆಲುವಿಗಾಗಿ ಶರಣು ಒಂದಿಲ್ಲ ಒಂದು ಸವಾಲ್ ಸ್ವೀಕರಿಸುತ್ತಲೇ ಇದ್ದ. ಕ್ವಾಲಿಫೈಯರ್‌ನಲ್ಲಿ ಪಂಜಾಬ್ ವಿರುದ್ಧ ಬೆಂಗಳೂರು ಗೆದ್ದರೆ ತಿರುಪತಿಗೆ ನಡೆದುಕೊಂಡೇ ಹೋಗುತ್ತೇನೆ ಎಂದು ಹರಕೆ ಕಟ್ಟಿಕೊಂಡಿದ್ದ. ಅದರಂತೆ ಲೀಗ್ ಹಂತದ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಬೆಂಗಳೂರು ಸೋತ ಹಿನ್ನೆಲೆ ಅರ್ಧ ತಲೆ ಬೋಳಿಸಿಕೊಂಡು ಬೆಂಗಳೂರಿನ ಗಲ್ಲಿಗಲ್ಲಿಯಲ್ಲಿ ಓಡಾಡಿದ್ದರು. ಕ್ವಾಲಿಫೈಯರ್‌ನಲ್ಲಿ ಪಾದಯಾತ್ರೆ ಸವಾಲು ಸ್ವೀಕರಿಸಿ ಅರ್ಧ ತಲೆ ಕೂದಲಿನಲ್ಲೇ ತಿರುಪತಿಗೆ ತೆರಳಿದ್ದರು. ಮೇ. 30ರಂದು ಚಿನ್ನಸ್ವಾಮಿ ಕ್ರೀಡಾಂಗಣದಿಂದ ಪಾದಯಾತ್ರೆ ಕೈಗೊಂಡು 4 ದಿನದಲ್ಲೇ ತಿರುಪತಿ ತಲುಪಿ ಮುಡಿಕೊಟ್ಟು ಫೈನಲ್‌ನಲ್ಲೂ ಆರ್‌ಸಿಬಿ ಗೆಲ್ಲಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದ್ದರು.

ಆರಾಮ

ಉದ್ಯಮದ ಕ್ರಾಂತಿಪುರುಷ ಯಜ್ಞನಾರಾಯಣ ಕಮ್ಮಾಜೆ

ಸ್ವಂತ ಉದ್ಯಮ ಮಾಡಬೇಕೆನ್ನುವ ಕನಸನ್ನು ಸತತವಾಗಿ ಬೆಂಬತ್ತಿದ ಯಜ್ಞನಾರಾಯಣ ಕಮ್ಮಾಜೆ ಅವರು, ಸೋನಾ ಗ್ರೂಪ್ ಬ್ರ್ಯಾಂಡ್‌ನ್ನು ಸ್ಥಾಪಿಸಿ, ಯಶಸ್ಸು ಗಳಿಸಿದ್ದಾರೆ. ಮನಸ್ಸು, ಪರಿಶ್ರಮ, ಸಹೋದ್ಯೋಗಿಗಳನ್ನು ಒಳಗೊಳ್ಳುವಿಕೆ ಮತ್ತು ಸಹಕಾರದಿಂದ ಉದ್ಯಮವೊಂದನ್ನು ಹೇಗೆ ಮುನ್ನಡೆಸಬಹುದು ಎಂಬುದಕ್ಕೆ ಯಜ್ಞನಾರಾಯಣ ಕಮ್ಮಾಜೆ ಅವರ ಯಶಸ್ಸು ಒಂದು ಉದಾಹರಣೆ.

● ಕೇಶವ ಪ್ರಸಾದ್

ನಿಮ್ಮಲ್ಲಿ ಉದ್ಯಮಿಯಾಗಲೇಬೇಕು ಎಂಬ ಛಲವಿದ್ದರೆ, ಯಾರೂ ನಿಮ್ಮನ್ನು ತಡೆಯುವುದಿಲ್ಲ ಎಂಬುದಕ್ಕೆ ಖ್ಯಾತ ಉದ್ಯಮಿ ಯಜ್ಞ ನಾರಾಯಣ ಕಮ್ಮಾಜೆ ಅವರ ಯಶೋಗಾಥೆಯೇ ಅದ್ಭುತ ನಿದರ್ಶನ!

ಎಪ್ಪತ್ತರ ದಶಕದಲ್ಲಿ ಪ್ರತಿಷ್ಠಿತ ಎಚ್‌ಎಂಟಿ ಕಾರ್ಖಾನೆಯಲ್ಲಿ ಉದ್ಯೋಗಿಯಾಗಿದ್ದ ಅವರು, ಅಲ್ಲೇ ಮುಂದುವರಿದು ಬಡ್ತಿಗಳನ್ನು ಪಡೆದು ಹಿರಿಯ ಅಧಿಕಾರಿಯಾಗಿ ನಿವೃತ್ತರಾಗಬಹುದಿತ್ತು. ಆದರೆ ಅವರ ಮನಸ್ಸಿನಲ್ಲಿ ಅಂದೇ, ಮುಂದೊಂದು ದಿನ ಸ್ವಂತ ಬಿಸಿನೆಸ್ ಮಾಡಿ ಯಶಸ್ಸು ಗಳಿಸಲೇಬೇಕು ಎಂಬ ತುಡಿತ ಇತ್ತು! ಅದು ಅವರನ್ನು 1987ರಲ್ಲಿ ಸೋನಾ ಗ್ರೂಪ್ ಬ್ರ್ಯಾಂಡ್ ಅನ್ನು ಸ್ಥಾಪಿಸುವ ಮತ್ತು ಅಭೂತಪೂರ್ವ ಸಾಧನೆಯ ಶೃಂಗವನ್ನೇರುವ ಮೇರು ಉದ್ಯಮಿಯನ್ನಾಗಿಸಿತು.

ಅವರೀಗ ಬೆಂಗಳೂರು ಮೂಲದ ಸೋನಾ ಗ್ರೂಪ್ ಸಂಸ್ಥೆಯ ಅಧ್ಯಕ್ಷ ಮತ್ತು ಸಿಇಒ ಆಗಿ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಸೋನಾ ಗ್ರೂಪ್, ವಾಚುಗಳು ಮತ್ತು ವಾಚುಗಳ ಬಿಡಿಭಾಗಗಳನ್ನು ತಯಾರಿಸುವ ಪ್ರತಿಷ್ಠಿತ ಸಂಸ್ಥೆಯಾಗಿದೆ. ದೇಶ ವಿದೇಶಗಳ ವಾಚು ಉತ್ಪಾದಕ ಕಂಪನಿಗಳಿಗೆ ಅತ್ಯುನ್ನತ ಗುಣಮಟ್ಟದ ವೈವಿಧ್ಯಮಯ ಬಿಡಿಭಾಗಗಳನ್ನು ಪೂರೈಸುತ್ತದೆ. ವಾರ್ಷಿಕ 60 ಲಕ್ಷಕ್ಕೂ ಹೆಚ್ಚು ಲೆದರ್ ವಾಚ್ ಬೆಲ್ಟ್‌ಗಳು, 40 ಲಕ್ಷಕ್ಕೂ ಹೆಚ್ಚು ಸ್ಟೀಲ್ ಬೆಲ್ಟ್‌ಗಳು, 20 ಲಕ್ಷಕ್ಕೂ ಅಧಿಕ ಅಯಾನ್ ಪ್ಲೇಟೆಡ್ ಬೆಲ್ಟ್‌ಗಳನ್ನು ಉತ್ಪಾದಿಸುತ್ತದೆ.

ಕ್ವಾರ್ಟ್ಜ್ ತಂತ್ರಜ್ಞಾನ

1979-80ರಲ್ಲಿ ಜಪಾನ್‌ನಿಂದ ಸಿಟಿಜನ್ ವಾಚುಗಳ ಮೂಲಕ ಕ್ವಾರ್ಟ್ಜ್ ವಾಚ್ ತಂತ್ರಜ್ಞಾನವನ್ನು ಭಾರತಕ್ಕೆ ತರಿಸುವಲ್ಲಿ ಯಜ್ಞ ನಾರಾಯಣ ಪ್ರಮುಖ ಪಾತ್ರ ವಹಿಸಿದ್ದಾರೆ. ಆಗ ಅವರು ಎಚ್‌ಎಂಟಿಯ ವಾಚ್ ವಿಭಾಗದಲ್ಲಿದ್ದರು.

ಯಜ್ಞ ನಾರಾಯಣರಿಗೆ ಟ್ರೇಡ್ ಪೋಸ್ಟ್ ವತಿಯಿಂದ 2006ರಲ್ಲಿ 'ಟೆಕ್ನೊಕ್ರಾಟ್ ಆಫ್ ದಿ ಇಯರ್' ಹಾಗೂ 2010ರಲ್ಲಿ 'ಮೂವರ್ ಆಫ್ ಟೈಮ್' ಪ್ರಶಸ್ತಿ ಲಭಿಸಿದೆ. 2009ರಿಂದ 2023ರ ತನಕ ಕೆಟಗರಿ ವಿನ್ನರ್ ಅವಾರ್ಡ್ ಸಿಕ್ಕಿದೆ. ಟೈಟನ್ ಕಂಪನಿಯಿಂದ 2008ರಲ್ಲಿ 'ಔಟ್‌ಸ್ಟ್ಯಾಂಡಿಂಗ್ ಪರ್ಫಾರ್ಮೆನ್ಸ್ ಅವಾರ್ಡ್' ದೊರೆತಿದೆ.

ಕೌಶಲ ತರಬೇತಿ

ಅವರ ನೇತೃತ್ವದಲ್ಲಿ 25,000ಕ್ಕೂ ಹೆಚ್ಚು ಮಂದಿಗೆ ಕೌಶಲ ತರಬೇತಿ ನೀಡಲಾಗಿದೆ. ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಲು ಕುಣಿಗಲ್‌ನಲ್ಲಿ ವಾಚುಗಳ ಬಿಡಿಭಾಗಗಳ ತಯಾರಿಕಾ ಘಟಕವನ್ನು ಸ್ಥಾಪಿಸಲಾಗಿದೆ. ಆರ್ ಡಿ, ಉತ್ಪಾದನೆ ಮತ್ತು ಕಾರ್ಪೊರೇಟ್ ಪ್ಲಾನಿಂಗ್‌ನಲ್ಲಿ ಹಲವು ದಶಕಗಳ ವೃತ್ತಿಪರ ಅನುಭವ ಹೊಂದಿರುವ ಕಮ್ಮಾಜೆಯವರು ಶೈಕ್ಷಣಿಕವಾಗಿಯೂ ಅಪಾರ ಪ್ರತಿಭಾವಂತರಾಗಿದ್ದಾರೆ. ಇಂಡಸ್ಟ್ರಿಯಲ್ ಎಲೆಕ್ಟ್ರಾನಿಕ್ಸ್‌ನಲ್ಲಿ ಎಂ.ಟೆಕ್ ಮತ್ತು ಎಲೆಕ್ಟ್ರಿಕಲ್‌ನಲ್ಲಿ ಬಿ.ಇ. ಪದವಿಯನ್ನು ಅತ್ಯುನ್ನತ ಶ್ರೇಣಿಯಲ್ಲಿ ಗಳಿಸಿದ್ದಾರೆ.

ಗುರು ನರಸಿಂಹ ಕೃಪೆ

ಹಲವಾರು ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ. ಆರ್ಥಿಕವಾಗಿ ದುರ್ಬಲ ಕುಟುಂಬದ ಮಕ್ಕಳಿಗೆ ಶಿಕ್ಷಣಕ್ಕೆ ನೆರವು ನೀಡಿದ್ದಾರೆ. ಸಾಲಿಗ್ರಾಮದಲ್ಲಿ ಗುರು ನರಸಿಂಹ ದೇವಾಲಯದ ನವೀಕರಣದ ನಾಯಕತ್ವವನ್ನು ವಹಿಸಿದ್ದಾರೆ. ಕೂಟ ಮಹಾ ಜಗತ್ತಿನಲ್ಲಿ 30 ವರ್ಷಗಳಿಂದ ಸಕ್ರಿಯರಾಗಿದ್ದಾರೆ.

ಹಲವು ಪ್ರಶಸ್ತಿಗಳು

2009ರಲ್ಲಿ ಆರ್ಯಭಟ ಪ್ರಶಸ್ತಿ, ಎನ್‌ಐಟಿಕೆ ವತಿಯಿಂದ 2010ರಲ್ಲಿ ವಿಶಿಷ್ಟ ಸೇವಾ ಪ್ರಶಸ್ತಿ ಅವರಿಗೆ ಲಭಿಸಿದೆ.

ಯಜ್ಞ ನಾರಾಯಣ ಕಮ್ಮಜೆ ನಡೆದು ಬಂದ ಹಾದಿ ಅತ್ಯಂತ ಸ್ಫೂರ್ತಿದಾಯಕ. ಎಚ್‌ಎಂಟಿಯಲ್ಲಿ ಕಿರಿಯ ಎಂಜಿನಿಯರ್ ಆಗಿ ಉದ್ಯೋಗ ಆರಂಭಿಸಿದ್ದ ಕಮ್ಮಾಜೆಯವರಲ್ಲಿ ಸ್ವಂತ ಉದ್ಯಮಿಯಾಗಬೇಕು ಎಂಬ ಗುರಿ ಇತ್ತು. ಆದರೆ ಆ ಹಾದಿ ಸುಲಭವೇನೂ ಆಗಿರಲಿಲ್ಲ. 39ರ ವಯಸ್ಸಿನ ಯುವಕನಾಗಿದ್ದಾಗ, 58 ವರ್ಷ ಭರ್ತಿಯಾಗುವಾಗ ತಾವು ಏನಾಗಿರಬೇಕು ಎಂದು ಆಲೋಚಿಸಿದರು. ತಾನು ಬಹುಶಃ ಎರಡು ವರ್ಷಕ್ಕೊಮ್ಮೆ ಬಡ್ತಿ ಪಡೆದು ಮುಂದೊಂದು ದಿನ ಜನರಲ್ ಮ್ಯಾನೇಜರ್ ಆಗಬಹುದು, ಆದರೆ ಅದು ಅವರ ಗುರಿಯಾಗಿರಲಿಲ್ಲ. ಸ್ವತಃ ಉದ್ಯಮಿ ಆಗಬೇಕು ಎಂಬ ಹಂಬಲ ಅವರಲ್ಲಿತ್ತು. ಆದರೆ ಮನೆಯಲ್ಲಿ ಇಬ್ಬರು ಚಿಕ್ಕ ಮಕ್ಕಳು, ಮಧ್ಯಮ ಆದಾಯದ ಕುಟುಂಬ, ಸಾಧಾರಣ ಬ್ಯಾಂಕ್ ಬ್ಯಾಲೆನ್ಸ್ ಪರಿಸ್ಥಿತಿಯಲ್ಲಿ ಉದ್ಯಮಿಯಾಗುವುದು ಹೇಗೆ? ಎಂಬ ನಾನಾ ಪ್ರಶ್ನೆಗಳು ಇತ್ತು. ಬ್ಯಾಂಕ್ ಖಾತೆಯಲ್ಲಿ 20,000 ರುಪಾಯಿಗಿಂತ ಹೆಚ್ಚು ಹಣ ಇದ್ದಿರಲಿಲ್ಲ. ಇಬ್ಬರು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಒದಗಿಸಬೇಕು, ಇದಕ್ಕೆ ಏನಾದರೂ ಪರಿಹಾರ ಕಂಡುಕೊಳ್ಳಬೇಕು ಎಂಬ ಕನಸಿತ್ತು.

ಧೈರ್ಯದ ನಿರ್ಧಾರ

''ಆಗಿನ ಪರಿಸ್ಥಿತಿಯಲ್ಲಿ ಹೇಗೆ ಬಿಸಿನೆಸ್ ಶುರು ಮಾಡಿದೆ ಎಂಬುದೇ ಈಗ ಆಶ್ಚರ್ಯ ಮೂಡಿಸುತ್ತದೆ. ನಾವು 700 ಚದರ ಅಡಿಗಳ ಸಣ್ಣ ಮನೆಯಲ್ಲಿ ವಾಸಿಸುತ್ತಿದ್ದೆವು. ಉದ್ಯಮಿ ಆಗಲೇಬೇಕೆಂಬ ಉದ್ದೇಶದಿಂದ 39ನೇ ವಯಸ್ಸಿನಲ್ಲಿ ಯಾವುದೇ ಸ್ವಯಂ ಸೇವಾ ವಿವೃತ್ತಿಯ ಲಾಭ ಪಡೆಯದೆ, ಎಚ್‌ಎಂಟಿಗೆ ರಾಜೀನಾಮೆ ನೀಡಿದೆ. ಆಗ ಮಾರುಕಟ್ಟೆಯಲ್ಲಿ ಪೂರೈಕೆ-ಬೇಡಿಕೆಯ ವ್ಯತ್ಯಾಸವನ್ನು ಅವಲೋಕಿಸಿದೆ. ಮಾರುಕಟ್ಟೆಗೆ ಯಾವುದು ಹೆಚ್ಚು ಅಗತ್ಯ ಇದೆಯೋ, ಅದನ್ನು ಕಂಡುಕೊಂಡು ಸಣ್ಣದಾಗಿ ಉತ್ಪಾದಿಸಲು ಶುರು ಮಾಡಿದೆ'' ಎನ್ನುತ್ತಾರೆ ಅವರು.

ಯುವಕ ಕಮ್ಮಾಜೆಯವರು ತಂದೆಯ ಬಳಿ ಸ್ವಂತ ಬಿಸಿನೆಸ್ ಮಾಡಲು ಅನುಮೋದನೆ ಕೇಳಿದಾಗ, ಜಾತಕವನ್ನು ಪರಿಶೀಲಿಸಿದ ಆ ಹಿರಿಯರು, ಹೃತ್ಪೂರ್ವಕವಾಗಿ ಸಮ್ಮತಿಸಿದ್ದರು. ಬಳಿಕ ಎರಡು ಲಕ್ಷ ರುಪಾಯಿ ಆರಂಭಿಕ ಬಂಡವಾಳ ಸಂಗ್ರಹಿಸಲು ಆರು ತಿಂಗಳು ಹೋರಾಡಿದರು. ಬ್ಯಾಂಕ್‌ಗಳಿಗೆ ಅಲೆದಾಡಿದರು. ಪ್ರಾಜೆಕ್ಟ್ ರಿಪೋರ್ಟ್ ಕೊಟ್ಟರೂ ತಿರಸ್ಕೃತವಾಗಿತ್ತು. 'ಬ್ಯಾಂಕ್‌ಗಳು ಕೇಳುತ್ತಿದ್ದ ಅಡಮಾನ ಇಡಲು ನನ್ನ ಬಳಿ ಇದ್ದಿರಲಿಲ್ಲ. ಅದೃಷ್ಟವಶಾತ್ ಆರು ತಿಂಗಳಿನ ಹೋರಾಟದ ಬಳಿಕ ಇಂಡಿಯನ್ ಬ್ಯಾಂಕ್‌ನಲ್ಲಿ ಕೊನೆಗೂ ಎರಡು ಲಕ್ಷ ಸಾಲ ದೊರೆಯಿತು' ಎಂದು ಯಜ್ಞನಾರಾಯಣ ಕಮ್ಮಾಜೆ ನೆನಪಿಸಿಕೊಳ್ಳುತ್ತಾರೆ.

ಗೋಲ್ಡ್ ಪ್ಲೇಟಿಂಗ್ ಘಟಕ ಸ್ಥಾಪನೆ

' ನನಗೆ ಗುಜರಾತ್ ನಲ್ಲಿ ಒಬ್ಬ ಒಳ್ಳೆಯ ಸ್ನೇಹಿತನಿದ್ದ. ಆತನ ಬಳಿ ಗೋಲ್ಡ್ ಪ್ಲೇಟಿಂಗ್ ಘಟಕ ಇತ್ತು. ಆದರೆ ಅದನ್ನು ನಡೆಸುವಲ್ಲಿ ವಿಫಲನಾಗಿದ್ದ. ಆದ್ದರಿಂದ ಈ ಘಟಕವನ್ನು ನೀನೇ ತೆಗೆದುಕೊ. ಎರಡು ವರ್ಷಗಳ ಬಳಿಕ ಹಣ ನೀಡು ಎಂದು ಪ್ರಸ್ತಾಪ ಇಟ್ಟ. ನನಗೂ ಅದು ಉತ್ತಮ ಐಡಿಯಾ ಎನ್ನಿಸಿತು. ಲಾರಿಗಳಲ್ಲಿ ಆ ಹಳೆಯ ಯಂತ್ರೋಪಕರಣಗಳನ್ನು ತರಿಸಲಾಯಿತು. ಅದೊಂದು ದಿನ ಮೂವರು ವ್ಯಕ್ತಿಗಳು ನನ್ನನ್ನು ಕಚೇರಿಯಲ್ಲಿ ಭೇಟಿಯಾದರು. ಅವರೇ ರವಿ ಪ್ರಕಾಶ್, ರವಿ ಕುಮಾರ್ ಮತ್ತು ಶಶಿ. ಈ ತ್ರಿಮೂರ್ತಿಗಳು ತಂತ್ರಜ್ಞಾನದಲ್ಲಿ ಅತ್ಯಂತ ಅನುಭವಿಗಳಾಗಿದ್ದರು. ವಾಚುಗಳ ಬೆಲ್ಟ್‌ಗಳನ್ನು ತಯಾರಿಸುವ ತಂತ್ರಜ್ಞಾನದಲ್ಲಿ ಅಪಾರ ಪರಿಣತಿ ಗಳಿಸಿದ್ದರು. ಅವರು ಕಂಪನಿಯನ್ನು ಸೇರಿದರು. ಇವರೆಲ್ಲರೂ ಸ್ವಂತ ಕಂಪನಿಯಲ್ಲಿ ದುಡಿಯುತ್ತಿದ್ದೇವೆ ಎಂಬ ಸಮರ್ಪಣಾ ಭಾವದಿಂದ ಶ್ರಮಿಸಿದರು. ತಂತ್ರಜ್ಞಾನದ ದೃಷ್ಟಿಯಿಂದ ಕಂಪನಿಯ ಅದ್ಭುತ ಏಳಿಗೆಯಲ್ಲಿ ಇವರ ಕೊಡುಗೆ ದೊಡ್ಡದು. ಇದೇ ರೀತಿ ನಮ್ಮಲ್ಲ ಸಿಬ್ಬಂದಿ ವರ್ಗ ಕೂಡ ಅಪಾರ ಶ್ರದ್ಧೆಯಿಂದ ಸಂಸ್ಥೆಯ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

'ನೀವು ಸಮಾಜದಲ್ಲಿ ಏನಾದರೂ ಸಾಧಿಸಬೇಕಿದ್ದರೆ ಇತರರಿಗೆ ಸಹಕರಿಸಬೇಕು. ಆಗಿನ ಕಾಲದಲ್ಲಿ ಎಚ್‌ಎಂಟಿಯಿಂದ ಹೊರ ಬರದಿರುತ್ತಿದ್ದರೆ ಉದ್ಯಮಿಯಾಗಲು ಸಾಧ್ಯವಾಗುತ್ತಿರಲಿಲ್ಲ. ಹಲವಾರು ಮಂದಿಗೆ ಉದ್ಯೋಗಾವಕಾಶ ಕಲ್ಪಿಸಲು ಆಗುತ್ತಿರಲಿಲ್ಲ. ಪ್ರತಿಭಾವಂತ ಸಿಬ್ಬಂದಿಯೇ ಸಂಸ್ಥೆಯ ಅಮೂಲ್ಯ ಆಸ್ತಿಯಾಗಿದ್ದಾರೆ. ಜನರಿಗೆ ಅಗತ್ಯ ಕೌಶಲ ತರಬೇತಿ ನೀಡಬೇಕು. ಅದು ಅವರ ಬದುಕನ್ನು ಹಸನಾಗಿಸುತ್ತದೆ' ಎನ್ನುವುದು ಕಮ್ಮಾಜೆಯವರ ಸ್ವಾನುಭವದ ಮಾತು.

ಗ್ಲೋಬಲ್ ಅಚಿವರ್ಸ್ ಪ್ರಶಸ್ತಿ

ಜಾರ್ಜಿಯಾ ದೇಶದ ಟಿಬಿಲಿಸಿಯಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಸಮ್ಮೇಳನದಲ್ಲಿ ವಿಶ್ವವಾಣಿಯ ವತಿಯಿಂದ ಇವರಿಗೆ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಮಾಡಿ ಪುರಸ್ಕರಿಸಲಾಯಿತು. ಭಾರತ ಮತ್ತು ಜಾರ್ಜಿಯ ದೇಶಗಳ ಅನೇಕ ಗಣ್ಯಮಾನ್ಯರ ಉಪಸ್ಥಿತಿಯಲ್ಲಿ ಕಮ್ಮಾಜೆಯವರ ಔದ್ಯಮಿಕ ಮತ್ತು ಸಾಮಾಜಿಕ ಸಾಧನೆಗಳನ್ನು ಪ್ರತಿಬಿಂಬಿಸುವ ಕಿರು ಚಿತ್ರಗಳನ್ನು ಪ್ರದರ್ಶಿಸಲಾಯಿತು.

ವಾಚುಗಳ ಅಂತರಂಗ

1987ರಲ್ಲಿ ಒಂದು ಯುನಿಟ್‌ನೊಂದಿಗೆ ಆರಂಭವಾದ ಸೋನಾ ಗ್ರೂಪ್ ಇಂದು 5 ಯುನಿಟ್‌ಗಳಿಗೆ ವಿಸ್ತರಿಸಿದ್ದು, 1000ಕ್ಕೂ ಹೆಚ್ಚು ಸಿಬ್ಬಂದಿ ಬಲವನ್ನು ಹೊಂದಿದೆ. ವಾಚುಗಳ ಅಂತರಂಗ, ಬಹಿರಂಗವನ್ನು ಸೋನಾ ಗ್ರೂಪ್ ಅರಿತಿದೆ. ಟೈಟನ್ ಇಂಡಸ್ಟ್ರೀಸ್, ಟೈಮೆಕ್ಸ್, ಫೋಸಿಲ್ ಮೊದಲಾದ ದೇಶೀಯ ಮತ್ತು ಅಂತಾರಾಷ್ಟ್ರೀಯ ಬ್ರ್ಯಾಂಡ್‌ಗಳಿಗೆ ವಾಚುಗಳ ಬೆಲ್ಟ್, ಪಟ್ಟಿ ಸೇರಿದಂತೆ ಎಲ್ಲ ಬಿಡಿ ಭಾಗಗಳನ್ನು ಒದಗಿಸುತ್ತದೆ. ಮೆಟಲ್, ಲೆದರ್ ಮತ್ತು ಗೋಲ್ಡ್ ಪ್ಲೇಟೆಡ್ ಬಿಡಿಭಾಗಗಳನ್ನು ವಿತರಿಸುತ್ತದೆ. ದೇಶಾದ್ಯಂತ ಮಾರ್ಕೆಟಿಂಗ್ ಮತ್ತು ಸೇಲ್ಸ್ ನೆಟ್‌ವರ್ಕ್ ಅನ್ನು ವ್ಯವಸ್ಥೆಗೊಳಿಸಿದೆ.

18 ವರ್ಷಗಳ ತಪಸ್ಸಿಗೆ ಸಿಕ್ಕಿತು ವರ

ಫೋಟೋ: ಸುಧಾಕರ್ ದೇವರಾಜ್

ಬೆಂಗಳೂರಿನ ಗೋವಿಂದರಾಜನಗರ ಕ್ರೀಡಾಂಗಣದಲ್ಲಿ ಆರ್‌ಸಿಬಿ ಅಭಿಮಾನಿಗಳಿಂದ ಐಪಿಎಲ್ ಫೈನಲ್ ಪಂದ್ಯ ವೀಕ್ಷಣೆ

ಕೊಹ್ಲಿ ಆನಂದಭಾಷ್ಪ